ಸೋಮವಾರ, ಡಿಸೆಂಬರ್ 25, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 355 | ಪುಟ 12
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸರ್ಕಾರಕ್ಕೆ ಪಟ್ಟಿ ನೀಡಿದ ಲೋಕಾಯುಕ್ತ: 22 ಇಲಾಖೆಗಳಲ್ಲಿ 156 ಪ್ರಕರಣ ಬಾಕಿ

‘ಕುಬೇರ’ರ ವಿಚಾರಣೆಗಿಲ್ಲ ಅನುಮತಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ, ಭ್ರಷ್ಟಾಚಾರ, ಲಂಚ ಪ್ರಕರಣಗಳ ಆರೋಪ ಹೊತ್ತಿರುವ ಅಧಿಕಾರಿಗಳ ವಿಚಾರಣೆಗೆ ಸಂಬಂಧಪಟ್ಟ ಪ್ರಾಧಿಕಾರಗಳು ಅನುಮತಿಯನ್ನೇ ನೀಡುತ್ತಿಲ್ಲ. ಹೀಗಾಗಿ, ಸರ್ಕಾರಿ ಅಧಿಕಾರಿಗಳು ಮತ್ತು ನೌಕರರ ವಿಚಾರಣೆಗೆ ಮಂಜೂರಾತಿ ನೀಡುವಂತೆ ಸಂಬಂಧಿಸಿದ ಪ್ರಾಧಿಕಾರಗಳ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಮುಖ್ಯ ಕಾರ್ಯದರ್ಶಿಗೆ ಲೋಕಾಯುಕ್ತ ರಿಜಿಸ್ಟ್ರಾರ್ ಪತ್ರ ಬರೆದಿದ್ದಾರೆ.

ರಾಜ್ಯ ಸರ್ಕಾರದ 22 ಇಲಾಖೆಗಳಲ್ಲಿನ 156 ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಚಾರಣೆಗೆ ಅನುಮತಿ ನೀಡಬೇಕಾಗಿದೆ. ಆದ್ದರಿಂದ, ಈ ಪ್ರಕರಣಗಳಲ್ಲಿ ಆರೋಪಿಗಳ ವಿಚಾರಣೆ ನಡೆಸಲು ಸಾಧ್ಯವಾಗಿಲ್ಲ ಎಂದು ಲೋಕಾಯುಕ್ತ ರಿಜಿಸ್ಟ್ರಾರ್ ಪತ್ರದಲ್ಲಿ ತಿಳಿಸಿದ್ದಾರೆ.

ಈ ಪೈಕಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಅತಿ ಹೆಚ್ಚು ಅಂದರೆ, 36 ಪ್ರಕರಣಗಳಲ್ಲಿ ಮಂಜೂರಾತಿ ನೀಡಲು ಬಾಕಿಯಿದೆ. ನಂತರದ ಸ್ಥಾನದಲ್ಲಿ ಕಂದಾಯ ಇಲಾಖೆ (26) ಇದೆ. ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಹಜ್, ವಕ್ಫ್ ಅಭಿವೃದ್ಧಿ ಮತ್ತು ವಿಧಾನಸಭಾ ಸಚಿವಾಲಯವು ತಲಾ ಒಂದೊಂದು ಪ್ರಕರಣಗಳಲ್ಲಿ ಮಂಜೂರಾತಿ ನೀಡಬೇಕಿದೆ.

ಮಂಜೂರಾತಿಗೆ ಬಾಕಿ ಇರುವ ಪ್ರಕರಣಗಳ ವಿವರವಾದ ಮಾಹಿತಿ ನೀಡುವಂತೆ ಲೋಕಾಯುಕ್ತಕ್ಕೆ ರಾಜ್ಯ ಸರ್ಕಾರ (ಮುಖ್ಯ ಕಾರ್ಯದರ್ಶಿ) ಜುಲೈ 28ರಂದು ಪತ್ರ ಬರೆದಿತ್ತು. ಈ ಪತ್ರದಲ್ಲಿನ ಕೋರಿಕೆಯನ್ನು ಉಲ್ಲೇಖಿಸಿ ಆಗಸ್ಟ್ 15ರವರೆಗೆ ಮಂಜೂರಾತಿಗೆ ಬಾಕಿ ಇರುವ ಪ್ರಕರಣಗಳ ಇಲಾಖಾವಾರು ಪಟ್ಟಿಯನ್ನು ಲೋಕಾಯುಕ್ತ ಪೊಲೀಸ್ ಮಹಾ ನಿರ್ದೇಶಕರು ಸಲ್ಲಿಸಿದ್ದಾರೆ. ಈ ಪಟ್ಟಿಯನ್ನು ಲೋಕಾಯುಕ್ತ ರಿಜಿಸ್ಟ್ರಾರ್ ನ. 21ರಂದು ಮುಖ್ಯ ಕಾರ್ಯದರ್ಶಿಗೆ ನೀಡಿದ್ದಾರೆ. ಈ ಪಟ್ಟಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಸಿ ಲೋಕಾಯುಕ್ತದ ಬಲೆಗೆ ಬಿದ್ದ ‘ಕುಬೇರರು’ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಮುಖ್ಯ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಎಂಜಿನಿಯರ್, ಕಿರಿಯ ಎಂಜಿನಿಯರ್, ತಹಶೀಲ್ದಾರ್, ಶಿರಸ್ತೇದಾರ್, ಸರ್ವೇಯರ್, ಭೂಸ್ವಾಧೀನಾಧಿಕಾರಿಗಳು, ಲೆಕ್ಕಪರಿಶೋಧಕರು, ಉಪ ನೋಂದಣಾಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ), ಬಿಇಒ, ಜಿಲ್ಲಾ ಸರ್ಜನ್, ಜಿಲ್ಲಾ ಆಯುಷ್ ಅಧಿಕಾರಿ, ಹಿರಿಯ ಆರ್‌ಟಿಒ ಇನ್‌ಸ್ಪೆಕ್ಟರ್‌ಗಳು ಹೀಗೆ ಎಲ್ಲ ಸ್ತರಗಳಲ್ಲಿರುವ ಅಧಿಕಾರಿ, ನೌಕರರು ಇದ್ದಾರೆ.

ಪ್ರಕರಣ ದಾಖಲಾಗಿರುವ ಜಿಲ್ಲೆ, ಪೊಲೀಸ್ ಠಾಣೆ, ಅಪರಾಧ ಸಂಖ್ಯೆ, ಆರೋಪಿ ಸರ್ಕಾರಿ ಅಧಿಕಾರಿಯ ಹೆಸರು ಮತ್ತು ಹುದ್ದೆ, ಮಂಜೂರಾತಿಗೆ ಪ್ರಸ್ತಾವ ಸಲ್ಲಿಸಿದ ದಿನಾಂಕ, ಸಕ್ಷಮ ಪ್ರಾಧಿಕಾರದ ಯಾವ ಅಧಿಕಾರಿ ಬಳಿ ಪ್ರಸ್ತಾವ ಬಾಕಿಯಿದೆ ಎಂಬ ಎಲ್ಲ ಮಾಹಿತಿ ಈ ಪಟ್ಟಿಯಲ್ಲಿದೆ.

5ನೇ ಪುಟ ನೋಡಿ

‘ಮೂರು ತಿಂಗಳಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು’



‘ವಿಚಾರಣೆ ನಡೆಸಲು ಮಂಜೂರಾತಿಗೆ ಅನುಮತಿ ಕೋರಿ ಕಳುಹಿಸುವ ಪ್ರಕರಣಗಳಲ್ಲಿ ಸರ್ಕಾರ ಮೂರು ತಿಂಗಳಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು. ಸಕಾರಣ ನೀಡಿ ಇನ್ನೂ ಒಂದು ತಿಂಗಳು ವಿಳಂಬ ಮಾಡಬಹುದು. ಆದರೆ, ವರ್ಷಗಟ್ಟಲೆ ಬಾಕಿ ಇರಿಸಿಕೊಳ್ಳುವುದು ಸರಿಯಲ್ಲ’ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅಸಮಾಧಾನ ವ್ಯಕ್ತಪಡಿಸಿದರು.

‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು, ‘ತನಿಖಾಧಿಕಾರಿಗಳು ಎಲ್ಲ ಆಯಾಮಗಳನ್ನು ಪರಿಶೀಲಿಸಿ, ಮೇಲ್ನೋಟಕ್ಕೆ ಆರೋಪ ದೃಢಪಟ್ಟ ಪ್ರಕರಣಗಳ ಆರೋಪಿಗಳ ತನಿಖೆಗೆ ಮಂಜೂರಾತಿ ನೀಡುವಂತೆ ಕೋರಲಾಗುತ್ತದೆ. ಸರ್ಕಾರ ಸಮಂಜಸವಾದ ಕಾರಣ ತಿಳಿಸಿ ತಿರಸ್ಕರಿಸಬಹುದು. ಆದರೆ, ವಿನಾ ಕಾರಣ ತನ್ನ ಬಳಿ ಇಟ್ಟುಕೊಳ್ಳುವುದು ಸರಿಯಲ್ಲ. ಇತ್ತೀಚೆಗೆ ಎಲ್ಲ ಇಲಾಖೆಗಳ ಮುಖ್ಯಸ್ಥರನ್ನು ಕರೆಸಿ ಈ ಬಗ್ಗೆ ಸೂಚನೆ ನೀಡಲಾಗಿದೆ’ ಎಂದರು.

ಮಂಜೂರಾತಿಗೆ ಬಾಕಿ

ಇಲಾಖೆ	ಪ್ರಕರಣಗಳ ಸಂಖ್ಯೆ
ಲೋಕೋಪಯೋಗಿ	10
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ	04
ಕಂದಾಯ	26
ನಗರಾಭಿವೃದ್ಧಿ	17
ಇಂಧನ	10
ಆರೋಗ್ಯ ಮತ್ತು ಕುಟುಂಬ ಕಲ್ಯಾಣ	05
ಆರ್ಥಿಕ	02
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್	36
ಶಿಕ್ಷಣ	01
ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ	03
ಜಲಸಂಪನ್ಮೂಲ	04
ಸಾರಿಗೆ	05
ಸಣ್ಣ ನೀರಾವರಿ	02
ಗೃಹ	06
ಆಹಾರ ಮತ್ತು ನಾಗರಿಕ ಸರಬರಾಜು	14
ಹಿಂದುಳಿದ ವರ್ಗಗಳ ಕಲ್ಯಾಣ	02
ಮಹಿಳಾ ಮತ್ತು ಮಕ್ಕಳ ಕಲ್ಯಾಣ	01
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಅಭಿವೃದ್ಧಿ	01
ಕಾನೂನು ,ನ್ಯಾಯ ಮತ್ತು ಮಹಿಳಾ ಹಕ್ಕುಗಳು	02
ತೋಟಗಾರಿಕೆ ಮತ್ತು ರೇಷ್ಮೆ	02
ವಿಧಾನಸಭಾ ಸಚಿವಾಲಯ	01
ವಾಣಿಜ್ಯ ಮತ್ತು ಕೈಗಾರಿಕೆ	02
ಒಟ್ಟು	156



ವನಿತೆಯರ ವಿಜಯ

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ಮುಕ್ತಾಯವಾದ ಆಸ್ಟ್ರೇಲಿಯಾ ಮಹಿಳಾ ತಂಡದ ಎದುರಿನ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಗೆದ್ದ ಭಾರತ ತಂಡದ ಆಟಗಾರ್ತಿಯರು ಸಂಭ್ರಮಿಸಿದ ಕ್ಷಣ –ಎಎಫ್‌ಪಿ ಚಿತ್ರ

12

‘ನೆಲದಲ್ಲಿ ಕೂತು ಪಾಠ ಕೇಳುವುದಕ್ಕೆ ಕೊನೆ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ರಾಜ್ಯದ ಸರ್ಕಾರಿ, ಖಾಸಗಿ, ಅನುದಾನಿತ, ಅನುದಾನರಹಿತ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ನೆಲದ ಮೇಲೆ ಕೂತು ಪಾಠ ಕೇಳುವ ವ್ಯವಸ್ಥೆಗೆ ಕೊನೆ ಹಾಡುತ್ತೇವೆ. ಪೂರ್ವ ಸಿದ್ಧತೆ ಮಾಡಿಕೊಂಡು ಈ ಸಂಬಂಧ ಅಂತಿಮ ಆದೇಶ ಹೊರಡಿಸಲಾಗುವುದು. ಮುಂದಿನ ಶೈಕ್ಷಣಿಕ ವರ್ಷದಿಂದ ಇದು ಜಾರಿಗೊಳ್ಳಲಿದೆ’ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

‘ಇನ್ನು ಮುಂದೆ 1ರಿಂದ ಎಸ್ಎಸ್ಎಲ್‌ಸಿ ವರೆಗಿನ ವಿದ್ಯಾರ್ಥಿಗಳು ಬೆಂಚ್‌ಗಳ ಮೇಲೆ ಕುಳಿತೇ ಪಾಠ ಕೇಳಲಿದ್ದಾರೆ. ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಅಗತ್ಯ ಪೀಠೋಪಕರಣಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಸುದ್ದಿಗಾರರಿಗೆ ಭಾನುವಾರ ತಿಳಿಸಿದರು.

‘ಶಿಕ್ಷಣ ಸಂಸ್ಥೆಯವರು ವಿದ್ಯಾರ್ಥಿಗಳಿಂದ ಶೌಚಾಲಯ ಸ್ವಚ್ಛತೆ ಮಾಡಿಸುವಂತಿಲ್ಲ. ಈ ಅನಿಷ್ಟ ಪದ್ಧತಿ ಮತ್ತೊಮ್ಮೆ ಕಂಡು ಬಂದರೆ ಸಂಬಂಧಪಟ್ಟ ಶಾಲಾ ಮುಖ್ಯಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು. ಶಾಲಾ ಸ್ವಚ್ಛತಾ ಕಾರ್ಯಕ್ಕೆ ಸರ್ಕಾರದಿಂದಲೇ ಹೆಚ್ಚಿನ ಅನುದಾನ ಒದಗಿಸಲಾಗುವುದು’ ಎಂದರು.

‘ಜನವರಿ 12ರಂದು ಶಿವಮೊಗ್ಗದ ಫ್ರೀಡಂ ಪಾರ್ಕ್ ಆವರಣದಲ್ಲಿ ನಡೆಯುವ ಸಮಾರಂಭದಲ್ಲಿ ಯುವನಿಧಿ ಯೋಜನೆಗೆ ಅಧಿಕೃತವಾಗಿ ಚಾಲನೆ ನೀಡಲಾಗುವುದು’ ಎಂದೂ ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಿಯಮ ಉಲ್ಲಂಘನೆ: ಕ್ರೀಡಾ ಸಚಿವಾಲಯ ಕ್ರಮ

ಕುಸ್ತಿ: ಸಮಿತಿ ಅಮಾನತು

ನವದೆಹಲಿ (ಎಎಫ್‌ಪಿ): ಮೂರು ದಿನಗಳ ಹಿಂದಷ್ಟೇ ಚುನಾಯಿತಗೊಂಡಿದ್ದ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಆಡಳಿತ ಸಮಿತಿಯನ್ನು ಕೇಂದ್ರ ಕ್ರೀಡಾ ಸಚಿವಾಲಯವು ಭಾನುವಾರ ಅಮಾನತುಗೊಳಿಸಿದೆ.

15 ಮತ್ತು 19 ವರ್ಷದೊಳಗಿನವರ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್ ದಿನಾಂಕ ಘೋಷಣೆ ಮಾಡಿದ್ದ ಸಮಿತಿಯ ಕ್ರಮವು ನಿಯಮಬಾಹಿರವಾಗಿದೆ ಎಂದಿರುವ ಸಚಿವಾಲಯವು ಈ ಕ್ರಮ ಕೈಗೊಂಡಿದೆ. ಮುಂದಿನ ಆದೇಶದವರೆಗೆ ಎಲ್ಲಾ ಚಟುವಟಿಕೆಗಳನ್ನೂ ಸ್ಥಗಿತಗೊಳಿಸಲು ಡಬ್ಲ್ಯುಎಫ್‌ಐಗೆ ಸೂಚನೆ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ನಿಕಟವರ್ತಿ ಎನ್ನಲಾಗಿರುವ ಸಂಜಯ್ ಸಿಂಗ್ ಅಧ್ಯಕ್ಷರಾಗಿ ಆಯ್ಕೆಯಾದ ಕೆಲವೇ ದಿನಗಳಲ್ಲಿ ಈ ಬೆಳವಣಿಗೆ ನಡೆದಿದೆ.

11 ನೇ ಪುಟ ನೋಡಿ

ಅಡ್‌ಹಾಕ್ ಸಮಿತಿ: ಐಒಎಗೆ ಮನವಿ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್‌ನ ಹೊಸ ಆಡಳಿತ ಮಂಡಳಿ ಅಮಾನತುಗೊಂಡ ಬೆನ್ನಲ್ಲೇ ಕ್ರೀಡಾ ಸಚಿವಾಲಯವು ಭಾನುವಾರ ಭಾರತ ಒಲಿಂಪಿಕ್ ಸಂಸ್ಥೆಗೆ (ಐಒಎ) ಡಬ್ಲ್ಯುಎಫ್‌ಐ ವ್ಯವಹಾರ ನಿರ್ವಹಣೆಗೆ ಅಡ್‌ಹಾಕ್ (ತಾತ್ಕಾಲಿಕ) ಸಮಿತಿ ರಚಿಸುವಂತೆ ಕೇಳಿದೆ. ಆದಷ್ಟು ಬೇಗ ಸಮಿತಿ ರಚಿಸುವಂತೆ ಸಚಿವಾಲಯವು ಐಒಎಗೆ ಪತ್ರ ಬರೆದಿದೆ.

‘ಡಬ್ಲ್ಯುಎಫ್‌ಐನ ಮಾಜಿ ಪದಾಧಿಕಾರಿಗಳ ಪ್ರಭಾವ ಮತ್ತು ನಿಯಂತ್ರಣದಿಂದ ಉದ್ಭವಿಸುವ ಪ್ರಸ್ತುತ ಪರಿಸ್ಥಿತಿ ಗಮನಿಸಿದರೆ, ಡಬ್ಲ್ಯುಎಫ್‌ಐನ ಆಡಳಿತ ಮತ್ತು ಸಮಗ್ರತೆ ಬಗ್ಗೆ ಗಂಭೀರ ಕಳವಳಗಳು ಹುಟ್ಟಿಕೊಂಡಿವೆ’ ಎಂದು ಸರ್ಕಾರದ ಅಧೀನ ಕಾರ್ಯದರ್ಶಿ ತರುಣ್ ಪಾರಿಕ್ ಅವರು ಸಹಿ ಮಾಡಿದ ಪತ್ರದಲ್ಲಿ ತಿಳಿಸಲಾಗಿದೆ.

‘ಕ್ರೀಡಾ ಸಂಸ್ಥೆಗಳಲ್ಲಿ ಉತ್ತಮ ಆಡಳಿತದ ತತ್ವ ಎತ್ತಿಹಿಡಿಯಲು ತಕ್ಷಣದ ಕ್ರಮಗಳ ಅಗತ್ಯವಿದೆ. ಆದ್ದರಿಂದ, ಕುಸ್ತಿಪಟುಗಳು ಯಾವುದೇ ರೀತಿಯಲ್ಲಿ ತೊಂದರೆ ಅನುಭವಿಸದಂತೆ ಮತ್ತು ಕ್ರೀಡಾ ಸಂಸ್ಥೆಯಲ್ಲಿ ಉತ್ತಮ ಆಡಳಿತದ ತತ್ವಕ್ಕೆ ಧಕ್ಕೆಯಾಗದಂತೆ ಡಬ್ಲ್ಯುಎಫ್‌ಐನ ವ್ಯವಹಾರಗಳನ್ನು ನಿರ್ವಹಿಸಲು ಸೂಕ್ತ ವ್ಯವಸ್ಥೆ ಮಾಡುವುದು ಈಗ ಐಒಎ ಕರ್ತವ್ಯವಾಗಿದೆ’ ಎಂದು ಐಒಎ ಅಧ್ಯಕ್ಷೆ ಪಿ.ಟಿ.ಉಷಾ ಅವರಿಗೆ ಬರೆದ ಪತ್ರದಲ್ಲಿ ತರುಣ್ ತಿಳಿಸಿದ್ದಾರೆ.

> **ನಿರ್ಧಾರ ತೆಗೆದುಕೊಳ್ಳುವಾಗ ನಿಯಮಗಳನ್ನು ಉಲ್ಲಂಘಿಸಿಲ್ಲ. ಹಾಗಾಗಿ ಅಮಾನತು ಆದೇಶ ವಾಪಸ್ ಪಡೆಯುವಂತೆ ಸರ್ಕಾರವನ್ನು ಕೋರುತ್ತೇವೆ. ಸಮಸ್ಯೆ ಬಗೆಹರಿಯದಿದ್ದರೆ ಕೋರ್ಟ್ ಮೊರೆ ಹೋಗುತ್ತೇವೆ**
> **ಸಂಜಯ್ ಸಿಂಗ್,** ಡಬ್ಲ್ಯುಎಫ್‌ಐನ ಅಮಾನತಾದ ಸಮಿತಿಯ ಅಧ್ಯಕ್ಷ

ವೀರಶೈವ-ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನ ಸಮಾರೋಪ

‘ಬಸವಣ್ಣ ಸಾಂಸ್ಕೃತಿಕ ನಾಯಕನೆಂದು ಘೋಷಿಸಿ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ರಾಜ್ಯ ಸರ್ಕಾರವು ಬಸವಣ್ಣ ಅವರನ್ನು ರಾಜ್ಯದ ‘ಸಾಂಸ್ಕೃತಿಕ ನಾಯಕ’ ಎಂದು ಅಧಿಕೃತವಾಗಿ ಘೋಷಿಸಬೇಕು. ವೀರಶೈವ–ಲಿಂಗಾಯತ ಸಮುದಾಯದ ಎಲ್ಲಾ ಒಳ ಪಂಗಡಗಳನ್ನೂ ಒಬಿಸಿ ಪಟ್ಟಿಗೆ ಸೇರಿಸಬೇಕು. ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರ ನಿವಾಸದ ಸ್ಥಳದಲ್ಲಿ ಸ್ಮಾರಕ ನಿರ್ಮಿಸಬೇಕು’ ಎಂಬುದು ಸೇರಿದಂತೆ ಒಟ್ಟು 8 ನಿರ್ಣಯಗಳನ್ನು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನದಲ್ಲಿ ಮಂಡಿಸಲಾಯಿತು.

ನಗರದ ಬಾಪೂಜಿ ಎಂ.ಬಿ.ಎ. ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಮಹಾಧಿವೇಶನದ ಸಮಾರೋಪ ಸಮಾರಂಭಕ್ಕೂ ಮುನ್ನಾ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ನಿರ್ಣಯಗಳನ್ನು ಓದಿದರು. ಆಗ ಅಲ್ಲಿದ್ದವರು ಎದ್ದು ನಿಂತು ಚಪ್ಪಾಳೆ ತಟ್ಟುವ ಮೂಲಕ ಅನುಮೋದಿಸಿದರು.



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನದ ಸಮಾರೋಪ ಸಮಾರಂಭವನ್ನು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌.ಯಡಿಯೂರಪ್ಪ ಉದ್ಘಾಟಿಸಿದರು. (ಎಡದಿಂದ) ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ದೇವರಮನೆ ಶಿವಕುಮಾರ್, ಸಚಿವರಾದ ಲಕ್ಷ್ಮಿ ಹೆಬ್ಬಾಳಕರ, ಈಶ್ವರ ಖಂಡ್ರೆ, ಪಾಂಡೋಮಟ್ಟಿಯ ಗುರುಬಸವ ಸ್ವಾಮೀಜಿ, ಶಾಮನೂರು ಶಿವಶಂಕರಪ್ಪ, ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಉಜ್ಜಯಿನಿ ಪೀಠದ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಶಾಸಕ ಮಹೇಶ್ ಟೆಂಗಿನಕಾಯಿ ಹಾಗೂ ಇತರರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಸಮುದಾಯದ ಅಧಿಕಾರಿಗಳಿಗೆ ಸೂಕ್ತ ಸ್ಥಾನಮಾನ ನೀಡಲಾಗುತ್ತಿಲ್ಲ ಎಂಬ ಮಾತು ಕೇಳಿ ಬಂದಿದೆ. ಸಮಾಜದ ಅಧಿಕಾರಿಗಳು ಕಾಯಕವೇ ಕೈಲಾಸ ತತ್ವದಲ್ಲಿ ನಂಬಿಕೆ ಇಟ್ಟವರು. ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡಿ ಸರ್ಕಾರಕ್ಕೆ ಒಳ್ಳೆ ಹೆಸರು ತಂದಿದ್ದಾರೆ. ಅವರಿಗೆ ಸೂಕ್ತ ಸ್ಥಾನಮಾನ ದೊರಕಿಸಿಕೊಡಲು ಸಚಿವರು ಪ್ರಯತ್ನಿಸಬೇಕು’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಸಲಹೆ ನೀಡಿದರು.

5ನೇ ಪುಟ ನೋಡಿ

ಸೋಮವಾರದ ಉಷ್ಣಾಂಶ 29° ಗರಿಷ್ಠ 15° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮುಂಜಾನೆ ಮಂಜು ಕವಿದ ವಾತಾವರಣ ಇರಲಿದೆ. ರಾತ್ರಿ ವೇಳೆ ಚಳಿ ಹೆಚ್ಚಿರಲಿದೆ

ಮುನ್ನೋಟ: ಮಂಗಳವಾರ 28° 17° | ಬುಧವಾರ 28° 17° | ಗುರುವಾರ 29° 16°



ವಿದ್ಯುತ್ ದೀಪಗಳಿಂದ ಅಲಂಕೃತವಾಗಿರುವ ಶಿವಾಜಿನಗರದ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್‌ನಲ್ಲಿ ಭಾರಿ ಸಂಖ್ಯೆಯಲ್ಲಿ ನೆರೆದಿರುವ ಯೇಸು ಅನುಯಾಯಿಗಳು —ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್





ಶಿವಾಜಿನಗರದ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್‌ನಲ್ಲಿ ಧರ್ಮಗುರು ಮಾರ್ಟಿಕ್ ಕುಮಾರ್ ಅವರು ಬಾಲ ಯೇಸು ಮೂರ್ತಿಯನ್ನು ತೊಟ್ಟಿಲಲ್ಲಿ ಇರಿಸಿದರು (ಎಡ ಚಿತ್ರ). ಕ್ರಿಸ್‌ಮಸ್ ಪ್ರಯುಕ್ತ ಮಣಿಪಾಲ್ ಆಸ್ಪತ್ರೆ ವತಿಯಿಂದ ಸೆಂಟಾ ಕ್ಲಾಸ್ ವೇಷಧಾರಿಗಳು ನಗರದಲ್ಲಿ ಹಿರಿಯ ನಾಗರಿಕರಿಗೆ ಉಡುಗೊರೆಗಳನ್ನು ನೀಡಿದರು

ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸುತ್ತಿರುವ ವಿವಿಧ ಚರ್ಚ್‌ಗಳು

ಕ್ರಿಸ್‌ಮಸ್ ಸಂಭ್ರಮಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಕ್ಕೆ ಶಾಂತಿ ಸಂದೇಶ ಸಾರುವ ಕ್ರಿಸ್‌ಮಸ್ ಆಚರಣೆಗೆ ನಗರದ ಚರ್ಚ್‌ಗಳು ವಿದ್ಯುತ್ ದೀಪಾಲಂಕಾರಗಳೊಂದಿಗೆ ಸಜ್ಜುಗೊಂಡಿವೆ. ಭಾನುವಾರದ ವಿಶೇಷ ಪ್ರಾರ್ಥನೆಗಳನ್ನು ಸಲ್ಲಿಸಲಾಯಿತು. ಮಕ್ಕಳ ಕ್ರಿಸ್‌ಮಸ್ ಆಚರಿಸಲಾಯಿತು.

ಶಿವಾಜಿನಗರದ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್‌ನಲ್ಲಿ ಭಾನವಾರವೇ ಜನ ಜಾತ್ರೆ ನೆರೆದಿತ್ತು. ಯೇಸುವಿನ ಜೀವನ ಬಿಂಬಿಸುವ ಗೋದಲಿ ಪ್ರದರ್ಶನವನ್ನು ಲಕ್ಷಾಂತರ ಮಂದಿ ವೀಕ್ಷಿಸಿದರು.

ಫ್ರೇಜರ್ ಟೌನ್‌ನ ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಕೆಥೆಡ್ರಲ್ ಚರ್ಚ್, ಬ್ರಿಗೇಡ್ ರಸ್ತೆ ಬಳಿಯ ಸೇಂಟ್ ಪ್ಯಾಟ್ರಿಕ್ಸ್ ಚರ್ಚ್, ಸೇಂಟ್ ಮಾರ್ಕ್ಸ್ ಕೆಥೆಡ್ರಲ್, ಚಾಮರಾಜಪೇಟೆಯ ಸೇಂಟ್ ಜೋಸೆಫ್ಸ್ ಚರ್ಚ್, ಸೇಂಟ್ ಜಾನ್ಸ್ ಚರ್ಚ್ ಸೇರಿದಂತೆ ಅನೇಕ ಚರ್ಚ್‌ಗಳಲ್ಲಿ 'ದೇವಪುತ್ರ' ಯೇಸು ಕ್ರಿಸ್ತರ ಜನ್ಮ ದಿನಾಚರಣೆಗೆ ಸಂಭ್ರಮದಿಂದ ಸಿದ್ಧಗೊಂಡಿವೆ.

'ಕ್ಯಾರೆಲ್ಸ್' ಇಂಪು: ಎಲ್ಲ ಚರ್ಚ್‌ಗಳಲ್ಲಿ ಬೃಹದಾಕಾರದ ನಕ್ಷತ್ರಗಳು, ಕ್ರಿಸ್‌ಮಸ್ ವೃಕ್ಷಗಳು, ಬಣ್ಣ ಬಣ್ಣದ ಬಲೂನುಗಳು, ಘಂಟೆಗಳು ಹಾಗೂ ಸೆಂಟಾ ಕ್ಲಾಸ್ ಪ್ರತಿರೂಪಗಳು ಗಮನಸೆಳೆಯುತ್ತಿವೆ. ತಂಗಾಳಿಯಂತೆ ತೇಲಿ ಬರುವ 'ಕ್ಯಾರೆಲ್ಸ್' (ಹರ್ಷ ಗೀತೆಗಳು) ಕಿವಿಗೆ ಇಂಪು ನೀಡುತ್ತಿವೆ.

ಕ್ರೈಸ್ತ ಸಮುದಾಯದ ಮನೆಗಳಲ್ಲಿಯೂ ಸಂಭ್ರಮ ಮನೆ ಮಾಡಿದೆ. ಮನೆಗಳ ಮೇಲೆ ನಕ್ಷತ್ರಗಳು ವಿದ್ಯುತ್ ದೀಪಗಳೊಂದಿಗೆ ಕಂಗೊಳಿಸುತ್ತಿವೆ.

ಬಗೆಬಗೆಯ ತಿನಿಸು: ಹಬ್ಬಕ್ಕಾಗಿ ಕೇಕ್, ಕುಕ್ಕೀಸ್ ಸೇರಿದಂತೆ ವೈವಿಧ್ಯಮಯ ತಿಂಡಿಗಳನ್ನು ಸಿದ್ಧಪಡಿಸಲಾಗಿದೆ. ಬಗೆಬಗೆಯ ಖಾದ್ಯಗಳನ್ನು ತಯಾರಿಸಿ ಬಂಧು, ಮಿತ್ರರನ್ನು ಆಹ್ವಾನಿಸುವುದು ವಾಡಿಕೆ. ಧರ್ಮಾತೀತವಾಗಿ ತಮ್ಮ ಬಳಗವನ್ನು ಮನೆಗೆ ಕರೆದು ಭರ್ಜರಿ ಭೋಜನ ನೀಡಲು ತಯಾರಿಯೂ ನಡೆದಿದೆ ಎಂದು ಕಾಕ್ಸ್‌ಟೌನ್‌ನ ಕ್ಸೇವಿಯರ್ ತಿಳಿಸಿದರು.

ಸುದ್ದಿ 2 ನಿಮಿಷ

ಕಾಂಗ್ರೆಸ್ ಕಲುಷಿತ ಮನಸ್ಸಿನ ಪಕ್ಷ 'ಎಕ್ಸ್‌'ನಲ್ಲಿ ಜೆಡಿಎಸ್ ಟೀಕೆ

ಬೆಂಗಳೂರು: ಕಲುಷಿತ ಮನಸ್ಸಿನ ಪಕ್ಷವಾಗಿರುವ ಕಾಂಗ್ರೆಸ್, ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರು ಕಲ್ಲಡ್ಕ ಪ್ರಭಾಕರ ಭಟ್ ನೇತೃತ್ವದ ಶಾಲೆಗೆ ಭೇಟಿ ನೀಡಿದ್ದನ್ನು ತಿರುಚಲು ಹೊರಟಿದೆ ಎಂದು ಜೆಡಿಎಸ್ ಟೀಕಿಸಿದೆ.

ಕುಮಾರಸ್ವಾಮಿ ಅವರು ಆರ್‌ಎಸ್‌ಎಸ್ ಮುಖಂಡ ಪ್ರಭಾಕರ ಭಟ್ ನೇತೃತ್ವದ ಶಾಲೆಯ ಸಮಾರಂಭದಲ್ಲಿ ಪಾಲ್ಗೊಂಡಿದ್ದನ್ನು ಟೀಕಿಸಿ ಕೆಪಿಸಿಸಿಯ ಅಧಿಕೃತ 'ಎಕ್ಸ್' ಖಾತೆಯಲ್ಲಿ ಮಾಡಿದ್ದ ಟೀಕೆಗೆ ಜೆಡಿಎಸ್‌ನ ಅಧಿಕೃತ 'ಎಕ್ಸ್' ಖಾತೆಯಲ್ಲೇ ಭಾನುವಾರ ಪ್ರತಿಕ್ರಿಯೆ ನೀಡಿದ್ದು, ಕಾಂಗ್ರೆಸ್ ಪಕ್ಷವು ತುಷ್ಟೀಕರಣದ ಅಂಟು ವ್ಯಾಧಿಯಿಂದ ಬಳಲುತ್ತಿದೆ. ಆ ಪಕ್ಷಕ್ಕೆ ಮಾರಣ ಹೋಮದಲ್ಲಿಯೇ ನಂಬಿಕೆ ಇದೆ. ವಿದೇಶಿ ವಂಶವಾಹಿಯನ್ನು ಹೊಂದಿರುವ ಕಾಂಗ್ರೆಸ್ ಪಕ್ಷ ಯಾವತ್ತೂ ಭಾರತೀಯತೆಯನ್ನು ಒಪ್ಪುವುದಿಲ್ಲ. ದೇಶ ಒಡೆದ ಪಕ್ಷಕ್ಕೆ ಹಿಂದುತ್ವವೂ ರುಚಿಸುವುದಿಲ್ಲ. ಕಲ್ಲಡ್ಕ ಶಾಲೆಗೆ ಕುಮಾರಸ್ವಾಮಿ ಅವರು ಮುಕ್ತ ಮನಸ್ಸಿನಿಂದ ಭೇಟಿ ನೀಡಿದ್ದರು. ಅಲ್ಲಿನ ಶೈಕ್ಷಣಿಕ ವಾತಾವರಣ, ಮಕ್ಕಳ ಶಿಸ್ತು, ದೇಶಪ್ರೇಮವನ್ನು ಕಂಡು ಅವರ ಮನಸ್ಸಿನಲ್ಲಿ ಪರಿವರ್ತನೆ ಆಗಿದ್ದರೆ ಅದೇನು ಮಹಾಪರಾಧವೆ ಎಂದು ಜೆಡಿಎಸ್ ಪ್ರಶ್ನಿಸಿದೆ.

ಶೇಷಗಿರಿ ದಂಡಾಪುರ್‌ಗೆ 'ಸುರ್‌ಬಹಾರ್ ಪುರಸ್ಕಾರ್' ಪ್ರದಾನ



ಬೆಂಗಳೂರು: ಸಂಗೀತ ಪಾಠಶಾಲೆಯ ಮೂಲಕ ನೂರಾರು ವಿದ್ಯಾರ್ಥಿಗಳನ್ನು ಸಂಗೀತ ಕ್ಷೇತ್ರಕ್ಕೆ ಪರಿಚಯಿಸಿದ ಧಾರವಾಡದ ಸಂಗೀತಗಾರ ಪಂಡಿತ್ ಶೇಷಗಿರಿ ದಂಡಾಪುರ್ ಅವರಿಗೆ ನಗರದಲ್ಲಿ ಭಾನುವಾರ 'ಸುರ್‌ಬಹಾರ್ ಸಂಗೀತ್ ಪುರಸ್ಕಾರ್' ಪ್ರದಾನ ಮಾಡಲಾಯಿತು.

ಸಿಎಂಆರ್ ಜ್ಞಾನಧಾರಾ ಟ್ರಸ್ಟ್ ಅಧ್ಯಕ್ಷ ಸಿ.ಕೆ. ರಾಮಮೂರ್ತಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, 'ಸುರ್‌ಬಹಾರ್ ಸಂಸ್ಥೆಯು ಶಾಸ್ತ್ರೀಯ ಸಂಗೀತ ಪರಂಪರೆಯಲ್ಲಿ ಸಾಧನೆಗೈದ ಕಲಾವಿದರಿಗೆ ಪಂ. ಬಸವರಾಜ್ ರಾಜಗುರು ಮತ್ತು ಕಿಶೋರಿ ಅಮೋಣ್‌ಕರ್ ಸ್ಮರಣಾರ್ಥ 2018 ರಿಂದ ಸುರ್ ಬಹಾರ್ ಸಂಗೀತ್ ಪುರಸ್ಕಾರ್ ನೀಡುತ್ತಿದೆ. ಈ ಬಾರಿಯ ಪ್ರಶಸ್ತಿಯನ್ನು ಪಂಡಿತ್ ಶೇಷಗಿರಿ ದಂಡಾಪುರ್ ಅವರಿಗೆ ನೀಡಲಾಗಿದೆ' ಎಂದರು.

ಸುರ್‌ಬಹಾರ್ ಸಂಸ್ಥೆಯ ನಾಗರಾಜಮೂರ್ತಿ, ಮನಮೋಹನ್ ಕುಲಕರ್ಣಿ, ಸಂಗೀತಾ ಕಟ್ಟಿ ಕುಲಕರ್ಣಿ, ಸವನಿ ಕುಲಕರ್ಣಿ, ಸುಪ್ರೀಂ ಕೋರ್ಟ್ ವಕೀಲ ಕೆ.ಜೆ. ಕಾಮತ್ ಭಾಗವಹಿಸಿದ್ದರು.

ದೀಪಾವಳಿ ಪ್ರಭಾತ್: ದೀಪಾವಳಿಯ ಪ್ರಯುಕ್ತ ಮುಂಜಾನೆ ರಾಗಗಳ ವಿಶೇಷ ಸಂಗೀತ ಕಾರ್ಯಕ್ರಮ ನಡೆಯಿತು. ಸಂಗೀತಾ ಕಟ್ಟಿ ಮತ್ತು ಶಿಷ್ಯರಿಂದ ಹಿಂದೂಸ್ತಾನಿ ಗಾಯನ, ಕೋಲ್ಕತದ ಹಿಂಡೋಲ್ ಮಜುಮ್‌ದಾರ್ ಅವರಿಂದ ತಬಲ ವಾದನ ನಡೆಯಿತು.

ಮೆದುಳು ನಿಷ್ಕ್ರಿಯ: ಅಂಗಾಂಗ ದಾನ

ಪ್ರಜಾವಾಣಿ ವಾರ್ತೆ



ತರುಣ್

ಕೆಂಗೇರಿ: ಗಾರೆ ಕೆಲಸದ ಸಹಾಯಕರಾಗಿದ್ದ 19 ವರ್ಷದ ಮಗನ ಅಂಗಾಂಗವನ್ನು ಪೋಷಕರು ದಾನ ಮಾಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಪುರದಮಾತ ಗ್ರಾಮದ ದಂಪತಿ, ಮೆದುಳು ನಿಷ್ಕ್ರಿಯಗೊಂಡು ಮೃತಪಟ್ಟ ಮಗ ತರುಣ್ ಬಾಲಚಂದ್ರನ ಅಂಗಾಂಗ ದಾನ ಮಾಡಿದ್ದಾರೆ.

ಕೆಂಗೇರಿಯ ನಿರ್ಮಾಣ ಹಂತದ ಕಟ್ಟಡವೊಂದರ 2ನೇ ಮಹಡಿಯಿಂದ ತರುಣ್ ಡಿ.19ರಂದು ಆಯತಪ್ಪಿ ಕೆಳಗೆ ಬಿದ್ದಿದ್ದರು. ಗ್ಲೆನಿಗಲ್ ಆಸ್ಪತ್ರೆಯ ವೈದ್ಯರು ತಪಾಸಣೆ ನಡೆಸಿ ಮೆದುಳು ನಿಷ್ಕ್ರಿಯವಾಗಿದೆ ಎಂದು ತಿಳಿಸಿದ್ದರು.

ಪೋಷಕರಾದ ಬಾಲಚಂದ್ರ ಹಾಗೂ ಲತಾ, ಮಗನ ಎರಡು ಮೂತ್ರಪಿಂಡ, ಯಕೃತ್ ಮತ್ತು ಹೃದಯವನ್ನು ದಾನ ಮಾಡಲು ಸಮ್ಮತಿಸಿದ್ದರು. ಅಂಗಾಂಗಳನ್ನು ಕಸಿ ಮಾಡಲಾಗಿದೆ.

ಬಾಲಚಂದ್ರ ಮಾತನಾಡಿ, 'ತರುಣ್ ನಮ್ಮ ಮನೆಯ ಆಧಾರಸ್ತಂಭವಾಗಿದ್ದ. ಮತ್ತೊಬ್ಬರ ಜೀವನಕ್ಕೆ ನೆರವಾಗಲಿ ಎಂದು ಅಂಗಾಂಗ ದಾನ ಮಾಡಲು ತೀರ್ಮಾನಿಸಿದೆ' ಎಂದರು.

'ಪೋಷಕರ ಈ ನಡೆ ಸಮಾಜಕ್ಕೆ ಮಾದರಿ' ಎಂದು ಆಸ್ಪತ್ರೆಯ ಮುಖ್ಯ ಆಪ್ತ ಸಮಾಲೋಚಕಿ ಮತ್ತು ಕಸಿ ವಿಭಾಗದ ಹಿರಿಯ ಸಮನ್ವಯಕಾರಾದ ಸರಳಾ ಅನಂತರಾಜ್ ಹೇಳಿದರು.

ಸಂಪ್ ಸ್ವಚ್ಛತೆ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸೂರು ಮುಖ್ಯ ರಸ್ತೆಯ ಬೆರೆಟೇನ್ ಅಗ್ರಹಾರ ಬಳಿಯ ಶಾಹಿ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಶನಿವಾರ (ಡಿ. 23) ಮಧ್ಯಾಹ್ನ ನೀರಿನ ಸಂಪ್ ಸ್ವಚ್ಛಗೊಳಿಸುತ್ತಿದ್ದ ಸಂದರ್ಭದಲ್ಲಿ ಉಸಿರು ಗಟ್ಟಿ ಕಾರ್ಮಿಕರಿಬ್ಬರು ಮೃತಪಟ್ಟಿದ್ದಾರೆ.

ಪರಪ್ಪನ ಅಗ್ರಹಾರ ಬಳಿಯ ನಾಗ ಮುನೇಶ್ವರ ಬಡಾವಣೆಯ ಆನಂದ್ ಕಮ್ಮಾರ (44) ಮತ್ತು ಎಲೆಕ್ಟ್ರಾನಿಕ್ ಸಿಟಿಯ ಬಸವನಗರದ ನಿವಾಸಿ ಟಿ.ಆರ್. ಶಶಿಕುಮಾರ್ (52) ಮೃತರು.

'ಆನಂದ್ ಹಾಗೂ ಶಶಿಕುಮಾರ್, ಕಾರ್ಖಾನೆಯ ತ್ಯಾಜ್ಯ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಆಪರೇಟರ್‌ಗಳಾಗಿ 3 ವರ್ಷದಿಂದ ಕೆಲಸ ಮಾಡುತ್ತಿದ್ದರು. ಎಸ್‌ಟಿಪಿಯಿಂದ ಸಂಸ್ಕರಣೆಯಾಗಿ ಬರುವ ನೀರು ಪ್ರತ್ಯೇಕ ಸಂಪ್‌ನಲ್ಲಿ ಸಂಗ್ರಹವಾಗುತ್ತದೆ. ಅದೇ ಸಂಪ್‌ನೊಳಗೆ ಇಳಿದು ಇಬ್ಬರೂ ಸ್ವಚ್ಛತೆಯಲ್ಲಿ ತೊಡಗಿದ್ದರು' ಎಂದು ಪೊಲೀಸರು ಹೇಳಿದರು.

'ಸ್ವಚ್ಛತೆ ಸಂದರ್ಭದಲ್ಲಿ ಉಸಿರುಗಟ್ಟಿ ಪ್ರಜ್ಞೆ ತಪ್ಪಿ ಬಿದ್ದಿದ್ದರು. ಕಾರ್ಖಾನೆ ಸಿಬ್ಬಂದಿ, ಇಬ್ಬರನ್ನೂ ಸಂಪ್‌ನಿಂದ ಹೊರಗೆ ತಂದು ಆಸ್ಪತ್ರೆಗೆ ಕರೆದೊಯ್ದಿದ್ದರು. ವೈದ್ಯರು, ಅವರಿಬ್ಬರು ಮೃತಪಟ್ಟಿರುವುದಾಗಿ ಹೇಳಿದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ಕಾರ್ಖಾನೆಯ ಆಡಳಿತ ಮಂಡಳಿ ನಿರ್ಲಕ್ಷ್ಯದಿಂದ ಕಾರ್ಮಿಕರು ಮೃತಪಟ್ಟಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಮೃತರ ಕುಟುಂಬದವರು ದೂರು ನೀಡಿದ್ದಾರೆ. ಶಾಹಿ ಎಕ್ಸ್‌ಪೋರ್ಟ್ಸ್ ಕಂಪನಿಯ ಗಾರ್ಮೆಂಟ್ಸ್ ಕಾರ್ಖಾನೆಯ ಉತ್ಪಾದನಾ ವಿಭಾಗದ ಪ್ರಧಾನ ವ್ಯವಸ್ಥಾಪಕ ನಂದೀಶ್ ಗೌಡ, ನಿರ್ವಹಣೆ ವಿಭಾಗದ ಉಪ ಪ್ರಧಾನ ವ್ಯವಸ್ಥಾಪಕ ರಾಜೇಶ್ ಮಾರಾರ್, ಮೇಲ್ವಿಚಾರಕರಾದ ಶ್ರೀನಿವಾಸ್, ಜೇಮ್ಸ್ ರಾಜು, ಎಚ್‌ಆರ್ ಅಧಿಕಾರಿ ಚಂದ್ರಮೋಹನ್ ಅವರನ್ನು ಬಂಧಿಸಲಾಗಿದೆ. ಸದ್ಯ ಎಲ್ಲರೂ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸರು ಹೇಳಿದರು.

ವಡ್ಡುಗೆ ಪ್ರಶಸ್ತಿ



ಬೆಳಗಾವಿ: ಇಲ್ಲಿನ ಬಸವರಾಜ ಕಟ್ಟೀಮನಿ ಪ್ರತಿಷ್ಠಾನ ನೀಡುವ 2023ನೇ ಸಾಲಿನ 'ಬಸವರಾಜ ಕಟ್ಟೀಮನಿ ಪತ್ರಿಕೋದ್ಯಮ ಪ್ರಶಸ್ತಿ'ಗೆ ಹಿರಿಯ ಪತ್ರಕರ್ತ ಚಂದ್ರಕಾಂತ ವಡ್ಡು ಆಯ್ಕೆಯಾಗಿದ್ದಾರೆ.

ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಮಲ್ಲಿಕಾರ್ಜುನ ಹಿರೇಮಠ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚಂದ್ರಕಾಂತ ಹೆಸರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿ ₹50 ಸಾವಿರ ನಗದು, ಪ್ರಶಸ್ತಿ-ಪತ್ರ ಹೊಂದಿದೆ. 2024ರ ಫೆಬ್ರುವರಿಯಲ್ಲಿ ಶಿವಮೊಗ್ಗದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಮಫಲಕಗಳಲ್ಲಿ ಕನ್ನಡ ಬಳಕೆಗೆ ಫೆ. 28ರ ಗಡುವು: ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಮಳಿಗೆಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಸಬೇಕು. ಇದನ್ನು ಅನುಷ್ಠಾನ ನೀಡಲು ಫೆಬ್ರುವರಿ 28ರವರೆಗೆ ಅವಕಾಶ ನೀಡಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಕನ್ನಡ ನಾಮಫಲಕ ಹಾಕದೇ ಇರುವವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಸರ್ಕಾರದ ಆದೇಶ ಹಾಗೂ ಪಾಲಿಕೆ ಸುತ್ತೋಲೆಯನ್ನು ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಾಗುವುದು' ಎಂದು ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ ಸದಸ್ಯರೊಂದಿಗೆ ಭಾನುವಾರ ಸಭೆ ನಡೆಸಿದ ನಂತರ ಅವರು ಮಾತನಾಡಿದರು.

ಪಾಲಿಕೆ ವ್ಯಾಪ್ತಿಯ ಅಂಗಡಿ, ಹೋಟೆಲ್, ಮಾಲ್ ಸೇರಿದಂತೆ ಇನ್ನಿತರೆ ವಾಣಿಜ್ಯ ಮಳಿಗೆಗಳ ನಾಮಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡ ಬಳಸುವ ಸಂಬಂಧ ಎಲ್ಲಾ ವಲಯ ಆಯುಕ್ತರ ಜೊತೆ ಸಭೆ ನಡೆಸಿ ಸೂಕ್ತ ನಿರ್ದೇಶನ ನೀಡಲಾಗುವುದು ಎಂದರು.

ನಗರದಲ್ಲಿ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳು 1,400 ಕಿ.ಮೀ ನಷ್ಟಿದ್ದು, ಈ ರಸ್ತೆಗಳಲ್ಲಿ ವಾಣಿಜ್ಯ ಮಳಿಗೆಗಳನ್ನು ವಲಯವಾರು ಸರ್ವೆ ಮಾಡಿಸಲಾಗುವುದು. ನಂತರ ಕನ್ನಡ ಬಳಸದ ಮಳಿಗೆಗಳಿಗೆ ನೋಟಿಸ್ ನೀಡಲಾಗುವುದು ಎಂದರು.

ಫೆಬ್ರುವರಿ 28ರವರೆಗೆ ಸಮಯಾವಕಾಶ ನೀಡಿ, ನಂತರ ಕ್ರಮ ಕೈಗೊಳ್ಳಬೇಕು. ಇದರ ಅನುಷ್ಠಾನದ ಬಗ್ಗೆ ಆಯಾ ವಲಯ ಆಯುಕ್ತರು ಅನುಪಾಲನೆ ಸಲ್ಲಿಸಬೇಕು ಎಂದು ಮಾಹಿತಿ ನೀಡಿದರು.

ನಾಮಫಲಕಗಳಲ್ಲಿ ಕನ್ನಡ ಬಳಸದ ಅಂಗಡಿಗಳನ್ನು ಕಾನೂನಿನ ಪ್ರಕಾರ ಅಮಾನತಿನಲ್ಲಿಟ್ಟು, ಪರವಾನಗಿ ರದ್ದುಗೊಳಿಸಲಾಗುವುದು. ಈ ಬಗ್ಗೆ ಸರಿಯಾಗಿ ಕಾರ್ಯನಿರ್ವಹಿಸದ ಅಧಿಕಾರಿಯ ಮೇಲೂ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ರೀತಿಯ ವಾಣಿಜ್ಯ ಮಳಿಗೆಗಳ ನಾಮಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡ ಬಳಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ನಾರಾಯಣ ಗೌಡ ಹಾಗೂ ಸದಸ್ಯರು ಮನವಿ ಮಾಡಿದರು.

ಬಿಬಿಎಂಪಿ ಉಪ ಆಯುಕ್ತ ಮಂಜುನಾಥ ಸ್ವಾಮಿ, ಮುಖ್ಯ ಎಂಜಿನಿಯರ್ ಪ್ರವೀಣ್ ಲಿಂಗಯ್ಯ ಉಪಸ್ಥಿತರಿದ್ದರು.



ವಾಣಿಜ್ಯ ಮಳಿಗೆಗಳ ನಾಮಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡ ಬಳಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ನಾರಾಯಣ ಗೌಡ ಹಾಗೂ ಸದಸ್ಯರು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಮನವಿ ಸಲ್ಲಿಸಿದರು

ಬಿಬಿಎಂಪಿ ಸುದ್ದಿ

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ **9606038256** ಮಾಡಬಹುದು.

'ರಸ್ತೆ ಅಭಿವೃದ್ಧಿಪಡಿಸಿ'

ಬನಶಂಕರಿ 6ನೇ ಹಂತದ 4ನೇ ಟಿ ಬ್ಲಾಕ್‌ನಿಂದ ಶಂಕರ ಲೇಕ್ ವ್ಯೂ ಲೇಔಟ್ ಮೂಲಕ ಕನಕಪುರ ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಮಣ್ಣಿನಿಂದ ಕೂಡಿರುವ ಇಲ್ಲಿನ ರಸ್ತೆಗೆ ಡಾಂಬರು ಹಾಕಿಲ್ಲ. ಇದರಿಂದ, ವಾಹನ ಸವಾರರಿಗೆ ಪ್ರತಿನಿತ್ಯ ದೂಳಿನ ಮಜ್ಜನವಾಗುತ್ತಿದ್ದು, ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ವಿದ್ಯುತ್ ದೀಪದ ಸೌಕರ್ಯವಿಲ್ಲದ ಕಾರಣ ರಾತ್ರಿ ವೇಳೆ ಭಯದಲ್ಲಿ ಓಡಾಡುವ ಅನಿವಾರ್ಯ ಎದುರಾಗಿದೆ. ಬೆಸ್ಕಾಂ ಮತ್ತು ಬಿಡಿಎ ಅಧಿಕಾರಿಗಳಿಗೆ ಈ ಬಗ್ಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ಈ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ರಾ. ಜಯಸಿಂಹ, ಸ್ಥಳೀಯ ನಿವಾಸಿ



ಬನಶಂಕರಿಯಿಂದ ಕನಕಪುರ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ದುಃಸ್ಥಿತಿ

'ರಸ್ತೆಗೆ ಡಾಂಬರು ಹಾಕಿ'

ಜೆ.ಪಿ. ನಗರದ 6ನೇ ಹಂತದ 38ನೇ ಅಡ್ಡರಸ್ತೆ ಗುಂಡಿಗಳಿಂದ ಕೂಡಿದೆ. ಇದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಕಳೆದ ಮೂರು ವರ್ಷಗಳಿಂದ ಈ ರಸ್ತೆ ದುರಸ್ತಿ ಕಂಡಿಲ್ಲ. ರಸ್ತೆ ಅಭಿವೃದ್ಧಿ ಮಾಡುವ ಉದ್ದೇಶದಿಂದ ಆರು ತಿಂಗಳ ಹಿಂದೆಯೇ ಈ ರಸ್ತೆಗೆ ಜಲ್ಲಿಕಲ್ಲು ಹಾಕಲಾಗಿದೆ. ಆದರೆ, ಡಾಂಬರೀಕರಣ ಮಾಡಿಲ್ಲ. ಇದರಿಂದ, ವಾಹನ ಸವಾರರು ಪರದಾಡುತ್ತಿದ್ದಾರೆ. ಇಲ್ಲಿನ ಪಾದಚಾರಿ ಮಾರ್ಗದಲ್ಲಿ ಕಸ ಹಾಕಲಾಗುತ್ತಿದೆ. ಇದರಿಂದ, ಬಡಾವಣೆಯ ಸೌಂದರ್ಯಕ್ಕೆ ಧಕ್ಕೆ ಬರುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಗಣೇಶ್, ಸ್ಥಳೀಯ ನಿವಾಸಿ



ಜೆ.ಪಿ. ನಗರದ 38ನೇ ಅಡ್ಡರಸ್ತೆಯಲ್ಲಿ ಹಾಕಿರುವ ಜಲ್ಲಿಕಲ್ಲು ಹಾಗೂ ಕಸ



ಬಿಎಂಟಿಸಿ ಬಸ್ ತಂಗುದಾಣದ ಆಸನ ಬಾಗಿರುವುದು

'ವಿಜಯನಗರ: ಆಸನ ಸರಿಪಡಿಸಿ'

ವಿಜಯನಗರದ ಹೊಸಹಳ್ಳಿ ಮೆಟ್ರೊ ನಿಲ್ದಾಣದ ಪಕ್ಕದಲ್ಲಿರುವ ಬಿಎಂಟಿಸಿ ಬಸ್ ತಂಗುದಾಣದಲ್ಲಿ ಪ್ರಯಾಣಿಕರು ಕುಳಿತುಕೊಳ್ಳುವ ಆಸನ ಮುರಿದು ಬಿದ್ದಿದೆ. ಇದರಿಂದ, ವೃದ್ಧರು, ಮಕ್ಕಳು, ಮಹಿಳೆಯರು ನಿಂತುಕೊಂಡೇ ಬಸ್‌ಗಾಗಿ ಕಾಯುವ ಪರಿಸ್ಥಿತಿ ಎದುರಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಆಸನದ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಆರ್.ಕೆ.ನಾಯಕ್, ಸ್ಥಳೀಯ ನಿವಾಸಿ

'ಪಾದಚಾರಿ ಮಾರ್ಗದಲ್ಲಿನ ಕಸ ತೆರವುಗೊಳಿಸಿ'

ಹೊಸಕೆರೆಹಳ್ಳಿ ಕೆರೆಕೋಡಿ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಸ ಹಾಕಲಾಗುತ್ತಿದೆ. ಪ್ರತಿನಿತ್ಯ ಬೆಳಿಗ್ಗೆ 6 ಗಂಟೆಗೆ ದ್ವಿಚಕ್ರ ವಾಹನ ಸವಾರರು ಪ್ಲಾಸ್ಟಿಕ್ ಚೀಲಗಳಲ್ಲಿ ಮನೆ ತ್ಯಾಜ್ಯ ತುಂಬಿಕೊಂಡು ಬಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಸದ್ಯ ಇದು ಕಸ ಹಾಕುವ ತಿಪ್ಪೆಗುಂಡಿಯಾಗಿ ಮಾರ್ಪಟ್ಟಿದ್ದು, ಇಡೀ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದೆ. ಕಸದ ಚೀಲಗಳಲ್ಲಿರುವ ಆಹಾರ ತಿನ್ನಲು ಬೀಡಾಡಿ ದನಗಳು, ನಾಯಿಗಳ ಹಿಂಡು ಒಂದೆಡೆ ಸೇರುತ್ತವೆ. ಇದು ಸಂಚಾರ ದಟ್ಟಣೆಗೆ ಕಾರಣವಾಗುತ್ತಿದೆ. ಆದ್ದರಿಂದ, ಇಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಹಾಕಿ ಕಸ ಎಸೆಯುವವರನ್ನು ಪತ್ತೆ ಹಚ್ಚಿ ದಂಡ ಹಾಕಬೇಕು. ಜೊತೆಗೆ ಇಲ್ಲಿ ಹಾಕಿರುವ ಕಸ ಕೂಡಲೇ ವಿಲೇವಾರಿ ಮಾಡಬೇಕು.

ರಾಮೇಗೌಡ, ಸ್ಥಳೀಯ ನಿವಾಸಿ



ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಸ

'ಬೀದಿ ದೀಪ ಅಳವಡಿಸಿ'

ವಿದ್ಯಾರಣ್ಯಪುರ ಬಸ್ ಟರ್ಮಿನಲ್‌ನಿಂದ ದೇವಿ ವೃತ್ತ, ಯಲಹಂಕ, ಎಂ.ಎಸ್. ಪಾಳ್ಯ ಕಡೆಗೆ ಹೋಗುವ ರಸ್ತೆಗೆ ಬೀದಿ ದೀಪಗಳೇ ಇಲ್ಲ. ರಾತ್ರಿ ವೇಳೆಯಲ್ಲಿ ಸಾರ್ವಜನಿಕರು ಭಯದಲ್ಲಿ ಓಡಾಡಬೇಕಾದ ಪರಿಸ್ಥಿತಿ ಇದೆ. ಇಲ್ಲಿನ ರಸ್ತೆಯು ಕಿರಿದಾಗಿದ್ದು, ಪ್ರತಿನಿತ್ಯ ನೂರಾರು ವಾಹನಗಳು ಚಲಿಸುತ್ತವೆ. ನಾಗರಿಕರು ಕತ್ತಲಿನಲ್ಲಿಯೇ ಓಡಾಡುವ ಪರಿಸ್ಥಿತಿ ಇದೆ. ಅಪಘಾತಗಳು ಸಂಭವಿಸುವ ಮುನ್ನ ಅಧಿಕಾರಿಗಳು ಇಲ್ಲಿ ಬೀದಿ ದೀಪಗಳನ್ನು ಅಳವಡಿಸಬೇಕು.

ಪ್ರಶಾಂತ್ ಕೊಡನಾಡ, ಸ್ಥಳೀಯ ನಿವಾಸಿ



ವಿದ್ಯಾರಣ್ಯಪುರ ಬಸ್ ನಿಲ್ದಾಣದಿಂದ ಎಂ.ಎಸ್ ಪಾಳ್ಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಬೀದಿ ದೀಪ ಇಲ್ಲ



ಕಬ್ಬಿಣದ ಜಾರುಬಂಡಿ ಕಿತ್ತು ಹೋಗಿದೆ

'ತುಕ್ಕು ಹಿಡಿದ ಆಟಿಕೆಗಳು'

ಬಿಬಿಎಂಪಿ ವಾರ್ಡ್ ಸಂಖ್ಯೆ 40ರ ವ್ಯಾಪ್ತಿಯಲ್ಲಿ ಬರುವ ತಿಪ್ಪೇನಹಳ್ಳಿಯ ಕಾಲಭೈರವನಗರದ ಉದ್ಯಾನದಲ್ಲಿ ಮಕ್ಕಳ ಆಟದ ಸಾಮಗ್ರಿಗಳು ತುಕ್ಕು ಹಿಡಿದು, ಅಪಾಯಕ್ಕೆ ಆಹ್ವಾನ ನೀಡುತ್ತಿವೆ. ಇಲ್ಲಿನ ಜಾರುಬಂಡೆಯ ಕಬ್ಬಿಣ ಕಿತ್ತು ಹೋಗಿದ್ದು, ಮೇಲಿಂದ ಯಾರಾದರೂ ಮಕ್ಕಳು ಹತ್ತಿ ಜಾರಿದರೆ ಕಬ್ಬಿಣ ದೇಹಕ್ಕೆ ತಾಗುವಂತಿದೆ. ಇದರಿಂದ ಹಲವು ಮಕ್ಕಳು ಗಾಯ ಮಾಡಿಕೊಂಡಿದ್ದಾರೆ. ಉದ್ಯಾನದಲ್ಲಿ ಬಹುತೇಕ ಆಟಿಕೆಗಳು ತುಕ್ಕು ಹಿಡಿದಿವೆ. ಇದರಿಂದ, ಮಕ್ಕಳೊಂದಿಗೆ ಉದ್ಯಾನಕ್ಕೆ ಬರುವ ಸ್ಥಳೀಯ ನಿವಾಸಿಗಳಿಗೆ ನಿರಾಶೆಯಾಗುತ್ತಿದೆ. ಸಂಬಂಧ ಪಟ್ಟ ಅಧಿಕಾರಿಗಳು ಕೂಡಲೇ ಇಲ್ಲಿನ ಉದ್ಯಾನ ಆಟಿಕೆಗಳ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ರವಿಚಂದ್ರ, ಸ್ಥಳೀಯ ನಿವಾಸಿ

ಅನಿಲ ಸೋರಿಕೆಯಿಂದ ಬೆಂಕಿ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡುಗೆ ಅನಿಲ ಸೋರಿಕೆಯಾಗಿ ಸಂಭವಿಸಿದ್ದ ಬೆಂಕಿ ಅವಘಡದಲ್ಲಿ ತೀವ್ರ ಗಾಯಗೊಂಡಿದ್ದ ಸಂದೇಶ್ (30), ಅವರ ಸಹೋದರನ ಎರಡೂವರೆ ವರ್ಷದ ಮಗ ರೋಹನ್ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

'ಉತ್ತರ ಪ್ರದೇಶದ ಸಂದೇಶ್, ಪತ್ನಿ ಹಾಗೂ ಸಹೋದರನ ಕುಟುಂಬ ಸಮೇತ ನಗರಕ್ಕೆ ಬಂದಿದ್ದರು. ಗಾರ್ವೆಬಾವಿ-ಪಾಳ್ಯ ಬಳಿಯ ಲಕ್ಷ್ಮಿ ಬಡಾವಣೆಯಲ್ಲಿ ವಾಸವಿದ್ದರು. ಡಿ. 19ರಂದು ಮನೆಯಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿತ್ತು. ಸಂದೇಶ್, ಅವರ ನಾದಿನಿ ನಿಖಿಲಾ, ಅವರ ಮಕ್ಕಳಾದ ರೋಹನ್, ರೋಷನ್, ರೋಹಿಣಿ ತೀವ್ರ ಗಾಯಗೊಂಡಿದ್ದರು' ಎಂದು ಬೇಗೂರು ಠಾಣೆ ಪೊಲೀಸರು ಹೇಳಿದರು.

'ಗಾಯಾಳುಗಳನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತೀವ್ರ ಸುಟ್ಟ ಗಾಯಗಳಾಗಿದ್ದ ಸಂದೇಶ್ ಹಾಗೂ ರೋಹನ್ ಆಸ್ಪತ್ರೆಯಲ್ಲಿ ಭಾನುವಾರ ನಸುಕಿನಲ್ಲಿ ಮೃತಪಟ್ಟಿದ್ದಾರೆ. ನಿಖಿಲಾ, ಮಕ್ಕಳಾದ ರೋಷನ್ ಹಾಗೂ ರೋಹಿಣಿ ಆರೋಗ್ಯ ಸ್ಥಿತಿಯೂ ಚಿಂತಾಜನಕವಾಗಿದೆ' ಎಂದು ತಿಳಿಸಿದರು.

ಭದ್ರತೆ ಕೆಲಸ: 'ಸಂದೇಶ್ ಹಾಗೂ ಅವರ ಸಹೋದರ, ಕಂಪನಿಯೊಂದರಲ್ಲಿ ಭದ್ರತಾ ಸಿಬ್ಬಂದಿ ಕೆಲಸ ಮಾಡುತ್ತಿದ್ದರು. ಇಬ್ಬರಿಗೂ ಪ್ರತ್ಯೇಕ ಪಾಳಿಯಲ್ಲಿ ಕೆಲಸವಿತ್ತು. ಸಂದೇಶ್ ಪತ್ನಿ ಸಹ ಕಂಪನಿಯೊಂದರಲ್ಲಿ ಸ್ವಚ್ಛತೆ ಕೆಲಸ ಮಾಡುತ್ತಿದ್ದರು. ಎರಡೂ ಕುಟುಂಬದ ಸದಸ್ಯರು, ಅಕ್ಕ- ಪಕ್ಕದ ಕೊಠಡಿಗಳಲ್ಲಿ ವಾಸವಿದ್ದರು' ಎಂದು ಪೊಲೀಸರು ಹೇಳಿದರು.

'ಡಿ. 18ರಂದು ಸಂದೇಶ್ ಅವರ ಪತ್ನಿ ಊರಿಗೆ ಹೋಗಿದ್ದರು. ಸಹೋದರ ರಾತ್ರಿ ಪಾಳಿ ಕೆಲಸಕ್ಕೆ ತೆರಳಿದ್ದರು. ಸಂದೇಶ್ ಹಾಗೂ ಸಹೋದರನ ಪತ್ನಿ ನಿಖಿಲಾ, ಮಕ್ಕಳು ಮಾತ್ರ ಮನೆಯಲ್ಲಿದ್ದರು. ಅಡುಗೆ ಅನಿಲ ಸಿಲಿಂಡರ್ ಆಫ್ ಮಾಡದೇ ಮಲಗಿದ್ದರು. ಕಿಟಕಿಗಳನ್ನೂ ಮುಚ್ಚಿದ್ದರು. ರಾತ್ರಿ ಅಡುಗೆ ಅನಿಲ ಸೋರಿಕೆಯಾಗಿ ಕೊಠಡಿಯಲ್ಲಿ ಆವರಿಸಿತ್ತು' ಎಂದು ತಿಳಿಸಿದರು.

'ಡಿ. 19ರ ಬೆಳಿಗ್ಗೆ 6 ಗಂಟೆಗೆ ಎದ್ದಿದ್ದ ಸಂದೇಶ್, ವಿದ್ಯುತ್ ಸ್ವಿಚ್ ಒತ್ತಿದ್ದರು. ಬೆಂಕಿ ಕಿಡಿ ಹೊತ್ತಿಕೊಂಡು ಇಡೀ ಕೊಠಡಿಯಲ್ಲಿ ಬೆಂಕಿ ಹೊತ್ತಿ ಉರಿಯಲಾರಂಭಿಸಿತ್ತು. ಸಂದೇಶ್ ಹಾಗೂ ಕೊಠಡಿ ಬಳಿಯೇ ಮಲಗಿದ್ದ ನಿಖಿಲಾ, ಅವರ ಮಕ್ಕಳು ತೀವ್ರ ಗಾಯಗೊಂಡಿದ್ದರು. ರಕ್ಷಣೆಗೆ ಹೋಗಿದ್ದ ಸ್ಥಳೀಯರು, ಐವರನ್ನು ಹೊರಗೆ ಕರೆತಂದು ಆಸ್ಪತ್ರೆಗೆ ದಾಖಲಿಸಿದ್ದರು' ಎಂದು ಪೊಲೀಸರು ಹೇಳಿದರು.

'ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿದ್ದರು. ಬೆಂಕಿ ಅವಘಡದಿಂದ ಮನೆಯಲ್ಲಿದ್ದ ಎಲ್ಲ ವಸ್ತುಗಳು ಸುಟ್ಟು ಕರಕಲಾಗಿದ್ದವು' ಎಂದು ತಿಳಿಸಿದರು.

ಪಿಎಸ್‌ಐಗೆ ಬೈಕ್ ಡಿಕ್ಕಿ

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ರಾತ್ರಿ ಗಸ್ತಿನಲ್ಲಿದ್ದ ಪಿಎಸ್‌ಐವೊಬ್ಬರಿಗೆ ಬೈಕ್ ಗುದ್ದಿಸಿ ಸವಾರ ಪರಾರಿ ಆಗಿದ್ದಾನೆ. ಡಿ. 21ರ ರಾತ್ರಿ ನಡೆದಿರುವ ಅಪಘಾತದಲ್ಲಿ ಪಿಎಸ್‌ಐ ಅವರ ಕಾಲಿಗೆ ತೀವ್ರ ಪೆಟ್ಟು ಬಿದ್ದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಅನ್ನಪೂರ್ಣೇಶ್ವರಿನಗರ ಠಾಣೆಯ ಪಿಎಸ್‌ಐ ಕುಬೇರ್ ಅವರು ಮಲತ್ತಹಳ್ಳಿ ಕೆರೆ ಬಳಿಯ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದಾಗ ಅತಿ ವೇಗವಾಗಿ ಬೈಕ್ ಚಲಾಯಿಸಿಕೊಂಡು ಬಂದ ಸವಾರ ಅವರಿಗೆ ಗುದ್ದಿದ್ದಾನೆ. ಈ ಸಂಬಂಧ ಪ್ರಕರಣ ದಾಖಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮೆಟ್ರೊ: ಸಿಬ್ಬಂದಿಗೆ ಥಳಿಸಿದ ಪಾನಮತ್ತ ಪ್ರಯಾಣಿಕ

ಬೆಂಗಳೂರು: 'ಮೆಟ್ರೊ ನಿಲ್ದಾಣದೊಳಗೆ ಹೋಗಲು ಬಿಡಲಿಲ್ಲ' ಎಂಬ ಕಾರಣಕ್ಕೆ ಪಾನಮತ್ತ ಪ್ರಯಾಣಿಕರೊಬ್ಬರು ಭದ್ರತಾ ಸಿಬ್ಬಂದಿಯ ಕಪಾಳಕ್ಕೆ ಹೊಡೆದು ಹಲ್ಲೆ ಮಾಡಿದ್ದು, ಈ ಸಂಬಂಧ ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಡಿ.16ರ ರಾತ್ರಿ ನಡೆದಿರುವ ಘಟನೆ ಬಗ್ಗೆ ಮೆಟ್ರೊ ಭದ್ರತಾ ಸಿಬ್ಬಂದಿ ದೂರು ನೀಡಿದ್ದಾರೆ. ಪ್ರಯಾಣಿಕ ಚಂದ್ರಶೇಖರ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮದ್ಯ ಕುಡಿದಿದ್ದ ಚಂದ್ರಶೇಖರ್, ಮೆಜೆಸ್ಟಿಕ್‌ಗೆ ರೈಲಿನಲ್ಲಿ ಹೋಗಲು ದಾಸರಹಳ್ಳಿ ಮೆಟ್ರೊ ನಿಲ್ದಾಣಕ್ಕೆ ಬಂದಿದ್ದರು. ನಿಲ್ದಾಣದ ಪ್ರವೇಶ ದ್ವಾರದಲ್ಲಿ ಅವರನ್ನು ತಡೆದಿದ್ದ ಸಿಬ್ಬಂದಿ, 'ಮದ್ಯಪಾನ ಮಾಡಿದವರು ರೈಲಿನಲ್ಲಿ ಪ್ರಯಾಣಿಸಲು ಅವಕಾಶವಿಲ್ಲ. ನಿಲ್ದಾಣದೊಳಗೆ ಬಿಡಲು ಸಾಧ್ಯವಿಲ್ಲ' ಎಂದಿದ್ದರು. ಇದೇ ವಿಚಾರವಾಗಿ ಮಾತಿನ ಚಕಮಕಿ ನಡೆದಿತ್ತು' ಎಂದಿವೆ.

ಕಸ್ಟಮ್ಸ್ ಜಪ್ತಿ ವಸ್ತು ಕೊಡಿಸುವ ಆಮಿಷ: ವಂಚನೆ

ಬೆಂಗಳೂರು: ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿರುವ ಚಿನ್ನಾಭರಣವನ್ನು ಕಡಿಮೆ ಬೆಲೆಗೆ ಕೊಡಿಸುವ ಆಮಿಷವೊಡ್ಡಿ ವ್ಯಕ್ತಿಯೊಬ್ಬರಿಂದ ₹ 2 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಎಫ್‌ಐಆರ್ ದಾಖಲಾಗಿದೆ.

'ಚಹಾ ಅಂಗಡಿ ಮಾಲೀಕರಾಗಿರುವ 44 ವರ್ಷದ ವ್ಯಕ್ತಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ಮೊಹಮ್ಮದ್ ಸುಜ್ಜ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ವಿಮಾನ ನಿಲ್ದಾಣ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರ ಚಹಾ ಅಂಗಡಿಗೆ ಆಗಾಗ ಹೋಗಿ ಬರುತ್ತಿದ್ದ ಆರೋಪಿ, ವಿಮಾನ ನಿಲ್ದಾಣದಲ್ಲಿರುವ ಕಸ್ಟಮ್ಸ್ ಅಧಿಕಾರಿಗಳು ತನಗೆ ಆಪ್ತರೆಂದು ಹೇಳುತ್ತಿದ್ದ. 'ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿರುವ ಟಿ.ವಿ., ಮೊಬೈಲ್, ಚಿನ್ನಾಭರಣ ಹಾಗೂ ಇತರೆ ವಸ್ತುಗಳು ಕಡಿಮೆ ಬೆಲೆಗೆ ಮಾರಾಟಕ್ಕಿವೆ' ಎಂಬುದಾಗಿ ಆರೋಪಿ ತಿಳಿಸಿದ್ದ.'

'ಆರೋಪಿ ಮಾತು ನಂಬಿದ್ದ ದೂರುದಾರ, ತಮ್ಮ ಮಗನ ಮದುವೆಗೆ ಅಗತ್ಯವಿದ್ದ ಚಿನ್ನಾಭರಣ ಖರೀದಿಸಲು ₹ 2 ಲಕ್ಷ ನೀಡಿದ್ದರು' ಎಂದು ಹೇಳಿವೆ.

ಮೆಟ್ಟಿಲುಗಳ ಮೇಲೆ ರೋಗಿಗಳ ಸಾಗಾಟ

ಬೆಂಗಳೂರು: ನಗರದ ನೆಫ್ರೋ ಯುರಾಲಜಿ ಸಂಸ್ಥೆಯಲ್ಲಿ ಲಿಫ್ಟ್ ಕಾರ್ಯ ನಿರ್ವಹಿಸದಿದ್ದರಿಂದ ರೋಗಿಗಳನ್ನು ಮೆಟ್ಟಿಲುಗಳ ಮೂಲಕವೇ ಭಾನುವಾರ ಸಾಗಿಸಲಾಯಿತು. ಇದು ರೋಗಿಗಳ ಸಂಬಂಧಿಕರ ಆಕ್ರೋಶಕ್ಕೆ ಕಾರಣವಾಯಿತು.

ಬಾಗಿಲು ಸಮಸ್ಯೆಯಿಂದಾಗಿ ಲಿಫ್ಟ್ ಕಾರ್ಯನಿರ್ವಹಿಸುತ್ತಿರಲಿಲ್ಲ. ಇದರಿಂದಾಗಿ ವೈದ್ಯಕೀಯ ಸಿಬ್ಬಂದಿ ರೋಗಿಗಳನ್ನು ಒಂದು ಮಹಡಿಯಿಂದ ಮತ್ತೊಂದು ಮಹಡಿಗೆ ಕರೆದೊಯ್ಯಲು ಪರದಾಟ ನಡೆಸಬೇಕಾಯಿತು. ತುರ್ತಾಗಿ ತೆರಳಬೇಕಾದ ರೋಗಿಗಳನ್ನು ಮಾತ್ರ ಸ್ಟ್ರೆಚ್ಚರ್‌ನಲ್ಲಿ ಇರಿಸಿ, ಮಹಡಿಯಿಂದ ಮಹಡಿಗೆ ಸಾಗಿಸಲಾಯಿತು. ಆಸ್ಪತ್ರೆಯಲ್ಲಿನ ವ್ಯವಸ್ಥೆಯ ಬಗ್ಗೆ ರೋಗಿಗಳು ಹಾಗೂ ಅವರ ಸಂಬಂಧಿಗಳು ಅಸಮಾಧಾನ ವ್ಯಕ್ತಪಡಿಸಿದರು.

'ಲಿಫ್ಟ್ ಕಾರ್ಯನಿರ್ವಹಿಸದಿದ್ದರಿಂದ ರೋಗಿಗಳನ್ನು 2ನೇ ಮಹಡಿಗೆ ಸಾಗಿಸಲು ಪರದಾಟ ನಡೆಸಬೇಕಾಯಿತು. ವಿವಿಧ ಪರೀಕ್ಷೆಗಳಿಗೆ ಮಹಡಿಯಿಂದ ಮಹಡಿಗೆ ಸಾಗುವಷ್ಟರಲ್ಲಿ ರೋಗಿಗಳು ಇನ್ನಷ್ಟು ಅಸ್ವಸ್ಥರಾಗಿದ್ದರು. ಇಷ್ಟು ದೊಡ್ಡ ಸಂಸ್ಥೆಯಲ್ಲಿ ಲಿಫ್ಟ್ ಸಮರ್ಪಕವಾಗಿ ನಿರ್ವಹಣೆ ಮಾಡದಿರುವುದು ವಿಪರ್ಯಾಸ' ಎಂದು ರೋಗಿಗಳ ಸಂಬಂಧಿಗಳು ಆಕ್ರೋಶ ವ್ಯಕ್ತಪಡಿಸಿದರು.

'ಲಿಫ್ಟ್‌ನ ನಿರ್ವಹಣೆ ಕಾರ್ಯ ನಡೆಯುತ್ತಿದ್ದರಿಂದ ಬಳಸಲು ಸಾಧ್ಯವಾಗಿರಲಿಲ್ಲ. ಬಾಗಿಲು ಬದಲಾಯಿಸುವ ಪ್ರಕ್ರಿಯೆ ಮುಗಿದಿದೆ. ಭಾನುವಾರ ಸಂಜೆಯಿಂದ ಸಮಸ್ಯೆ ನಿವಾರಣೆಯಾಗಿದೆ' ಎಂದು ಸಂಸ್ಥೆಯ ಪ್ರಭಾರ ನಿರ್ದೇಶಕ ಡಾ. ಕೇಶವಮೂರ್ತಿ ಆರ್. ತಿಳಿಸಿದರು.

ಶ್ರದ್ಧಾಭಕ್ತಿಯಿಂದ ದರ್ಶನ ಪಡೆದ ಜನ ಸಮೂಹ • ಲಕ್ಷದೀಪೋತ್ಸವದಲ್ಲಿ ದೀಪ ಬೆಳಗಿ ಭಕ್ತಿ ಸಮರ್ಪಣೆ

ನಗರದಲ್ಲಿ ಹನುಮ ಜಯಂತಿ ವೈಭವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಆಂಜನೇಯ ದೇವಸ್ಥಾನಗಳಲ್ಲಿ ಭಾನುವಾರ ಶ್ರದ್ಧಾ ಭಕ್ತಿಯಿಂದ ಹನುಮ ಜಯಂತಿ ಆಚರಿಸಲಾಯಿತು.

ಆಂಜನೇಯನ ವಿಗ್ರಹಕ್ಕೆ ವಿಶೇಷ ಅಲಂಕಾರ ಮಾಡಲಾಗಿತ್ತು. ಭಕ್ತರು ಕುಟುಂಬ ಸಮೇತರಾಗಿ ದೇವಾಲಯಗಳಿಗೆ ಬಂದು ಸ್ವಾಮಿಯ ದರ್ಶನ ಪಡೆದರು. ಹಲವು ದೇವಸ್ಥಾನಗಳಲ್ಲಿ ಭಕ್ತರಿಗೆ ಮಧ್ಯಾಹ್ನ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಮೈಸೂರು ರಸ್ತೆಯ ಗಾಳಿ ಆಂಜನೇಯ ದೇವಸ್ಥಾನದಲ್ಲಿ ಮತ್ತು ವಿಜಯನಗರದ ಮಾರುತಿ ದೇವಸ್ಥಾನದಲ್ಲಿ ಸಾವಿರಾರು ಭಕ್ತರು ದೇವರ ದರ್ಶನ ಪಡೆದರು.

ನಾಗಸಂದ್ರದ ಎಚ್‌ಎಂಟಿ ಬಡಾವಣೆಯ ಆಂಜನೇಯಸ್ವಾಮಿ ದೇವಾಲಯದಲ್ಲಿ ಅರ್ಚಕ ಮಾಧವಾಚಾರ್ ನೇತೃತ್ವದಲ್ಲಿ ಫಲ ಪಂಚಾಮೃತ ಅಭಿಷೇಕ, ಅಲಂಕಾರ ಸೇವೆ, ಗಣಪತಿ ನವಗ್ರಹ ಮೃತ್ಯುಂಜಯ ಮತ್ತು ರಾಮತಾರಕ ಹೋಮ, ಮಹಾಪೂರ್ಣಾಹುತಿ, ಅನ್ನಸಂತರ್ಪಣೆ ನಡೆದವು. ರಂಗಗೀತೆ, ಸಂಪೂರ್ಣ ರಾಮಾಯಣ ಹರಿಕತೆಗಳನ್ನು ಆಯೋಜಿಸಲಾಗಿತ್ತು.

ಕೆ.ಆರ್. ರಸ್ತೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಪಂಚಾಮೃತ ಅಭಿಷೇಕ ಹಾಗೂ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ನಾಗಶೆಟ್ಟಿಹಳ್ಳಿ ಮಂಜುನಾಥ ಬಡಾವಣೆಯಲ್ಲಿ ಹನುಮ ಜಯಂತ್ಯುತ್ಸವ, ಭಕ್ತಿಗಾನ ಲಹರಿ ಕಾರ್ಯಕ್ರಮ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

ನಗರದ ಬಿವಿಕೆ ಅಯ್ಯಂಗಾರ್ ರಸ್ತೆಯ ಕೋದಂಡರಾಮಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಪ್ರಯುಕ್ತ ಶ್ರೀರಾಮ ಲಕ್ಷ-ದೀಪೋತ್ಸವ ವಿಜೃಂಭಣೆಯಿಂದ ನಡೆಯಿತು. ಸಾವಿರಾರು ಭಕ್ತರು ಭಾಗವಹಿಸಿದ್ದರು.

ಮಹಾಲಕ್ಷ್ಮಿ ಲೇಔಟ್‌ನಲ್ಲಿ ಇರುವ ಶ್ರೀಪ್ರಸನ್ನ ವೀರಾಂಜನೇಯ ದೇವಸ್ಥಾನದಲ್ಲಿ ಭಾನುವಾರ ಹನುಮ ಜಯಂತಿ ಭಾರಿ ಸಂಖ್ಯೆಯಲ್ಲಿ ಭಕ್ತರು ದೇವರ ದರ್ಶನ ಪಡೆದರು.

ದೇವಸ್ಥಾನಗಳಲ್ಲಿ ಅಲ್ಲದೇ ರಸ್ತೆ, ಓಣಿ, ಜಂಕ್ಷನ್‌ಗಳಲ್ಲಿ ಹನುಮನ್ ಜಯಂತಿ ಆಚರಿಸಿದರು. ಪೊಂಗಲ್, ಮೊಸರನ್ನ, ಪುಳಿಯೊಗರೆ ವಿತರಿಸಿದರು.
















1. ಕೆ.ಆರ್. ರಸ್ತೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಪ್ರಯುಕ್ತ ವಿಶೇಷ ಅಭಿಷೇಕ, ವೀಳ್ಯದೆಲೆ ಮತ್ತು ಹೂವಿನ ಅಲಂಕಾರ ಮಾಡಲಾಗಿತ್ತು. 2. ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿರುವ ಕೋದಂಡ ರಾಮಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹರಿ ಹನುಮ ಸೇವಾ ಸಮಿತಿ ಸಹಯೋಗದಲ್ಲಿ ನಡೆದ ಶ್ರೀರಾಮ ಲಕ್ಷದೀಪೋತ್ಸವದಲ್ಲಿ ಹನುಮಾನ್ ಬರಹದ ಮುಂದೆ ಮಕ್ಕಳು ದೀಪ ಹಚ್ಚಿದರು. 3. ಭಕ್ತರು ದೀಪ ಹಚ್ಚಿ ಭಕ್ತಿ ಸಮರ್ಪಿಸಿದರು 4. ಚಿನ್ನಯ್ಯನ ಪಾಳ್ಯದ ಆಂಜನೇಯ ದೇವಸ್ಥಾನದಲ್ಲಿ ಆಂಜನೇಯ ದೇವರ ಮೂರ್ತಿಗೆ ಮಾಡಿದ್ದ ಫಲಪುಷ್ಪ ಅಲಂಕಾರ. 5. ಮಹಾಲಕ್ಷ್ಮಿ ಲೇಔಟ್‌ನ ಶ್ರೀ ಪ್ರಸನ್ನ ವೀರಾಂಜನೇಯ ದೇವಸ್ಥಾನದಲ್ಲಿ ಭಕ್ತರು ದೇವರ ದರ್ಶನ ಪಡೆದರು. 6. ನಾಗಸಂದ್ರದ ಎಚ್‌ಎಂಟಿ ಬಡಾವಣೆಯ ಆಂಜನೇಯಸ್ವಾಮಿ ದೇವಾಲಯದಲ್ಲಿ ಆಂಜನೇಯ ಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಯಿತು

ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್; ಎಂ.ಎಸ್.ಮಂಜುನಾಥ್; ಎಸ್.ಕೆ. ದಿನೇಶ್

ಸನ್ಯಾಸಿಯಾಗ ಬಯಸುವವರು ಸಿಗುತ್ತಿಲ್ಲ: ಚುಂಚಶ್ರೀ ಬೇಸರ



ಮೈಸೂರು: 'ಈಗ ಸನ್ಯಾಸಿಗಳಾಗಲು ಬಯಸುವವರು ಸಿಗದಿರುವ ಕಾರಣದಿಂದ ಸಂತ ಪರಂಪರೆ ಮುಂದುವರಿಸಲು ಕಷ್ಟವಾಗಿದೆ' ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಇಲ್ಲಿನ ಕೊಡಗು ಗೌಡ ಸಮಾಜದ ಸಭಾಂಗಣ ಉದ್ಘಾಟಿಸಿ ಮಾತನಾಡಿದರು. 'ಸಮಾಜ ಹಾಗೂ ಸಮುದಾಯದ ಒಳಿತಿಗಾಗಿ ಸನ್ಯಾಸ ದೀಕ್ಷೆ ಪಡೆಯಲು ಯಾರೂ ಮುಂದೆ ಬರುತ್ತಿಲ್ಲ. ಅಧ್ಯಾತ್ಮದತ್ತ ಒಲವು ಬೆಳೆಸಿಕೊಂಡಿರುವ ಯಾರಾದರೂ ಸನ್ಯಾಸಿಯಾಗಲು ಮುಂದಾದರೆ ಅವರ ಕುಟುಂಬದವರೇ ತಡೆಯುತ್ತಾರೆ. ಬೇಡ ಎನ್ನುತ್ತಾರೆ' ಎಂದರು.

'ನಾನು ಸನ್ಯಾಸ ದೀಕ್ಷೆ ಪಡೆಯಲು ಮುಂದಾದಾಗಲೂ ತೀವ್ರ ವಿರೋಧ ವ್ಯಕ್ತವಾಗಿತ್ತು. ಮೈಸೂರು ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ಮನೆಯನ್ನೇ ಬಿಟ್ಟು ಬರಬೇಕಾಯಿತು. ಯಾರಿಗಾದರೂ ಸಮಾಜದೊಂದಿಗೆ ಸಮುದಾಯ ಸೇವೆಯ ಆಸಕ್ತಿ ಇದ್ದರೆ ಸನ್ಯಾಸ ದೀಕ್ಷೆ ಸ್ವೀಕರಿಸಲು ಮಠಕ್ಕೆ ಬನ್ನಿ' ಎಂದು ಆಹ್ವಾನ ನೀಡಿದರು.

'ಕೊಡಗು ಗೌಡ ಸಮಾಜದ ಸಮಸ್ಯೆಗಳ ಬಗ್ಗೆ ಬೆಂಗಳೂರಿನಲ್ಲಿ ಸಮಾವೇಶ ನಡೆಸಿ ಸರ್ಕಾರದ ಗಮನ-ಸೆಳೆಯಬೇಕು. ಇದಕ್ಕೆ ಮಠದಿಂದಲೂ ಸಹಕಾರ ನೀಡಲಾಗುವುದು. ಒಕ್ಕಲಿಗ ಸಮುದಾಯ ಸಂಘಟಿತವಾಗಿರಬೇಕು' ಎಂದರು.

ಏಷ್ಯಾ ಮಾಲ್‌ನಲ್ಲಿ ಗಲಾಟೆ: ಕೆರೆಹಳ್ಳಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ ರಸ್ತೆಯಲ್ಲಿ-ರುವ ಏಷ್ಯಾ ಮಾಲ್‌ನಲ್ಲಿ ₹ 200 ಪ್ರವೇಶ ಶುಲ್ಕದ ವಿಚಾರವಾಗಿ ಗಲಾಟೆ ನಡೆದಿದ್ದು, ರಾಷ್ಟ್ರ ರಕ್ಷಣಾ ಪಡೆಯ ಅಧ್ಯಕ್ಷ ಪುನೀತ್ ಕೆರೆಹಳ್ಳಿ ಹಾಗೂ ಇತರರ ವಿರುದ್ಧ ಕೊಡಿಗೇಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಡಿ. 23ರಂದು ಮಧ್ಯಾಹ್ನ ನಡೆದಿರುವ ಘಟನೆ ಸಂಬಂಧ ಏಷ್ಯಾ ಮಾಲ್ ಭದ್ರತಾ ವಿಭಾಗದ ವ್ಯವಸ್ಥಾಪಕ ಸ್ಟೀಫನ್ ವಿಕ್ಟರ್ ದೂರು ನೀಡಿದ್ದಾರೆ. ಪುನೀತ್ ಕೆರೆಹಳ್ಳಿ ಹಾಗೂ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕ್ರಿಸ್ಮಸ್ ಅಲಂಕಾರ: 'ಕ್ರಿಸ್ಮಸ್ ಹಬ್ಬದ ಅಂಗವಾಗಿ ಮಾಲ್‌ನಲ್ಲಿ ವಿಶೇಷ ಅಲಂಕಾರ ಮಾಡಲಾಗಿದ್ದು, ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಜೊತೆಗೆ, ಮಾಲ್ ಪ್ರವೇಶಕ್ಕೆ ₹ 200 ಶುಲ್ಕ ನಿಗದಿಪಡಿಸಲಾಗಿದೆ. ಇದನ್ನು ಪ್ರಶ್ನಿಸಲೆಂದು ಪುನೀತ್ ಕೆರೆಹಳ್ಳಿ ಹಾಗೂ ಇತರರು, ಮಾಲ್ ಬಳಿ ಹೋಗಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸ್ಥಳೀಯ ಸಂಪನ್ಮೂಲ ಬಳಸಿಕೊಂಡು ಏಷ್ಯಾ ಮಾಲ್ ನಿರ್ಮಿಸಲಾಗಿದೆ. ಜನರಿಂದ ಅಕ್ರಮವಾಗಿ ₹ 200 ಶುಲ್ಕ ವಸೂಲಿ ಮಾಡಲಾಗುತ್ತಿದೆ. ಯಾವ ಕಾನೂನು ಅನ್ವಯ ಶುಲ್ಕ ನಿಗದಿ ಮಾಡಿದ್ದೀರಾ ಎಂದು ಪುನೀತ್ ಕೆರೆಹಳ್ಳಿ ಪ್ರಶ್ನಿಸಿದ್ದರು. ಆಡಳಿತ ಮಂಡಳಿಯವರು ಸ್ಥಳಕ್ಕೆ ಬಂದಿರಲಿಲ್ಲ. ಪುನೀತ್ ಹಾಗೂ ಪ್ರವೇಶ ದ್ವಾರದಲ್ಲಿದ್ದ ಭದ್ರತಾ ಸಿಬ್ಬಂದಿ ನಡುವೆ ಮಾತಿನ ಚಕಮಕಿ ನಡೆದಿತ್ತು. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿದ್ದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ, ಪುನೀತ್ ಹಾಗೂ ಇತರರನ್ನು ಠಾಣೆಗೆ ಕರೆತಂದರು' ಎಂದು ಹೇಳಿವೆ.

ಅಕ್ರಮ ಕೂಟ, ಜೀವ ಬೆದರಿಕೆ ಆರೋಪ: ಘಟನೆ ಬಗ್ಗೆ ದೂರು ನೀಡಿರುವ ಸ್ಟೀಫನ್ ವಿಕ್ಟರ್, 'ಪುನೀತ್ ಕೆರೆಹಳ್ಳಿ ಗುಂಪು ಕಟ್ಟಿಕೊಂಡು ಬಂದು, ಜೀವ ಬೆದರಿಕೆಯೊಡ್ಡಿದ್ದಾರೆ. ಮಾಲ್ ಪ್ರವೇಶಿಸುತ್ತಿದ್ದ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡಿದ್ದಾರೆ' ಎಂದು ಆರೋಪಿಸಿದ್ದಾರೆ.

'ಕ್ರಿಸ್ಮಸ್ ಕಾರಣಕ್ಕೆ ಅಲಂಕಾರ ಮಾಡಲಾಗಿದೆ. ಹಿಂದೂ ಹಬ್ಬವಿದ್ದಾಗಲೂ ಇದೇ ರೀತಿಯಲ್ಲಿ ಅಲಂಕಾರವಿರಬೇಕು. ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆಯಾಗುತ್ತಿದ್ದು, ಅಂದು ಮಾಲ್‌ಗೆ ವಿಶೇಷ ಅಲಂಕಾರ ಮಾಡಬೇಕು. ಇಲ್ಲದಿದ್ದರೆ, ಸುಮ್ಮನೇ ಬಿಡುವುದಿಲ್ಲ' ಎಂದು ಪುನೀತ್ ಕೆರೆಹಳ್ಳಿ ಹಾಗೂ ಇತರರು ಜೀವ ಬೆದರಿಕೆಯೊಡ್ಡಿದ್ದಾರೆ. ಮಾಲ್ ಪ್ರವೇಶ ದ್ವಾರದ ಎದುರು ನಿಂತು 'ಶ್ರೀರಾಮ್' ಘೋಷಣೆ ಕೂಗಿದ್ದಾರೆ. ಜನರನ್ನು ಧಾರ್ಮಿಕವಾಗಿ ಪ್ರಚೋದಿಸಿ-ದ್ದಾರೆ' ಎಂದು ದೂರಲಾಗಿದೆ

'ಟಿಕೆಟ್ ವಿಚಾರಕ್ಕೆ ಎದೆಗೆ ಒದ್ದ ಕೆಎಸ್‌ಆರ್‌ಟಿಸಿ ಸಿಬ್ಬಂದಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿಕೆಟ್ ವಿಚಾರವಾಗಿ ಸಮಸ್ಯೆ ಹೇಳಿಕೊಳ್ಳಲು ಹೋಗಿದ್ದ ಪ್ರಯಾಣಿಕರೊಬ್ಬರ ಮೇಲೆ ಹಲ್ಲೆ ಮಾಡಿ ಕೊಲೆ ಬೆದರಿಕೆಯೊಡ್ಡಲಾಗಿದ್ದು, ಕೆಎಸ್‌ಆರ್‌ಟಿಸಿ ಡಿಪೊ ವ್ಯವಸ್ಥಾಪಕ, ಭದ್ರತಾ ಸಿಬ್ಬಂದಿ ವಿರುದ್ಧ ಉಪ್ಪಾರಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ವ್ಯಾಪಾರಿ ಜಿ. ರಾಘವೇಂದ್ರ ದೂರು ನೀಡಿದ್ದಾರೆ. ಕೆಎಸ್‌ಆರ್‌ಟಿಸಿ ಟರ್ಮಿನಲ್ 2 ಡಿಪೊ ವ್ಯವಸ್ಥಾಪಕ ಮತ್ತು ಅದೇ ಟರ್ಮಿನಲ್‌ನ ಭದ್ರತಾ ಸಿಬ್ಬಂದಿ ಸತೀಶ್ ವಿರುದ್ಧ ಪ್ರಕರಣ ದಾಖಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಡಿ. 23ರಂದು ರಾತ್ರಿ ಬೆಂಗಳೂರಿನಿಂದ ಹಿರಿಯೂರಿಗೆ ಹೊರಟಿದ್ದ ರಾಘವೇಂದ್ರ, ಕೆಎಸ್‌ಆರ್‌ಟಿಸಿ 1ನೇ ಟರ್ಮಿನಲ್‌ಗೆ ಬಂದಿದ್ದರು. ಹರಿಹರಕ್ಕೆ ಹೋಗುವ ಬಸ್ ಹತ್ತಿದ್ದರು. ಹಿರಿಯೂರಿಗೆ ಟಿಕೆಟ್ ನೀಡುವಂತೆ ನಿರ್ವಾಹಕರನ್ನು ಕೋರಿದ್ದರು. 'ಹಿರಿಯೂರಿನ ಒಳಗೆ ಬಸ್ ಹೋಗುವುದಿಲ್ಲ. ರಾಷ್ಟ್ರೀಯ ಹೆದ್ದಾರಿ ಮೂಲಕ ಹೋಗುತ್ತದೆ' ಎಂಬುದಾಗಿ ನಿರ್ವಾಹಕ ಹೇಳಿದ್ದರು. 'ಹಿರಿಯೂರಿಗೆ ಟಿಕೆಟ್ ನೀಡಿ, ರಾಷ್ಟ್ರೀಯ ಹೆದ್ದಾರಿಯಲ್ಲಿಯೇ ಇಳಿದುಕೊಳ್ಳುತ್ತೇನೆ' ಎಂದು ರಾಘವೇಂದ್ರ ತಿಳಿಸಿದ್ದರು' ಎನ್ನಲಾಗಿದೆ

'ಚಿತ್ರದುರ್ಗದ ಟಿಕೆಟ್ ಪಡೆದರೆ ಮಾತ್ರ, ಹಿರಿಯೂರಿನಲ್ಲಿ ಇಳಿಸುತ್ತೇನೆ' ಎಂಬುದಾಗಿ ನಿರ್ವಾಹಕ ಹೇಳಿದ್ದರು. 'ಹಿರಿಯೂರು ಬದಲು ಚಿತ್ರದುರ್ಗಕ್ಕೆ ಏಕೆ ಟಿಕೆಟ್ ತೆಗೆದುಕೊಳ್ಳಬೇಕು' ಎಂದು ರಾಘವೇಂದ್ರ ಪ್ರಶ್ನಿಸಿದ್ದರು. ಅದಕ್ಕೆ ಉತ್ತರಿಸದ ನಿರ್ವಾಹಕ ಬಸ್‌ನಿಂದ ಇಳಿಸಿದ್ದರು' ಎಂದು ದೂರಲಾಗಿದೆ.

'ಪುರಾವೆ ಸಂಗ್ರಹಿಸಿ ಕ್ರಮ'

'ರಾಘವೇಂದ್ರ ಅವರು ನೀಡಿರುವ ದೂರು ಆಧರಿಸಿ ಪುರಾವೆ ಸಂಗ್ರಹಿಸಲಾಗುತ್ತಿದೆ. ಡಿಪೊ ವ್ಯವಸ್ಥಾಪಕ ಯಾರು? ಅವರೇ ಹಲ್ಲೆ ಮಾಡಿದ್ದಾರೆಯೇ ? ಅಥವಾ ಅವರ ಹೆಸರಿನಲ್ಲಿ ಬೇರೆಯವರು ಹಲ್ಲೆ ಮಾಡಿದ್ದಾರೆಯೇ ? ಎಂಬುದು ತನಿಖೆಯಿಂದ ಗೊತ್ತಾಗಬೇಕು. ದೂರಿನಲ್ಲಿರುವ ಭದ್ರತಾ ಸಿಬ್ಬಂದಿ ಸತೀಶ್‌ನನ್ನೂ ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸರು ಹೇಳಿದರು.

ಹೇಳಿಕೆ ದಾಖಲೆಗಾಗಿ ಚಿತ್ರೀಕರಣ: 'ಡಿಪೊ ವ್ಯವಸ್ಥಾಪಕನ ಬಳಿ ಹೋಗಿದ್ದ ಪ್ರಯಾಣಿಕ ರಾಘವೇಂದ್ರ, ಟಿಕೆಟ್ ವಿಚಾರವನ್ನು ಪುನಃ ಪ್ರಶ್ನಿಸಿದ್ದರು. 'ವ್ಯವಸ್ಥಾಪಕನ ಹೇಳಿಕೆಯನ್ನು ದಾಖಲೆಗಾಗಿ ರಾಘವೇಂದ್ರ ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಿಸಲು ಮುಂದಾಗಿದ್ದರು. ಇದೇ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಭದ್ರತಾ ಸಿಬ್ಬಂದಿ ಸತೀಶ್, ರಾಘವೇಂದ್ರ ಅವರಿಗೆ ಲಾಠಿಯಿಂದ ಹೊಡೆದಿದ್ದ. ಕಾಲಿನಿಂದ ಎದೆಗೆ ಒದ್ದು ಎಳೆದಾಡಿ ಹಲ್ಲೆ ಮಾಡಿದ್ದ. ಮೊಬೈಲ್ ಸಹ ಕಸಿದುಕೊಂಡಿದ್ದ. ಸತೀಶ್ ಹಾಗೂ ವ್ಯವಸ್ಥಾಪಕ ಇಬ್ಬರು ಸೇರಿ ರಾಘವೇಂದ್ರ ಅವರನ್ನು ಎಳೆದಾಡಿ ಕೊಠಡಿಯೊಳಗೆ ತಳ್ಳಿದ್ದರು. 'ನಾನೂ ಹಿರಿಯೂರಿನವ. ಅಲ್ಲಿ ನನ್ನ ಅಣ್ಣ ರೌಡಿ ಇದ್ದಾನೆ. ನಿನ್ನನ್ನು ಕೊಲೆ ಮಾಡಿಸುತ್ತೇನೆ' ಎಂದು ಸತೀಶ್ ಜೀವ ಬೆದರಿಕೆಯೊಡ್ಡಿದ್ದಾನೆ' ಎಂದು ಆರೋಪಿಸಲಾಗಿದೆ.

ಫ್ರಾನ್ಸ್: ವಿಮಾನ ತೆರಳಲು ಅವಕಾಶ

ಪ್ಯಾರಿಸ್ (ಪಿಟಿಐ): 'ಮಾನವ ಕಳ್ಳಸಾಗಣೆ ಶಂಕೆಯಲ್ಲಿ ನಿಕರಾಗುವಾಗೆ ತೆರಳುತ್ತಿದ್ದ ವಿಮಾನವನ್ನು ಫ್ರಾನ್ಸ್ ಅಧಿಕಾರಿಗಳು ವಶಕ್ಕೆ ಪಡೆದ 3 ದಿನದ ಬಳಿಕ ಅದರ ಪ್ರಯಾಣವನ್ನು ಸೋಮವಾರ ಪುನರಾರಂಭಿಸಲು ಅನುಮತಿ ನೀಡಲಾಗಿದೆ' ಎಂದು ಮಾಧ್ಯಮಗಳು ಭಾನುವಾರ ವರದಿ ಮಾಡಿವೆ.

ಉತ್ತರಹಳ್ಳಿಯಲ್ಲಿ ಬ್ರಹ್ಮರಥೋತ್ಸವ

ಬೆಂಗಳೂರು : ನಗರದ ಉತ್ತರಹಳ್ಳಿಯ ವೀರಾಂಜನೇಯ ಸ್ವಾಮಿ ದೇವಾಲಯದಲಿ ವೀರಾಂಜನೇಯ ಸ್ವಾಮಿ ಬ್ರಹ್ಮರಥೋತ್ಸವ ಭಾನುವಾರ ವೈಭವದಿಂದ ನಡೆಯಿತು.

ಬ್ರಹ್ಮರಥೋತ್ಸವದ ಅಂಗವಾಗಿ ಸ್ವಾಮಿಗೆ ಮಾಜಿ ಸಂಸದ ಎಂ. ಶ್ರೀನಿವಾಸ್ ಮತ್ತು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಅವರ ಕುಟುಂಬದ ವತಿಯಿಂದ ಸಮರ್ಪಿಸಲಾದ ಚಿನ್ನ ಲೇಪಿತ ರಥವನ್ನು ಉದ್ಘಾಟಿಸಲಾಯಿತು. ರಥೋತ್ಸವದಲ್ಲಿ ಸಹಸ್ರಾರು ಭಕ್ತರು ಭಾಗಿಯಾದರು.

ಮಧ್ಯಾಹ್ನ 12ಕ್ಕೆ ನೂತನ ರಥದಲ್ಲಿ ವೀರಾಂಜನೇಯ ಸ್ವಾಮಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಧಾರ್ಮಿಕ ಪೂಜಾ ಕಾರ್ಯಗಳನ್ನು ನೆರವೇರಿಸಿದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಜೈ ಶ್ರೀರಾಮ್, ಜೈ ಹನುಮಾನ್ ಘೋಷಣೆಗಳು ಮುಗಿಲು ಮುಟ್ಟಿದವು. ವೀರಗಾಸೆ, ಡೊಳ್ಳುಕುಣಿತ, ಪೂಜಾ ಕುಣಿತ, ಕೀಲುಕುದುರೆ ಸೇರಿದಂತೆ ವಿವಿಧ ಜನಪದ ಕಲಾತಂಡಗಳು ರಥೋತ್ಸವಕ್ಕೆ ಮೆರಗು ನೀಡಿದವು.

ಜನರು ಮನೆಗಳ ಮುಂದೆ ರಂಗೋಲಿ ಹಾಕಿ ರಥವನ್ನು ಸ್ವಾಗತಿಸಿ ಸ್ವಾಮಿಗೆ ಪೂಜೆ ಸಲ್ಲಿಸಿದರು. ಕಲಶಾರಾಧನೆ, ರಾಮತಾರಕ ಹೋಮ, ಆಂಜನೇಯ ಮೂಲಮಂತ್ರ ಹೋಮ, ರಥ ದೇವತಾ ಹೋಮ, ರಥ ದೇವತಾ ಪೂಜೆಗಳು ನಡೆದವು.



ಉತ್ತರಹಳ್ಳಿಯಲ್ಲಿ ವೀರಾಂಜನೇಯ ಸ್ವಾಮಿಯ ಚಿನ್ನ ಲೇಪಿತ ಬ್ರಹ್ಮರಥೋತ್ಸವವು ಭಾನುವಾರ ವಿಜೃಂಭಣೆಯಿಂದ ನಡೆಯಿತು

ತವರಿಗೆ ಹೋಗುವ ವಿಚಾರಕ್ಕೆ ಗಲಾಟೆ: ಪತ್ನಿ ಆತ್ಮಹತ್ಯೆ

ಬೆಂಗಳೂರು: 'ತವರಿಗೆ ಹೋಗುವ ವಿಚಾರವಾಗಿ ನಡೆದ ಗಲಾಟೆಯಿಂದ ಬೇಸತ್ತಿದ್ದರು' ಎನ್ನಲಾದ ಪವಿತ್ರಾ (28) ಅವರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ನೆಲಮಂಗಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತುಮಕೂರು ಹುಳಿಯೂರಿನ ಪವಿತ್ರಾ, ಹಿರಿಯೂರಿನ ಚೇತನ್ ಅವರನ್ನು ಎರಡೂವರೆ ವರ್ಷಗಳ ಹಿಂದೆ ಮದುವೆಯಾಗಿದ್ದರು. ಚೇತನ್, ಬೆಂಗಳೂರಿನ ಕಂಪನಿಯೊಂದರ ಉದ್ಯೋಗಿ. ನೆಲಮಂಗಲದಲ್ಲಿ ನೆಲೆಸಿದ್ದ ದಂಪತಿಗೆ 11 ತಿಂಗಳ ಮಗುವಿದೆ' ಎಂದು ಪೊಲೀಸರು ಹೇಳಿದರು.

'ಕ್ರಿಸ್‌ಮಸ್ ಹಬ್ಬದ ನಿಮಿತ್ತ ಸಾಲು ಸಾಲು ರಜೆಗಳಿದ್ದವು. ಪವಿತ್ರಾ ಅವರು ಸಂಬಂಧಿ-ಕರೊಬ್ಬರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತವರು ಮನೆಗೆ ಹೋಗೋಣವೆಂದು ಪತಿ ಚೇತನ್‌ಗೆ ಹೇಳಿದ್ದರು. ಕೆಲಸದ ಒತ್ತಡದಿಂದಾಗಿ ರಜೆ ಇಲ್ಲವೆಂದು ಚೇತನ್ ತಿಳಿಸಿದ್ದರು. ಅಷ್ಟಕ್ಕೆ ದಂಪತಿ ನಡುವೆ ಜಗಳ ಶುರುವಾಗಿತ್ತು. ಚೇತನ್, ಮಗುವಿನೊಂದಿಗೆ ಮನೆಯಿಂದ ಹೊರಗೆ ಹೋಗಿದ್ದರು.' 'ಕೊಠಡಿಗೆ ಹೋಗಿದ್ದ ಪವಿತ್ರಾ, ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಪ್ರಕರಣ ಸಂಬಂಧ ಪತಿಯನ್ನು ವಿಚಾರಣೆ ನಡೆಸ-ಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

ನಗರದಲ್ಲಿ ಇಂದು

2023ರ ವಾರ್ಷಿಕ ಮಹಾಸಭೆ ಕೌಟುಂಬಿಕ ಸ್ನೇಹ ಕೂಟ: ಅತಿಥಿಗಳು: ಜಯಪ್ರಕಾಶ್ ಹೆಗ್ಡೆ, ಲಕ್ಷ್ಮಣ ಕರಾವಳಿ, ಬಿರ್ತಿ ಶ್ರೀಧರ ಭಂಡಾರಿ, ಎಂ.ಬಿ. ಶಿವಕುಮಾರ್, ಉಮೇಶ್ ಎ., ಅಧ್ಯಕ್ಷತೆ: ಪ್ರಸಾದ್ ಭಂಡಾರಿ ಮುನಿಯಾಲು, ಆಯೋಜನೆ: ಭಂಡಾರಿ ಸಮಾಜ ಸಂಘ, ಸ್ಥಳ: ವೈಟ್ ಪ್ಯಾಲೆಸ್, ಮೈಸೂರು ರಸ್ತೆ, ಪಟ್ಟಣಗೆರೆ ಮೆಟ್ರೊ ನಿಲ್ದಾಣದ ಹತ್ತಿರ, ಬೆಳಿಗ್ಗೆ 8ರಿಂದ

ಎಸ್.ವಿ. ನಾರಾಯಣಸ್ವಾಮಿ ರಾವ್ ಅವರ 'ಎಸ್‌ವಿಎನ್-100' ಶತಮಾನೋತ್ಸವ ಸಮಾರಂಭ: ಸಾನ್ನಿಧ್ಯ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಅತಿಥಿಗಳು: ಟಿ.ವಿ. ಗೋಪಾಲಕೃಷ್ಣನ್, ಸತ್ಯಧ್ಯಾನಾಚಾರ್ ಕಟ್ಟಿ, ಅರಳುಮಲ್ಲಿಗೆ ಪಾರ್ಥಸಾರಥಿ, ಎ.ವಿ. ಆನಂದ, ವಿದ್ಯಾಭೂಷಣ, ಕೆ.ಸಿ. ರಾಮಮೂರ್ತಿ, ಶಾರದಾ ನಟರಾಜನ್, ಭಾಸ್ಕರ್ ರಾವ್, ಆರ್. ಪೂರ್ಣಿಮಾ, ರವೀಂದ್ರ ಭಟ್ಟ, ಅಧ್ಯಕ್ಷತೆ: ಎ. ರವೀಂದ್ರ, ಆಯೋಜನೆ: ರಾಮಸೇವಾ ಮಂಡಲಿ ಟ್ರಸ್ಟ್, ಸ್ಥಳ: ಎಸ್.ವಿ. ನಾರಾಯಣಸ್ವಾಮಿ ರಾವ್ ಸ್ಮಾರಕ ಸಭಾಂಗಣ, ನೆಟ್ಟಿಗೆರೆ ಗ್ರಾಮ, ಸೋಮನಹಳ್ಳಿ, ಕನಕಪುರ ರಸ್ತೆ, ಬೆಳಿಗ್ಗೆ 9.30ರಿಂದ

ವಾರ್ಷಿಕೋತ್ಸವ: ವಾರ್ಷಿಕ ಸಂಚಿಕೆ 'ವಿದ್ಯಾಶ್ರೀ' ಬಿಡುಗಡೆ: ಜ್ಯೋತಿಶಂಕರ್, ಬಹುಮಾನ ವಿತರಣೆ: ಡಾ. ಕಿರಣಕುಮಾರ್ ಎನ್., ಶಾರೀರಿಕ ಪ್ರದರ್ಶನ: ಅಧ್ಯಕ್ಷತೆ: ರಮೇಶಚಂದ್ರ ಲಹೋಟಿ, ಅತಿಥಿ: ಎಸ್.ಆರ್. ಲೀಲಾ, ಆಯೋಜನೆ ಮತ್ತು ಸ್ಥಳ: ಜನಸೇವಾ ವಿದ್ಯಾಕೇಂದ್ರ, ಚನ್ನೇನಹಳ್ಳಿ, ಬೆಳಿಗ್ಗೆ 9.45ರಿಂದ

ರಾಜ್ಯಮಟ್ಟದ ಮಹಿಳಾ ಮಹಾಸಮ್ಮಿಲನ: ಉದ್ಘಾಟನೆ: ಗಾಯತ್ರಿದೇವಿ ವಾಸುದೇವ್, ಅಧ್ಯಕ್ಷತೆ: ಶುಭಮಂಗಳ ಆಚಾರ್ಯ, ಆಯೋಜನೆ: ಜ್ಞಾನ ಜ್ಯೋತಿ ಜ್ಯೋತಿಷ್ಯ ವಿದ್ಯಾಕೇಂದ್ರ, ಸ್ಥಳ: ಸಾಂಸ್ಕೃತಿಕ ಸಭಾಂಗಣ, ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಬೆಳಿಗ್ಗೆ 10

'ಆಚಾರ್ಯ ಬಿ.ಎಂ.ಶ್ರೀ. ಪ್ರಶಸ್ತಿ' ಪ್ರದಾನ: ಪ್ರಶಸ್ತಿ ಪುರಸ್ಕೃತರು: ಎಸ್.ಎಲ್. ಭೈರಪ್ಪ, ಅತಿಥಿ: ಬಿ.ಎನ್. ಶ್ರೀಕೃಷ್ಣ, ಅಧ್ಯಕ್ಷತೆ: ಎ.ವಿ. ಪ್ರಸನ್ನ, ಆಯೋಜನೆ ಮತ್ತು ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿ, ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿನಿಲಯ, ಶೇಷಾದ್ರಿ ರಸ್ತೆ, ಬೆಳಿಗ್ಗೆ 10.30



ಎಸ್.ಎಲ್. ಭೈರಪ್ಪ

ದು. ಸರಸ್ವತಿ ಅವರ 'ಬೀದಿಹೆಣ್ಣು' ಪುಸ್ತಕ ಬಿಡುಗಡೆ, ಸಂವಾದ: ಪುಸ್ತಕ ಬಿಡುಗಡೆ: ಜ್ಯೋತಿ ನಿಶಾ, ಪುಸ್ತಕದ ಕುರಿತು: ದಯಾ ಗಂಗನಘಟ್ಟ, ಆಯೋಜನೆ: ತಮಟೆ ಮೀಡಿಯಾ ಜಂಗಮ ಕಲೆಕ್ಟಿವ್ ಬಿ. ಕಲ್ಚರ್, ಸ್ಥಳ: ಡಿ. ದೇವರಾಜ ಅರಸು ಗ್ಯಾಲರಿ, ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

'ಮಾಸಿಕ ಮಂಟಪ': ಅಧ್ಯಕ್ಷತೆ: ಮಹೇಂದ್ರ ಮುನ್ನೋಟ್, 'ವಚನಗಳಲ್ಲಿ ಆಧ್ಯಾತ್ಮ ಮತ್ತು ಆರೋಗ್ಯದ ಅರಿವು' ಕುರಿತು ಉಪನ್ಯಾಸ: ರುದ್ರಮೂರ್ತಿ, ಆಯೋಜನೆ ಮತ್ತು ಸ್ಥಳ: ದೀಪಾ ಅಂಧ ಮಕ್ಕಳ ವಸತಿಯುವ ಪ್ರೌಢಶಾಲೆ, ಭಾರತ್‌ನಗರ, ಬೆಳಿಗ್ಗೆ 11.30

ಕರ್ನಾಟಕ ರಾಜ್ಯೋತ್ಸವ 50ರ ಸಂಭ್ರಮ: ಉದ್ಘಾಟನೆ: ಎಂ. ಪ್ರಕಾಶಮೂರ್ತಿ, ಅಧ್ಯಕ್ಷತೆ: ಸಿ.ಎಂ. ತಿಮ್ಮಯ್ಯ, ಅತಿಥಿಗಳು: ಕಮನಿಧರನ್, ಕೆ.ಎಸ್. ವೆಂಕಟೇಶುಲು, ಮಧುರ ಅಶೋಕ್ ಕುಮಾರ್, ಸನ್ಮಾನ: ಬಿ. ಕೃಷ್ಣಪ್ಪ, ಆಯೋಜನೆ: ವಿ.ಕೆ.ಎಂ. ಕಲಾವಿದರು, ಸ್ಥಳ: ಬಯಲು ರಂಗಮಂದಿರ, ಜಗಜೀವನರಾಮ್ ನಗರ, ಸಂಜೆ 4

ಕನಕದಾಸರ ಜಯಂತಿ: ಸಾನ್ನಿಧ್ಯ: ಈಶ್ವರಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಎಚ್.ಎಂ. ರೇವಣ್ಣ, ಅತಿಥಿಗಳು: ಬಿ.ಎಸ್. ಸುರೇಶ್, ಪ್ರಿಯಾಕೃಷ್ಣ, ಚಂದ್ರಶೇಖರ್ ಎಂ. ಗಂಗಣ್ಣ, ಕೆ. ಜಯಪ್ರಕಾಶ್, ಎಚ್. ಕಾಂತರಾಜ, ಸಿ. ಬಸವರಾಜು, ಅಧ್ಯಕ್ಷತೆ: ಟಿ.ಬಿ. ಬಳಗಾವಿ, ಆಯೋಜನೆ: ರಾಜ್ಯ ನೌಕರರ ಮತ್ತು ಕಾರ್ಮಿಕರ ಕೇಂದ್ರ ಕನಕ ಸಮಿತಿ, ಸ್ಥಳ: ಕನಕ ಭವನ, ಗಂಗೊಂಡನಹಳ್ಳಿ, ಚಂದ್ರಾ ಬಡಾವಣೆ, ಸಂಜೆ 4.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸಂಸ್ಕೃತಿ ಕೇಶವನ್, ಅತಿಥಿಗಳು: ಪದ್ಮಿನಿ ಅಚ್ಚಿ, ಬ.ಲ. ಸುರೇಶ್, ವಿ.ಎಸ್. ನಾಯಕ ಬಳಕೂರು, ಸ್ಥಳ: ಜ್ಞಾನಸೌಧ ಸಭಾಂಗಣ, ಕಲ್ಯಾಣನಗರ, ನಾಗರಬಾವಿ, ಸಂಜೆ 5.30

ಶರಣ ಮಾದಾರ ಚೆನ್ನಯ್ಯ ಜಯಂತಿ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಉಪನ್ಯಾಸ: ಎಸ್. ರಾಮಲಿಂಗೇಶ್ವರ, ಅತಿಥಿ: ಆರ್. ಚನ್ನಕೇಶವ ಮೂರ್ತಿ, ಅಧ್ಯಕ್ಷತೆ: ಸಿಂ.ರಾ. ಹೊನ್ನಲಿಂಗಯ್ಯ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ರಾಜರಾಜೇಶ್ವರಿನಗರ, ಸ್ಥಳ: ಪೂರ್ಣಚಂದ್ರ ರಂಗಮಂದಿರ, ಡಿ ಗ್ರೂಪ್ ಬಡಾವಣೆ, ಸಂಜೆ 5.30

'ಚಂದ್ರಾವಳಿ' ಯಕ್ಷಗಾನ ಪ್ರದರ್ಶನ: ಪ್ರಸ್ತುತಿ: ಸುವರ್ಣ ಪ್ರಸಾಧನ ಯಕ್ಷರಂಗ, ಆಯೋಜನೆ: ಸುರಭಾರತೀ ಸಂಸ್ಕೃತ ಸಂಸ್ಕೃತಿ ಪ್ರತಿಷ್ಠಾನಂ, ಸ್ಥಳ: 9ನೇ ಸಿ ಮುಖ್ಯರಸ್ತೆ, ಸರ್ವೀಸ್ ರಸ್ತೆ, ಎಚ್‌ಆರ್‌ಬಿಆರ್ ಬಡಾವಣೆ, ಬಾಣಸವಾಡಿ, ಸಂಜೆ 5.30

ಹನುಮ ಜಯಂತಿ ಅಂಗವಾಗಿ 'ತ್ಯಾಗಿ' ನಾಟಕ ಪ್ರದರ್ಶನ: ಪ್ರಸ್ತುತಿ: ಪರಸ್ಪರ ಸೇವಾ ಸಂಸ್ಥೆ, ನಿರ್ದೇಶನ: ರಾಮಚಂದ್ರ, ಉದ್ಘಾಟನೆ: ವೆಂಕಟಪ್ಪ, ಅಧ್ಯಕ್ಷತೆ: ರಾಮಚಂದ್ರ, ಆಯೋಜನೆ: ಯಶಸ್ವಿನಿ ಸಾಂಸ್ಕೃತಿಕ ಕಲಾ ಟ್ರಸ್ಟ್, ಸ್ಥಳ: ಪ್ರಸನ್ನ ದೊಡ್ಡ ಆಂಜನೇಯಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನಡುರಸ್ತೆಯಲ್ಲಿ ಅಟ್ಟಾಡಿಸಿ ರೌಡಿ 'ನಾಯಿ ಅಪ್ಪಿ' ಹತ್ಯೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಲಕ್ಕಸಂದ್ರದ ಆಂಜನೇಯಸ್ವಾಮಿ ದೇವಸ್ಥಾಮಿ ಬಳಿ ಹಮ್ಮಿಕೊಂಡಿದ್ದ ಅನ್ನದಾನ ಕಾರ್ಯಕ್ರಮದಲ್ಲಿ ಭಾನುವಾರ ಪಾಲ್ಗೊಂಡಿದ್ದ ರೌಡಿ ಜಯಪ್ರಕಾಶ್ ಅಲಿಯಾಸ್ ನಾಯಿ ಅಪ್ಪಿಯನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದಾರೆ.

'ಸ್ಥಳೀಯ ನಿವಾಸಿಯಾಗಿದ್ದ ಜಯಪ್ರಕಾಶ್, ಅಪರಾಧ ಹಿನ್ನೆಲೆಯುಳ್ಳವ. ಭಾನುವಾರ ಸಂಜೆ ಈತನ ಮೇಲೆ ದಾಳಿ ಮಾಡಿದ್ದ ದುಷ್ಕರ್ಮಿಗಳ ತಂಡ, ನಡುರಸ್ತೆಯಲ್ಲಿ ಅಟ್ಟಾಡಿಸಿಕೊಂಡು ಮಾರ-ಕಾಸ್ತ್ರಗಳಿಂದ ಹೊಡೆದು ಹತ್ಯೆ ಮಾಡಿದೆ. ಹಳೇ ವೈಷಮ್ಯದಿಂದ ಕೊಲೆ ನಡೆದಿರುವ ಶಂಕೆ ಇದ್ದು, ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆಡುಗೋಡಿ ಠಾಣೆ ವ್ಯಾಪ್ತಿಯಲ್ಲಿರುವ ಲಕ್ಕಸಂದ್ರದ ಬಸ್ ತಂಗುದಾಣ ಬಳಿಯೇ ದೇವಸ್ಥಾನವಿದೆ. ಪ್ರತಿ ವರ್ಷದಂತೆ ಈ ವರ್ಷವೂ ಅನ್ನದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಜಯಪ್ರಕಾಶ್ ಸಹ ಕಾರ್ಯಕ್ರಮದಲ್ಲಿದ್ದ. ಮಾರಕಾಸ್ತ್ರ ಸಮೇತ ಬಂದಿದ್ದ ದುಷ್ಕರ್ಮಿಗಳು, ಏಕಾಏಕಿ ದಾಳಿ ಮಾಡಿದ್ದರು. ಪ್ರಾಣ ಭಯದಲ್ಲಿ ಜಯಪ್ರಕಾಶ್ ತಪ್ಪಿಸಿಕೊಂಡು ರಸ್ತೆಯಲ್ಲಿ ಓಡಲಾರಂಭಿಸಿದ್ದ. ದುಷ್ಕರ್ಮಿಗಳು, ಮಾರಕಾಸ್ತ್ರ ಹಿಡಿದುಕೊಂಡು ಬೆನ್ನಟ್ಟಿದ್ದರು.'

'ರಸ್ತೆ ಪಕ್ಕದಲ್ಲಿದ್ದ ಹೋಟೆಲ್‌ಗೆ ಜಯ ಪ್ರಕಾಶ್ ನುಗ್ಗಿದ್ದ. ದುಷ್ಕರ್ಮಿಗಳು ಅದೇ ಹೋಟೆಲ್‌ಗೆ ನುಗ್ಗಿದ್ದರು. ಅಲ್ಲಿಯೇ ಜಯಪ್ರಕಾಶ್‌ನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ. ಕೊಲೆ ದೃಶ್ಯ ನೋಡಿದ ಗ್ರಾಹಕರು, ಹೋಟೆಲ್‌ನಿಂದ ದಿಕ್ಕಾಪಾಲಾಗಿ ಹೊರಗೆ ಓಡಿಹೋದರು' ಎಂದು ತಿಳಿಸಿದರು.

'2006ರಲ್ಲಿ ನಡೆದಿದ್ದ ಕೊಲೆ ಪ್ರಕರಣದ ಆರೋಪಿಯಾಗಿದ್ದ ಜಯಪ್ರಕಾಶ್, ಜೈಲಿಗೆ ಹೋಗಿ ಬಂದಿದ್ದ. ಆಟೊ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಕೊಲೆ ನಡೆದ ಸ್ಥಳ, ಸಚಿವ ರಾಮಲಿಂಗಾರೆಡ್ಡಿ ಮನೆ ಸಮೀಪದಲ್ಲಿದೆ' ಎಂದು ಪೊಲೀಸರು ಹೇಳಿದರು.

ವೀರಶೈವ–ಲಿಂಗಾಯತ ಒಳ ಪಂಗಡಗಳನ್ನು ಒಬಿಸಿ ಪಟ್ಟಿಗೆ ಶಿಫಾರಸು ಸೇರಿ 8 ನಿರ್ಣಯಗಳ ಮಂಡನೆ

‘ಲಿಂಗಾಯತರ ಬಿಟ್ಟು ಆಳ್ವಿಕೆ ಸಾಧ್ಯವಿಲ್ಲ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ದೂರದೃಷ್ಟಿ ಹೊಂದಿರುವ ವೀರಶೈವ–ಲಿಂಗಾಯತ ಸಮಾಜವನ್ನು ನಿರ್ಲಕ್ಷಿಸಲು ಯಾರಿಗೂ ಸಾಧ್ಯವಿಲ್ಲ. ನಮ್ಮನ್ನು ಬಿಟ್ಟು ಈ ರಾಜ್ಯವನ್ನು ಆಳಲು ಅಥವಾ ಯಾವುದಾದರೂ ಕಾರ್ಯಕ್ರಮ ರೂಪಿಸಲು ಯಾರಿಗೂ ಸಾಧ್ಯವಿಲ್ಲ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ಇಲ್ಲಿ ನಡೆದ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನದಲ್ಲಿ ಮಾತನಾಡಿದ ಅವರು, ‘ಜಾತಿ ಗಣತಿ ಹೆಸರಿನಲ್ಲಿ ಸಮಾಜವನ್ನು ಬೇರ್ಪಡಿಸುವ ಹುನ್ನಾರ ನಡೆದಿದೆ. ಕರ್ನಾಟಕದಲ್ಲಿ ನಡೆದಿರುವುದು ಜಾತಿ ಗಣತಿಯಲ್ಲ. ಸಮುದಾಯಗಳು ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಯಾವ ಸ್ಥಿತಿಯಲ್ಲಿವೆ ಎಂಬುದನ್ನು ಅಧ್ಯಯನ ಮಾಡಲು ನಿರ್ಧರಿಸಲಾಗಿತ್ತು. ಜಾತಿ ಗಣತಿ ಎಂದು ಆದೇಶ ಹೊರಡಿಸಿ ಸಮೀಕ್ಷೆ ನಡೆಸಿಲ್ಲ’ ಎಂದರು.

‘ಎಲ್ಲ ಸಮುದಾಯಗಳಿಗೆ ಯೋಜನೆ, ಕಾರ್ಯಕ್ರಮ ರೂಪಿಸಲು ಜಾತಿ ಗಣತಿ ಅಗತ್ಯವಿದೆ. ಆದರೆ, ಇದನ್ನು ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿರುವುದು ಸರಿಯಲ್ಲ’ ಎಂದು ತಿಳಿಸಿದರು.

ಸಂಬಂಧ ಯಾಕಿಲ್ಲ: ‘ಒಳ ಪಂಗಡಗಳಲ್ಲಿ ಸಂಬಂಧ ಬೆಳೆಸಬೇಕು. ಈಗ ಶಾಮನೂರು ಶಿವಶಂಕರಪ್ಪ ನಮ್ಮ ಬೀಗರು. ಒಳ ಪಂಗಡಗಳ ಜೊತೆ ಸಂಬಂಧ ಬೆಳೆಸದಿದ್ದರೆ ವೀರಶೈವರು ಬೆಳೆಯಲು ಸಾಧ್ಯವಿಲ್ಲ. ಆದ್ದರಿಂದ ಬಿಎಸ್‌ವೈ, ಶಾಮನೂರು ಕುಟುಂಬದ ಜೊತೆ ಸಂಬಂಧ ಬೆಳೆಸಲಿ’ ಎಂದು ವಿಧಾನಪರಿಷತ್ ಸದಸ್ಯ ಜಗದೀಶ್ ಶೆಟ್ಟರ್ ಸಲಹೆ ನೀಡಿದರು.

‘ವೀರಶೈವ–ಲಿಂಗಾಯತರು ಮೊದಲು ಒಳಪಂಗಡದ ಜಗಳ ಬಿಡಬೇಕು. ಆಗ ಮಾತ್ರ ಸಮಾಜ ಉದ್ಧಾರ ಆಗುತ್ತದೆ. ಇದಕ್ಕೆ ಶಾಮನೂರು ಶಿವಶಂಕರಪ್ಪ ನಿದರ್ಶನ. ಇವರು ಎಲ್ಲ ಒಳಪಂಗಡಗಳ ಜೊತೆ ಸಂಬಂಧ ಬೆಳೆಸಿದ್ದಾರೆ. ಆದರೆ ಬಿ.ಎಸ್. ಯಡಿಯೂರಪ್ಪ ಅವರ ಕುಟುಂಬದ ಜೊತೆ ಸಂಬಂಧ ಬೆಳೆಸಿಲ್ಲ. ಅವರು ಸಂಬಂಧ ಬೆಳೆಸಲಿ’ ಎಂದು ಉಜ್ಜಯಿನಿ ಪೀಠದ ಸಿದ್ದಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ ಆಶಿಸಿದರು.

‘ಬಸವಣ್ಣ ಸಾಂಸ್ಕೃತಿಕ ನಾಯಕನೆಂದು ಘೋಷಿಸಿ’

ಒಂದನೇ ಪುಟದಿಂದ...

‘ನಾವೆಲ್ಲರೂ ಭಿನ್ನಾಭಿಪ್ರಾಯ ಬದಿಗೊತ್ತಿ ಒಗ್ಗಟ್ಟಾಗಿ ಮುಂದೆ ಸಾಗಬೇಕು ಎಂಬ ಉದ್ದೇಶದಿಂದ ಶಾಮನೂರು ಶಿವಶಂಕರಪ್ಪನವರು ಈ ಪ್ರಯತ್ನ ಮಾಡಿದ್ದಾರೆ. ನಮ್ಮದು ಶಕ್ತಿಯುತ ಸಮಾಜ. ನಮ್ಮ ನೆಲೆ ಗಟ್ಟಿಯಾಗಿದೆ. ನಾವು ಇತರ ಸಮುದಾಯಗಳನ್ನೂ ಜೊತೆಗೆ ಕರೆದೊಯ್ಯುವ ಮೂಲಕ ಇನ್ನಷ್ಟು ಪ್ರಬಲವಾಗಬೇಕು. ವೀರಶೈವ– ಲಿಂಗಾಯತರನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಬೇಕೆಂಬ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ’ ಎಂದರು.

‘ಸಚಿವ ಸ್ಥಾನದಲ್ಲಿ ಇದ್ದುಕೊಂಡು ಮಹಾ ಅಧಿವೇಶನದ ನಿರ್ಣಯಗಳನ್ನು ಬೆಂಬಲಿಸುತ್ತೇನೆ. ಸಮಾಜದ ಎಲ್ಲಾ ಒಳ ಪಂಗಡಗಳೂ ಒಗ್ಗೂಡುವ ಕಾಲ ಸನ್ನಿಹಿತವಾಗಿದೆ. ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ನಾವೆಲ್ಲ ಒಂದಾಗಬೇಕು’ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

‘ಸಮುದಾಯದ ಒಳ ಪಂಗಡಗಳನ್ನು ಒಬಿಸಿ ಪಟ್ಟಿಗೆ ಸೇರ್ಪಡೆ ಮಾಡುವಂತೆ ರಾಜ್ಯ ಸರ್ಕಾರ ಕೂಡಲೇ ಶಿಫಾರಸು ಮಾಡಬೇಕು. ಇದನ್ನು ಅಂಗೀಕರಿಸುವಂತೆ ಯಡಿಯೂರಪ್ಪನವರು ಕೇಂದ್ರದ ಮೇಲೆ ಒತ್ತಡ ಹೇರಬೇಕು’ ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಮಹಾ ಅಧಿವೇಶನದ ನಿರ್ಣಯಗಳು

- ದೇಶದ ಅಖಂಡತೆ, ಏಕತೆ, ಸಮಗ್ರತೆ, ಭದ್ರತೆಯ ರಕ್ಷಣೆಗೆ ‘ಮಹಾಸಭೆ’ ಹಾಗೂ ಸಮುದಾಯ ಕಟಿಬದ್ಧವಾಗಿದೆ. ಇದಕ್ಕೆ ಸಂಬಂಧಿಸಿದ ಹೋರಾಟ, ಪ್ರಯತ್ನಗಳಿಗೆ ಪ್ರೋತ್ಸಾಹ, ಬೆಂಬಲ ನೀಡುತ್ತದೆ.
- ಜಗಜ್ಯೋತಿ ಬಸವೇಶ್ವರರ ಚಿಂತನೆ, ಅನುಭಾವ ಸಾರ್ವಕಾಲಿಕವಾಗಿದ್ದು, ಅವರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ಸರ್ಕಾರ ಅಧಿಕೃತವಾಗಿ ಘೋಷಿಸಬೇಕು.
- ವೀರಶೈವ -ಲಿಂಗಾಯತ ಸಮುದಾಯದಲ್ಲಿ ಲಕ್ಷಾಂತರ ಕಡು ಬಡವರಿದ್ದಾರೆ. ಹೀಗಾಗಿ ಎಲ್ಲಾ ಒಳಪಂಗಡಗಳನ್ನೂ ಒಬಿಸಿ ಪಟ್ಟಿಗೆ ಸೇರಿಸಲು ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಬೇಕು. ಕೇಂದ್ರ ಅದನ್ನು ಅಂಗೀಕರಿಸಬೇಕು.
- ಜಾತಿ ಗಣತಿಯು 8 ವರ್ಷಗಳಷ್ಟು ಹಳೆಯದ್ದು. ಅಧಿಕೃತವಾಗಿ ಅಂಗೀಕಾರವಾಗುವ ಮೊದಲೇ ಅದರಲ್ಲಿನ ಅಂಶಗಳು ಸೋರಿಕೆಯಾಗಿವೆ. ಕಾಂತರಾಜ ಆಯೋಗದ ವರದಿಯನ್ನು ಸರ್ಕಾರ ಒಪ್ಪಿಕೊಳ್ಳದೆ ವಾಸ್ತವಿಕತೆ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿಯ ಆಧಾರದ ಮೇಲೆ ಹೊಸದಾಗಿ ಜಾತಿ ಜನಗಣತಿ ಕೈಗೊಳ್ಳಬೇಕು.
- ಸರ್ಕಾರ ಮುಂದಿನ ದಿನಗಳಲ್ಲಿ ನಡೆಸುವ ಜನ ಗಣತಿಯ ವೇಳೆ ಸಮಾಜದವರು ಧರ್ಮದ ಕಾಲಂನಲ್ಲಿ ವೀರಶೈವ–ಲಿಂಗಾಯತ ಎಂದೇ ಬರೆಸಬೇಕು.
- ರೈತರ ಹಿತದೃಷ್ಟಿಯಿಂದ ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು.
- ಎಸ್.ನಿಜಲಿಂಗಪ್ಪನವರು ವಾಸವಿದ್ದ ಚಿತ್ರದುರ್ಗದ ಅವರ ನಿವಾಸವನ್ನು ಸರ್ಕಾರ ಖರೀದಿಸಿ, ಶಾಶ್ವತ ಸ್ಮಾರಕ ನಿರ್ಮಿಸಬೇಕು. ಅವರ ಪುಣ್ಯ ಸ್ಮರಣೆಯ ದಿನವಾದ 2024ರ ಆಗಸ್ಟ್ 8ರೊಳಗೆ ಈ ಕಾರ್ಯ ಪೂರ್ಣಗೊಳಿಸಬೇಕು.
- ಸಮ್ಮೇಳನಕ್ಕೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಮರ್ಪಣೆ.



ಕ್ರಿಸ್‌ಮಸ್... ಕ್ರಿಸ್‌ಮಸ್ ಹಬ್ಬಕ್ಕಾಗಿ ವಿದ್ಯುತ್ ದೀಪಾಲಂಕಾರದಿಂದ ಭಾನುವಾರ ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್ ಅನ್ನು ಸಿಂಗರಿಸಲಾಗಿದೆ

ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.

ದೇಶದ್ರೋಹಿಯೋ, ದೇಶಪ್ರೇಮಿಯೋ ಜನ ನಿರ್ಧರಿಸುತ್ತಾರೆ–ಪ್ರತಾಪ ಸಿಂಹ

ಪ್ರಜಾವಾಣಿ ವಾರ್ತೆ



ಪ್ರತಾಪ ಸಿಂಹ

ಮೈಸೂರು: ‘ನಾನು ದೇಶಪ್ರೇಮಿಯೋ ಅಥವಾ ದೇಶದ್ರೋಹಿಯೋ ಎಂಬುದನ್ನು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈಸೂರು- ಕೊಡಗು ಕ್ಷೇತ್ರದ ಜನರು ತೀರ್ಮಾನಿಸುತ್ತಾರೆ’ ಎಂದು ಬಿಜೆಪಿ ಸಂಸದ ಪ್ರತಾಪ ಸಿಂಹ ಹೇಳಿದರು.

ಸಂಸತ್ತಿನಲ್ಲಿ ಭದ್ರತಾ ಲೋಪ ಪ್ರಕರಣದ ಆರೋಪಿ ಡಿ.ಮನೋರಂಜನ್ ಅವರಿಗೆ ಪಾಸ್ ನೀಡುವಂತೆ ಶಿಫಾರಸು ಮಾಡಿದ್ದ ಬಗ್ಗೆ ಇದೇ ಮೊದಲ ಬಾರಿಗೆ ಇಲ್ಲಿ ಭಾನುವಾರ ಪ್ರತಿಕ್ರಿಯಿಸಿದರು.

‘ಆ ವಿಚಾರದಲ್ಲಿ ಯಾವುದೇ ವಿವರಣೆ ಕೊಡುವುದಿಲ್ಲ. ನಾನು ದೇಶದ್ರೋಹಿಯೇ ಅಥವಾ ದೇಶಪ್ರೇಮಿಯೇ ಎನ್ನುವುದು ಬೆಟ್ಟದ ಚಾಮುಂಡಿ ತಾಯಿ ಹಾಗೂ ಕೊಡಗಿನ ಕಾವೇರಿ ತಾಯಿಗೆ ಗೊತ್ತು. ನನ್ನ ಲೇಖನಗಳನ್ನು ಓದಿದ ರಾಜ್ಯದ ಜನರಿಗೆ ಗೊತ್ತು’ ಎಂದು ಹೇಳಿದರು. ‘ಆ ಬಗ್ಗೆ ಹೆಚ್ಚು ಕೇಳಬೇಡಿ’ ಎಂದರು.

ಹಿಜಾಬ್ ನಿಷೇಧ ವಾಪಸ್ ಪಡೆಯುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಇದು ಹಿಂದೂ-ಮುಸ್ಲಿಂ ಎಂಬ ವಿಚಾರವಲ್ಲ. ವಸ್ತ್ರಸಂಹಿತೆ ಎಂದಿರುತ್ತದೆ. ಅದನ್ನು ಪಾಲಿಸಬೇಕಷ್ಟೆ. ವಿದ್ಯಾರ್ಥಿಗಳಲ್ಲಿ ತಾರತಮ್ಯ ಉಂಟು ಮಾಡುವುದು ಸರಿಯಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಇದನ್ನು ಅರಿಯಬೇಕು’ ಎಂದು ಹೇಳಿದರು.

‘ಚುನಾವಣೆ ಬಳಿಕ ನಿರ್ಣಯ ಕೈಗೊಳ್ಳುವೆ’

ವಿಜಯೇಂದ್ರ ನೇತೃತ್ವದಲ್ಲಿ ಕೆಜೆಪಿ ಭಾಗ–2 ರಚನೆ: ಬಸನಗೌಡ ಪಾಟೀಲ ಯತ್ನಾಳ ಅಸಮಾಧಾನ

ಪ್ರಜಾವಾಣಿ ವಾರ್ತೆ



ಬಸನಗೌಡ ಪಾಟೀಲ ಯತ್ನಾಳ

ವಿಜಯಪುರ: ‘2024ರ ಲೋಕಸಭಾ ಚುನಾವಣೆ ಬಳಿಕ ಪಕ್ಷದ ರಾಜ್ಯ ಘಟಕಕ್ಕೆ ಮೇಜರ್ ಸರ್ಜರಿ ಆಗದಿದ್ದರೆ, ಮುಂದಿನ ನಿರ್ಣಯ ಕೈಗೊಳ್ಳುತ್ತೇನೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಎಚ್ಚರಿಕೆ ನೀಡಿದರು.


ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಿ.ವೈ. ವಿಜಯೇಂದ್ರ ತಮಗೆ ಬೇಕಾದವರನ್ನು ಬಿಜೆಪಿ ರಾಜ್ಯ ಘಟಕದ ಪದಾಧಿಕಾರಿಗಳನ್ನಾಗಿ ನೇಮಕ ಮಾಡುವ ಮೂಲಕ ‘ಕೆಜೆಪಿ ಭಾಗ-2’ ರಚನೆ ಮಾಡಿದ್ದಾರೆ’ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

‘ಯಡಿಯೂರಪ್ಪ ಈ ಹಿಂದೆ ಬಿಜೆಪಿ ತೊರೆದು ಕೆಜೆಪಿ ಭಾಗ–1 ಕಟ್ಟಿದ್ದರು. ಇದೀಗ ಅವರ ಮಗ ವಿಜಯೇಂದ್ರ ಬಿಜೆಪಿಯಲ್ಲೇ ಇದ್ದು, ಕೆಜೆಪಿ ಭಾಗ–2 ಕಟ್ಟಿದ್ದಾರೆ. ಇದರ ಆಯುಷ್ಯ 2024 ಲೋಕಸಭಾ ಚುನಾವಣೆ ವರೆಗೆ ಮಾತ್ರ. 28 ಸ್ಥಾನ ತರುತ್ತೇನೆ ಎಂದು ಅವರು ವರಿಷ್ಠರಿಗೆ ಭರವಸೆ ನೀಡಿದ್ದಾರೆ. ಒಂದು ಸ್ಥಾನ ಕಡಿಮೆಯಾದರೂ ಅವರ ಸ್ಥಾನ ತೆರವು ನಿಶ್ಚಿತ’ ಎಂದರು.

‘ಪಕ್ಷದ ವರಿಷ್ಠರು ಕಳ್ಳರ ಕೈಗೆ ಚಾವಿ ಕೊಟ್ಟಿದ್ದಾರೆ. ಲೋಕಸಭೆಯಲ್ಲಿ 28 ಸ್ಥಾನ ಬರಲಿಲ್ಲ ಎಂದರೆ ಚಾವಿ ಕಸಿದುಕೊಳ್ಳುತ್ತಾರೆ. ರಾಜಕೀಯದಲ್ಲಿ ಸದ್ಯ ಕಳ್ಳರು, ಲಫಂಗರು ಹೆಚ್ಚಾಗಿದ್ದಾರೆ. ಮೌಲ್ಯಾಧಾರಿತ ರಾಜಕಾರಣ ಇಲ್ಲವಾಗಿದೆ’ ಎಂದು ದೂರಿದರು.

ಕಲಬುರಗಿ ವರದಿ: ‘ವಿಜಯೇಂದ್ರ ತಾವು ಹೇಳಿದಂತೆ ಲೋಕಸಭಾ ಚುನಾವಣೆಯಲ್ಲಿ 28 ಕ್ಷೇತ್ರಗಳನ್ನು ಗೆದ್ದು ತರಬೇಕು. 27 ಸ್ಥಾನ ತಂದರೂ ನಡೆಯಲ್ಲ. ಚುನಾವಣೆ ಬಳಿಕ ಮಧ್ಯಪ್ರದೇಶ, ರಾಜಸ್ಥಾನ ಮಾದರಿಯಲ್ಲಿ ಎಲ್ಲರನ್ನೂ ತೆಗೆಯುತ್ತಾರೆ’ ಎಂದು ಶಾಸಕ ಯತ್ನಾಳ ಎಚ್ಚರಿಸಿದರು.

ಶಾಸಕ ಯತ್ನಾಳ ವಿರುದ್ಧ ದೂರು ನೀಡಲ್ಲ: ಯಡಿಯೂರಪ್ಪ



ಯಡಿಯೂರಪ್ಪ

ದಾವಣಗೆರೆ: ‘ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಯಾವ ಹೇಳಿಕೆಗೂ ಪ್ರತಿಕ್ರಿಯಿಸುವುದಿಲ್ಲ. ಅವರ ವಿರುದ್ಧ ಹೈಕಮಾಂಡ್‌ಗೆ ದೂರು ಕೂಡ ನೀಡುವುದಿಲ್ಲ. ಮುಂದಿನ ದಿನಗಳಲ್ಲಿ ಎಲ್ಲವೂ ಸರಿ ಹೋಗಲಿದೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಭಾನುವಾರ ಹೇಳಿದರು.

‘ಪಕ್ಷದ ರಾಜ್ಯ ಘಟಕದ ಪದಾಧಿಕಾರಿಗಳನ್ನು ಅಳೆದು ತೂಗಿ ಆಯ್ಕೆ ಮಾಡಲಾಗಿದೆ. ಈ ವಿಚಾರದಲ್ಲಿ ಪರ–ವಿರೋಧದ ಮಾತೇ ಎದುರಾಗಲ್ಲ. ಎಲ್ಲರೂ ಜವಾಬ್ದಾರಿ ಅರಿತು ಕೆಲಸ ಮಾಡಬೇಕು’ ಎಂದು ತಿಳಿಸಿದರು.

‘ನಾವು ಅಲ್ಪಸಂಖ್ಯಾತರ ವಿರೋಧಿಗಳಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತರು ಒಂದೇ ತಾಯಿ ಮಕ್ಕಳಂತೆ ಬಾಳಬೇಕು. ಇದು ಪ್ರಧಾನಿ ಮೋದಿಯವರ ಆಸೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಾತಿಯ ವಿಷ ಬೀಜ ಬಿತ್ತುವ ಕೆಲಸ ನಿಲ್ಲಿಸಲಿ’ ಎಂದರು.

ಹಿಜಾಬ್‌ಗೆ ಮತ್ತೆ ಅವಕಾಶ ಬೇಡ: ಕಲ್ಲಡ್ಕ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಶಾಲೆ-ಕಾಲೇಜುಗಳಲ್ಲಿ ಹಿಜಾಬ್ ನಿಷೇಧ ಆದೇಶ ಹಿಂಪಡೆಯುವುದು ಪ್ರಜಾಪ್ರಭುತ್ವ ವಿರೋಧಿ ನಡೆಯಾಗಿದ್ದು, ಮಕ್ಕಳಲ್ಲಿ ಮತ್ತೆ ಪ್ರತ್ಯೇಕತೆಯ ಬೀಜ ಬಿತ್ತಬೇಡಿ’ ಎಂದು ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಭಾನುವಾರ ಹಿಂದೂ ಜಾಗರಣಾ ವೇದಿಕೆಯು ಆಯೋಜಿಸಿದ್ದ ಹನುಮಾನ್ ಮಾಲೆ ವಿಸರ್ಜನೆ ಮತ್ತು ಸಂಕೀರ್ತನಾ ಯಾತ್ರೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಹಿಜಾಬ್ ವಿರುದ್ಧ ಇರಾನ್, ಇರಾಕ್‌ನಲ್ಲಿ ಅಲ್ಲಿನ ಮುಸ್ಲಿಂ ಮಹಿಳೆಯರೇ ಪ್ರತಿಭಟಿಸಿದ್ದಾರೆ. ಹೀಗಿರುವಾಗ ನಮ್ಮಲ್ಲಿ ಹಿಜಾಬ್ ಪರ ಸರ್ಕಾರ ನಿರ್ಣಯ ತಾಳುತ್ತಿರುವುದು ಸರಿಯಲ್ಲ. ನೀವು ಹಿಜಾಬ್ ಧರಿಸಿ ಕಾಲೇಜಿಗೆ ಬಂದರೆ ನಮ್ಮ ಮಕ್ಕಳು ಕೇಸರಿ ಶಾಲು, ಟೋಪಿ ಧರಿಸಿ ಬರುತ್ತಾರೆ. ನೀವು ಅಲ್ಲಾಹು ಅಕ್ಬರ್ ಎಂದು ಘೋಷಣೆ ಕೂಗಿದರೆ, ನಾವು ಜೈಶ್ರೀರಾಂ ಘೋಷಣೆ ಕೂಗುತ್ತವೆ’ ಎಂದರು.

‘ರಾಜಕೀಯದವರಿಗೆ ಒಮ್ಮೊಮ್ಮೆ ಹುಚ್ಚು ಹಿಡಿಯುತ್ತದೆ. ಯಾವುದೋ ಉತ್ಸಾಹದಲ್ಲಿ ಹಿಜಾಬ್ ನಿಷೇಧ ಆದೇಶ ಹಿಂಪಡೆಯುವುದಾಗಿ ಸಿದ್ದರಾಮಯ್ಯ ಹೇಳಿಕೆ ನೀಡಿದ್ದರು. ಅದಕ್ಕೆ ವಿರೋಧ ವ್ಯಕ್ತವಾಗುತ್ತಲೇ ಯೂಟರ್ನ್ ತೆಗೆದುಕೊಂಡಿದ್ದು, ಯೋಚನೆ ಮಾಡುವುದಾಗಿ ಹೇಳಿದ್ದಾರೆ. ಹಾಗೆ ಯೋಚಿಸುವುದು ದೇಶದ್ರೋಹದ ಕೆಲಸ’ ಎಂದು ಹೇಳಿದರು.

‘ಮಂಡ್ಯದ ಒಬ್ಬ ಹೆಣ್ಣುಮಗಳು ಅಲ್ಲಾಹುವಿನ ಘೋಷಣೆ ಕೂಗಿದ್ದಕ್ಕೆ ಅಲ್‌ಖೈದಾದಂತಹ ಉಗ್ರ ಸಂಘಟನೆ ಅವಳ ಬೆಂಬಲಕ್ಕೆ ನಿಂತಿತ್ತು. ಅಲ್‌ಖೈದಾ ಬೀಜವನ್ನು ಇಲ್ಲಿ ಬಿತ್ತಲು ಸರ್ಕಾರ ಅವಕಾಶ ನೀಡುತ್ತದೆಯೇ’ ಎಂದು ಪ್ರಶ್ನಿಸಿದರು.

ಬಿಜೆಪಿಯ ನೂತನ ಪದಾಧಿಕಾರಿಗಳ ಸಭೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಬಿಜೆಪಿಯ ನೂತನ ಪದಾಧಿಕಾರಿಗಳ ಪಟ್ಟಿಯಲ್ಲಿ ವಿವಿಧ ಸಮಾಜಗಳು, ಪಂಗಡಗಳು, ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕ ಸೇರಿ ಎಲ್ಲ ಭಾಗಗಳಿಗೂ ಪ್ರಾತಿನಿಧ್ಯ ನೀಡಲಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ಪದಾಧಿಕಾರಿ ಪಟ್ಟಿಯಲ್ಲಿ ಪಕ್ಷವು ಯುವಕರು ಮತ್ತು ಹಿರಿಯರಿಗೆ ಆದ್ಯತೆ ನೀಡಿದೆ. ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ಮಾಡುವುದರ ಜತೆಗೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ 28 ಕ್ಷೇತ್ರಗಳಲ್ಲೂ ಪಕ್ಷದ ಎಲ್ಲ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ’ ಎಂದು ಹೇಳಿದರು.

‘ಮಂಗಳವಾರ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಎಲ್ಲ ನೂತನ ಪದಾಧಿಕಾರಿಗಳ ಸಭೆ ಕರೆದಿದ್ದೇನೆ. ಮುಂದಿನ ಲೋಕಸಭಾ ಚುನಾವಣೆವರೆಗೂ ನಾವು ವಿಶ್ರಾಂತಿ ಪಡೆಯುವ ಪ್ರಶ್ನೆಯೇ ಇಲ್ಲ. ನಾವೆಲ್ಲರೂ ಒಗ್ಗಟ್ಟಿನಿಂದ, ಒಂದಾಗಿ ಪಕ್ಷದ ಸಂಘಟನೆಗೆ ಬಲ ತುಂಬಬೇಕೆಂಬ ಸಂದೇಶ ಕೊಡಲಿದ್ದೇವೆ’ ಎಂದು ವಿಜಯೇಂದ್ರ ತಿಳಿಸಿದರು.

‘ಮೈತ್ರಿ ವಿಚಾರವಾಗಿ ಎಚ್‌.ಡಿ. ಕುಮಾರಸ್ವಾಮಿ ಅವರ ಜೊತೆ ದೆಹಲಿಯಲ್ಲಿ ಚರ್ಚಿಸಿದ್ದೇವೆ. ಲೋಕಸಭಾ ಚುನಾವಣೆ, ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಮತ್ತೊಮ್ಮೆ ಕುಳಿತು ಚರ್ಚಿಸಿ ಸುಸೂತ್ರವಾಗಿ ಎಲ್ಲ ವಿಷಯಗಳನ್ನು ಶೀಘ್ರವೇ ಬಗೆಹರಿಸುತ್ತೇವೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಕ್ಕಳ ಭವಿಷ್ಯ ಜತೆ ಚೆಲ್ಲಾಟ ಆಡುತ್ತಿದ್ದಾರೆ. ಕನಿಷ್ಠ ಶಿಕ್ಷಣ ಕ್ಷೇತ್ರವನ್ನಾದರೂ ಕೆಟ್ಟ ರಾಜಕೀಯದಿಂದ ದೂರವಿಡಲಿ. ಮಕ್ಕಳ ಮನಸ್ಸಿನಲ್ಲಿ ವಿಷ ಬೀಜ ಬಿತ್ತುವುದೇಕೆ? ಮೊದಲಿಗೆ ಹೇಳುವುದನ್ನು ಹೇಳಿ, ನಂತರ ನಾನು ಆ ರೀತಿ ಹೇಳಿಯೇ ಇಲ್ಲ ಎನ್ನುತ್ತಾರೆ. ರಾಜ್ಯದ ಜನರು ಎಲ್ಲವನ್ನೂ ಗಮನಿಸುತ್ತಿದ್ದಾರೆ’ ಎಂದರು.

‘ಕುಬೇರ’ರ ವಿಚಾರಣೆಗಿಲ್ಲ ಅನುಮತಿ

ಒಂದನೇ ಪುಟದಿಂದ


ಮಂಜೂರಾತಿಗಾಗಿ ಕೆಲವು ಪ್ರಕರಣಗಳಲ್ಲಿ ನೆನಪಿನೋಲೆಯನ್ನು ಲೋಕಾಯುಕ್ತ ಕಳುಹಿಸಿದೆ. ಅದನ್ನೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

5 ವರ್ಷದಿಂದ ಬಾಕಿ: ಬೆಂಗಳೂರು ನಗರದಲ್ಲಿ 2010ರಲ್ಲಿ ಬೆಸ್ಕಾಂ ಸಹಾಯಕ ಎಂಜಿನಿಯರ್ ಮಂಜುನಾಥ್ ಎಂಬವರ ಮೇಲೆ ದಾಖಲಾದ ಅಪರಾಧ ಪ್ರಕರಣದಲ್ಲಿ 2018ರ ಫೆಬ್ರವರಿಯಲ್ಲಿ ಮಂಜೂರಾತಿಗೆ ಪ್ರಸ್ತಾವ ಸಲ್ಲಿಕೆಯಾದ ಪ್ರಸ್ತಾವ ಕೆಪಿಟಿಸಿಎಲ್ ನಿರ್ದೇಶಕ ಮಂಡಳಿಯ ಅಧ್ಯಕ್ಷರ ಬಳಿ ಬಾಕಿ ಇದೆ. ಅದೇ ರೀತಿ ವಿವಿಧ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬಳಿಕ ಹಲವು ವರ್ಷಗಳಿಂದ ಇಂತಹ ಕಡತಗಳು ಬಿದ್ದಿವೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮ (ಕೆಎಸ್‌ಡಿಎಲ್) ಕಚ್ಚಾ ವಸ್ತು ಖರೀದಿ ಟೆಂಡರ್‌ಗೆ ₹40 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಸಿಕ್ಕಿಬಿದ್ದ ಜಲಮಂಡಳಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯೂ ಆಗಿರುವ ಆರ್ಥಿಕ ಸಲಹೆಗಾರ ಮಾಡಾಳ್ ಪ್ರಶಾಂತ್ ಕುಮಾರ್ ಅವರ ವಿಚಾರಣೆ ನಡೆಸಲು ಮಂಜೂರಾತಿ ನೀಡುವಂತೆ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ 2023ರ ಜುಲೈ 27ರಂದು ಪ್ರಸ್ತಾವ ಸಲ್ಲಿಸಲಾಗಿದೆ. ಕೆಎಸ್‌ಡಿಎಲ್ ಅಧ್ಯಕ್ಷರಾಗಿದ್ದ ಪ್ರಶಾಂತ್ ಅವರ ತಂದೆ ಚನ್ನಗಿರಿ ಬಿಜೆಪಿ ಶಾಸಕರಾಗಿದ್ದ ಮಾಡಾಳ್ ವಿರೂಪಾಕ್ಷಪ್ಪ ಈ ಪ್ರಕರಣದಲ್ಲಿ ಒಂದನೇ ಆರೋಪಿ. ಅವರ ವಿಚಾರಣೆಗೆ ಮಂಜೂರಾತಿಗಾಗಿ ಅದೇ ದಿನ ವಿಧಾನ ಸಭಾಧ್ಯಕ್ಷರಿಗೆ ಪ್ರಸ್ತಾವ ಸಲ್ಲಿಸಲಾಗಿದೆ.

ಬಂಗಾರಪ್ಪ ಸವಿ ನೆನಪು ಕಾರ್ಯಕ್ರಮ ನಾಳೆ

ಪ್ರಜಾವಾಣಿ ವಾರ್ತೆ



ಬಂಗಾರಪ್ಪ

ಶಿವಮೊಗ್ಗ: ‘ಎಸ್.ಬಂಗಾರಪ್ಪ ಫೌಂಡೇಷನ್, ಬಂಗಾರಪ್ಪ ವಿಚಾರ ವೇದಿಕೆ ಹಾಗೂ ಅಭಿಮಾನಿ ಬಳಗದ ಸಂಯುಕ್ತಾಶ್ರಯದಲ್ಲಿ ಡಿ.26ರಂದು ಸಂಜೆ 4ಕ್ಕೆ ಸೊರಬದ ಬಂಗಾರ ಧಾಮದಲ್ಲಿ ಎಸ್.ಬಂಗಾರಪ್ಪ ಸವಿ ನೆನಪು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ’ ಎಂದು ಬಂಗಾರಪ್ಪ ವಿಚಾರ ವೇದಿಕೆ ಮುಖ್ಯಸ್ಥ ನಾಗರಾಜ್ ಮೂರ್ತಿ ತಿಳಿಸಿದರು.

‘ಬಂಗಾರಪ್ಪ, ಸಮಾಜವಾದಿ ಚಿಂತನೆ ಮೂಲಕ ರಾಜ್ಯ ರಾಜಕಾರಣಕ್ಕೆ ಸ್ಪಷ್ಟ ದಿಕ್ಕು ತೋರಿಸಿದ್ದರು. ಬಡವರ ಪಾಲಿಗೆ ಆಶಾಕಿರಣವಾಗಿದ್ದರು. ಶಾಂತವೇರಿ ಗೋಪಾಲಗೌಡರ ಹೋರಾಟದ ಕುಲುಮೆಯಲ್ಲಿ ಅರಳಿದ್ದರು. ಅವರ 12ನೇ ವರ್ಷದ ಪುಣ್ಯ ಸ್ಮರಣೆಯ ನೆನಪಿಗೆ ಸೊರಬದಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ’ ಎಂದರು.

‘ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉದ್ಘಾಟಿಸುವರು. ಸಚಿವ ಎಚ್‌.ಕೆ.ಪಾಟೀಲ, ಮಾಜಿ ಸಚಿವ ಅರವಿಂದ ಲಿಂಬಾವಳಿ ಉಪಸ್ಥಿತರಿರುವರು. ಗೀತಾ ಶಿವರಾಜ್‌ಕುಮಾರ್ ಅಭಿನಂದನಾ ನುಡಿಗಳನ್ನಾಡುವರು. ಅನೀಶ್ ವಿದ್ಯಾಶಂಕರ್ ಸಂಗೀತ ಕಾರ್ಯಕ್ರಮ ಇರುತ್ತದೆ’ ಎಂದು ಹೇಳಿದರು.

ಕನ್ನಡಿಗರ ತಲೆ ಮೇಲೆ ಕಲ್ಲು: ಅಶೋಕ

ಪ್ರಜಾವಾಣಿ ವಾರ್ತೆ



ಆಶೋಕ

ಬೆಂಗಳೂರು: ‘ಕಾಂಗ್ರೆಸ್ ನೇತೃತ್ವದ ಸರ್ಕಾರವು ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಅಡಿಗಲ್ಲು ಹಾಕುವುದನ್ನು ಮರೆತಿದೆ. ಹಿಂದೂ–ಮುಸ್ಲಿಮರ ಮಧ್ಯೆ ದ್ವೇಷ ಬಿತ್ತುವ ಮೂಲಕ ಕನ್ನಡಿಗರ ತಲೆ ಮೇಲೆಯೇ ಕಲ್ಲು ಹಾಕುತ್ತಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಒಂದೂ ಅಭಿವೃದ್ಧಿ ಕಾಮಗಾರಿಗೂ ಅಡಿಗಲ್ಲು ಹಾಕಿಲ್ಲ. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹಿಂದೂ– ಮುಸ್ಲಿಮರ ಮಧ್ಯೆ ದ್ವೇಷ ಬಿತ್ತುವ ಕೆಲಸದ ನೇತೃತ್ವ ವಹಿಸಿದ್ದಾರೆ’ ಎಂದರು.

‘ಕನ್ನಡ ವಿರೋಧಿ ಮತ್ತು ಹಿಂದೂಗಳ ಮಾರಣಹೋಮ ನಡೆಸಿದ್ದ ಟಿಪ್ಪು ಸುಲ್ತಾನ್‌ನನ್ನು ವೈಭವೀಕರಿಸಲು ಕಾಂಗ್ರೆಸ್ ಸರ್ಕಾರ ಹೊರಟಿದೆ. ಬ್ರಿಟಿಷರ ವಿರುದ್ಧ ವೀರಾವೇಶದಿಂದ ಹೋರಾಟ ನಡೆಸಿದ ಕಿತ್ತೂರು ರಾಣಿ ಚೆನ್ನಮ್ಮ, ಭಗತ್ ಸಿಂಗ್, ಸುಭಾಷ್‌ಚಂದ್ರ ಬೋಸ್ ಅವರಂತಹ ನಾಯಕರು ಕಾಂಗ್ರೆಸ್‌ಗೆ ಬೇಕಿಲ್ಲ. ಹೇಡಿತನದಿಂದ ಮೈಸೂರು ಸಂಸ್ಥಾನವನ್ನು ಕಿತ್ತುಕೊಂಡಿದ್ದು, ಬ್ರಿಟಿಷರಿಗೆ ತನ್ನ ಮಕ್ಕಳನ್ನೇ ಅಡಮಾನ ಇರಿಸಿದ್ದ ಟಿಪ್ಪು ಸುಲ್ತಾನ್ ಆರಾಧನೆಗೆ ಇವರು ಹೊರಟಿದ್ದಾರೆ. ಬಿ.ಕೆ. ಹರಿಪ್ರಸಾದ್ ನೀಡಿರುವ ಹೇಳಿಕೆಯೇ ಇದಕ್ಕೆ ಸಾಕ್ಷಿ’ ಎಂದು ವಾಗ್ದಾಳಿ ನಡೆಸಿದರು.

ಅಭಿವೃದ್ಧಿ ಕೆಲಸಗಳನ್ನು ಮಾಡಲು ಸರ್ಕಾರದ ಬೊಕ್ಕಸದಲ್ಲಿ ಹಣವೇ ಇಲ್ಲ. ಸರ್ಕಾರಿ ಶಾಲೆಗಳ ಶೌಚಾಲಯ ಸ್ವಚ್ಛಗೊಳಿಸಲು ಕಾರ್ಮಿಕರನ್ನು ಒದಗಿಸಲಾಗದ ಸ್ಥಿತಿಗೆ ಈ ಸರ್ಕಾರ ತಲುಪಿದೆ. ಅದರ ಪರಿಣಾಮವಾಗಿ ಮಕ್ಕಳನ್ನು ಶೌಚಾಲಯ ಸ್ವಚ್ಛಗೊಳಿಸಲು ಬಳಸಲಾಗಿದೆ ಎಂದು ಟೀಕಿಸಿದರು.

ಕಾಂಗ್ರೆಸ್ ಹತಾಶ: ಮೂರು ರಾಜ್ಯಗಳಲ್ಲಿ ಬಿಜೆಪಿ ಬಹುಮತ ಪಡೆದ ಬಳಿಕ ಕಾಂಗ್ರೆಸ್ ನಾಯಕರು ಹತಾಶ ಸ್ಥಿತಿಗೆ ತಲುಪಿದ್ದಾರೆ. ರಾಹುಲ್ ಗಾಂಧಿಯವರ ಬದಲಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನೇ ಪ್ರಧಾನಿ ಅಭ್ಯರ್ಥಿ ಎಂದು ಬಿಂಬಿಸುವಂತೆ ಅವರ ಮೈತ್ರಿ ಕೂಟದ ಸದಸ್ಯ ಪಕ್ಷಗಳು ಸಲಹೆ ನೀಡಿ ರುವುದು ಅವರನ್ನು ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿಸಿದೆ ಎಂದು ಅಶೋಕ ಹೇಳಿದರು.

ಕಾಂಗ್ರೆಸ್ ನಾಯಕರು ಹತಾಶೆಯಿಂದ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ರಾಜ್ಯದಲ್ಲಿ ಎಲ್ಲ ಸ್ಥಾನಗಳನ್ನೂ ಗೆಲ್ಲುವ ಗುರಿ ಹೊಂದಿದೆ. ಜೆಡಿಎಸ್ ಕೂಡ ಜತೆಗಿರುವುದರಿಂದ ಪಕ್ಷದ ಶಕ್ತಿ ಮತ್ತಷ್ಟು ಹೆಚ್ಚಾಗಿದೆ ಎಂದರು.



ಅರಣ್ಯ ಇಲಾಖೆಯ ಡಿಪೊದಲ್ಲಿ ವಶಪಡಿಸಿಕೊಂಡ ಮರಗಳ ಸಂಗ್ರಹ


126 ಮರ ಕಡಿತ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ): ತಾಲ್ಲೂಕಿನ ನಂದಗೋಡನಹಳ್ಳಿಯ 10 ಎಕರೆಯಲ್ಲಿ ಬೆಳೆದಿದ್ದ 126 ಮರಗಳನ್ನು ಕಡಿಯಲಾಗಿದ್ದು, ಈ ಸಂಬಂಧ ಬೇಲೂರು ಆರ್‌ಎಫ್‌ಒ ಜಮೀನಿನ ಮಾಲೀಕರಾದ ಜಯಮ್ಮ, ರಾಕೇಶ್ ಶೆಟ್ಟಿ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಡಿದಿರುವ ಮರಗಳನ್ನು ಅರಣ್ಯ ಇಲಾಖೆಯ ಡಿಪೊದಲ್ಲಿ ಸಂಗ್ರಹಿಸಲಾಗಿದೆ.

‘ನಂದಗೋಡನಹಳ್ಳಿಯ ಸರ್ವೆ ನಂಬರ್ 16/ಪಿ2ಯಲ್ಲಿರುವ 3 ಎಕರೆ 10 ಗುಂಟೆ ಜಮೀನನ್ನು ಜಯಮ್ಮ, ಸಕಲೇಶಪುರ ತಾಲ್ಲೂಕಿನ ಬಿರಡಹಳ್ಳಿಯ ವಿಕ್ರಂ ಸಿಂಹ ಬಿ.ಜಿ. ಅವರಿಗೆ ಶುಂಠಿ ಬೆಳೆಯಲು ಕರಾರು ಪತ್ರ ಮಾಡಿಕೊಟ್ಟಿದ್ದಾರೆ. ಇದೇ ಸರ್ವೆ ನಂಬರ್‌ನ 10 ಎಕರೆ ಪ್ರದೇಶದಲ್ಲಿದ್ದ ಸಾಗವಾನಿ, ಹೊನ್ನೆ, ಬೀಟೆ, ಹಲಸು ಸೇರಿದಂತೆ ಬೆಲೆ ಬಾಳುವ ಮರ ಕಡಿಯಲಾಗಿದೆ. ಇದು ಸರ್ಕಾರಿ ಗೋಮಾಳ. ಕರಾರು ಮಾಡಿಕೊಟ್ಟಿರುವ ಜಾಗವು ಇದರ ಪಕ್ಕದಲ್ಲಿದೆ’ ಎಂದು ಸ್ಥಳೀಯರು ಹೇಳಿದರು.



ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ನಂದಗೋಡನಹಳ್ಳಿಗೆ ಈಚೆಗೆ ಭೇಟಿ ನೀಡಿದ್ದ ತಹಶೀಲ್ದಾರ್ ಮಮತಾ ಕಡಿಯಲಾಗಿರುವ ಮರಗಳನ್ನು ಪರಿಶೀಲಿಸಿದರು

ಡಿ.17ರಂದು ಗ್ರಾಮಕ್ಕೆ ಭೇಟಿ ನೀಡಿದ್ದ ಬೇಲೂರು ತಹಶೀಲ್ದಾರ್ ಮಮತಾ, ಮರ ಕಡಿದಿದ್ದನ್ನು ಗಮನಿಸಿ, ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ಆರ್‌ಎಫ್‌ಒಗೆ ಸೂಚಿಸಿದ್ದರು.

‘ಇದು ಮೇಲ್ನೋಟಕ್ಕೆ ಸರ್ಕಾರಿ ಗೋಮಾಳವೆಂದು ಕಂಡು ಬರುತ್ತಿದೆ. ಸರ್ವೆಗೆ ಪತ್ರ ಬರೆಯಲಾಗಿದ್ದು, ತನಿಖೆ ನಡೆದಿದೆ’ ಎಂದು ಡಿಎಫ್‌ಒ ಮೋಹನ್‌ಕುಮಾರ್ ತಿಳಿಸಿದರು.

‘ಜಯಮ್ಮ ಅವರಿಗೆ ಮಂಜೂರಾಗಿರುವ 3 ಎಕರೆ 10 ಗುಂಟೆ ಜಮೀನು ಸೇರಿದಂತೆ ಸುತ್ತಲಿನ 12 ಎಕರೆ ಗೋಮಾಳ ಭೂಮಿಯಲ್ಲಿದ್ದ ಬೆಲೆ ಬಾಳುವ ಮರಗಳನ್ನು ಕಡಿಯಲಾಗಿದೆ. ಕಂದಾಯ ಇಲಾಖೆಯಿಂದ ಸರ್ವೆ ಮಾಡಲಾಗಿದೆ. ಜಯಮ್ಮ ಅವರ ಜಾಗದಲ್ಲಿನ ಮರ ಕಡಿದರೂ ಅದು ಕಾನೂನು ಬಾಹಿರವೇ. ಅನುಮತಿ ಇಲ್ಲದೇ ಮರಗಳನ್ನು ಕಡಿಯುವಂತಿಲ್ಲ. ತನಿಖೆ ನಡೆಸಲು ಅರಣ್ಯ ಇಲಾಖೆಗೆ ಸೂಚಿಸಲಾಗಿದೆ’ ಎಂದು ತಹಶೀಲ್ದಾರ್ ಎಂ.ಮಮತಾ ಸ್ಪಷ್ಟಪಡಿಸಿದ್ದಾರೆ.

> **2024ರ ಜ.1ರಿಂದ ಆ ಜಮೀನು ಲೀಸ್‌ಗೆ ಪಡೆದಿದ್ದೇನೆ. ಶುಂಠಿ ಕೃಷಿ ಮಾತ್ರ ನನಗೆ ಸಂಬಂಧ. ಮರ ಕಡಿದಿರುವುದಕ್ಕೂ–ನನಗೂ ಯಾವುದೇ ಸಂಬಂಧವಿಲ್ಲ**
> **ವಿಕ್ರಂ ಸಿಂಹ,** ಸಂಸದ ಪ್ರತಾಪ ಸಿಂಹ ಸಹೋದರ

ವಿಕ್ರಂ ಸಿಂಹ ವಿರುದ್ಧ ಆರೋಪ

‘ಸಂಸದ ಪ್ರತಾಪ ಸಿಂಹ ಸಹೋದರ ವಿಕ್ರಂ ಸಿಂಹ ಅವರೇ ಈ ಮರಗಳನ್ನು ಕಡಿದು ಸಾಗಿಸಲು ಯತ್ನಿಸಿದ್ದಾರೆ’ ಎಂದು ಕಾಂಗ್ರೆಸ್ ‘ಎಕ್ಸ್’ ಮಾಡಿ ಆರೋಪಿಸಿದೆ.

‘ಹಾಸನ ಜಿಲ್ಲೆಯಲ್ಲಿ ನೂರಾರು ಮರಗಳನ್ನು ಅಕ್ರಮವಾಗಿ ಕಡಿದಿದ್ದಾರೆ. ಇದು ಕಾನೂನು ಉಲ್ಲಂಘನೆ. ವಿಕ್ರಂ ಸಿಂಹ ಎನ್ನುವವರು ಜಮೀನನ್ನು ಕರಾರು ಮಾಡಿಕೊಂಡಿದ್ದು, ಈ ಮರಗಳ್ಳತನದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪವಿದೆ. ಅವರು ಬಿಜೆಪಿ ಸಂಸದರ ಸಹೋದರರೋ ಅಥವಾ ಯಾರೆಂಬುದು ನನಗೆ ಗೊತ್ತಿಲ್ಲ. ತನಿಖೆ ನಡೆಯುತ್ತಿದ್ದು, ಸತ್ಯಾಸತ್ಯತೆ ಆಧಾರದ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ.



ವಿದ್ಯಾರ್ಥಿ ವೇತನ ಕೈಪಿಡಿ

ಅಮೆಜಾನ್ ಫ್ಯೂಚರ್ ಎಂಜಿನಿಯರ್

ವಿವರ: ಅಮೆಜಾನ್ ಪ್ರಸ್ತುತ ಕಂಪ್ಯೂಟರ್ ವಿಜ್ಞಾನ, ಐಟಿ ಮತ್ತು ಇತರ ಸಂಬಂಧಿತ ಶಾಖೆಗಳಲ್ಲಿ ಕೋರ್ಸ್ ಮಾಡುತ್ತಿರುವ ಮೊದಲ ವರ್ಷದ ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ. ಈ ವಿದ್ಯಾರ್ಥಿವೇತನವು ಭಾರತದಲ್ಲಿನ ಯುವತಿಯರಿಗೆ ಕಂಪ್ಯೂಟರ್ ವಿಜ್ಞಾನ ಕಲಿಕೆ ಮತ್ತು ವೃತ್ತಿ ಅವಕಾಶಗಳಿಗೆ ಪ್ರವೇಶ ಪಡೆಯುವುದನ್ನು ಪ್ರೋತ್ಸಾಹಿಸುತ್ತದೆ.

ಅರ್ಹತೆ: ಬಿ.ಇ. / ಬಿ. ಟೆಕ್ ಓದುತ್ತಿರುವ ಭಾರತೀಯ ವಿದ್ಯಾರ್ಥಿನಿಯರು. ಅರ್ಜಿ ಸಲ್ಲಿಸುವವರ ಕುಟುಂಬದ ವಾರ್ಷಿಕ ಆದಾಯ ₹ 3,00,000 ಕ್ಕಿಂತ ಕಡಿಮೆ ಇರಬೇಕು. ರಾಜ್ಯ ಅಥವಾ ರಾಷ್ಟ್ರೀಯ ಮಟ್ಟದ ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶವನ್ನು ಪಡೆದಿರಬೇಕು.

ಆರ್ಥಿಕ ನೆರವು: ಪದವಿ ಪಡೆಯುವವರೆಗೂ ವರ್ಷಕ್ಕೆ₹ 50,000.

ಅರ್ಜಿ ಸಲ್ಲಿಸಲು ಕೊನೆ ದಿನ: 31-12-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ

ಮಾಹಿತಿಗೆ: Short Url: www.b4s.in/praja/AFES1

ಪರೀಕ್ಷಾ ತಯಾರಿಗೆ ಚರ್ಚಾವಿಧಾನ

ಆರ್.ಬಿ.ಗುರುಬಸವರಾಜ

ಪರೀಕ್ಷೆ ಸಮೀಪಿಸುತ್ತಿದ್ದಂತೆ ವಿದ್ಯಾರ್ಥಿಗಳಲ್ಲಿ ಆತಂಕ, ಕಳವಳ, ಗೊಂದಲಗಳು ಹೆಚ್ಚಾಗುವುದು ಸಹಜ. ಇವು ಪರೀಕ್ಷೆಯ ಮೇಲೆ ನೇರ ಪರಿಣಾಮ ಬೀರುವುದರಿಂದ ನಿರೀಕ್ಷಿತ ಫಲಿತಾಂಶ ತಲುಪಲು ಸಾಧ್ಯವಾಗದಿರಬಹುದು. ಇಂಥ ವೇಳೆ ಪರೀಕ್ಷಾರ್ಥಿಗಳಿಗೆ ಆಪ್ತವಾಗುವ ಸಿದ್ಧತಾ ತಂತ್ರವೆಂದರೆ ಚರ್ಚಾ ವಿಧಾನ.

ಚರ್ಚಾ ವಿಧಾನವು ಕೇವಲ ಪರೀಕ್ಷಾ ಸಿದ್ಧತೆಗೆ ಮಾತ್ರವಲ್ಲ. ವಿದ್ಯಾರ್ಥಿಗಳ ಸಮಗ್ರ ವಿಕಾಸಕ್ಕೆ ಪೂರಕವಾದ ಚಿಂತನ. ವಿಮರ್ಶೆ, ಸಮಸ್ಯೆಗೆ ಪರಿಹಾರ, ತಿಳಿವಳಿಕೆ ಹಾಗೂ ಆಸಕ್ತಿಯನ್ನು ಹೆಚ್ಚಿಸುವ ಉದ್ದೇಶಗಳನ್ನು ಹೊಂದಿದೆ. ಚರ್ಚೆಯು ಶಿಕ್ಷಕ-ವಿದ್ಯಾರ್ಥಿಗಳ ನಡುವೆ ಅಥವಾ ವಿದ್ಯಾರ್ಥಿ-ವಿದ್ಯಾರ್ಥಿಗಳ ನಡುವೆ ಮುಕ್ತವಾದ ವಿಷಯ ಹಾಗೂ ವಿಚಾರಗಳ ವಿನಿಮಯಕ್ಕಾಗಿ ಮೀಸಲಿರುವ ವೇದಿಕೆಯಾಗಿದೆ.

ಚರ್ಚೆಯಲ್ಲಿ ಭಾಗವಹಿಸುವವರು ಪ್ರಸ್ತುತಪಡಿಸುವ ವಿಭಿನ್ನ ದೃಷ್ಟಿಕೋನಗಳು ವಿಷಯವನ್ನು ಆಳವಾಗಿ ಅರ್ಥೈಸಿಕೊಳ್ಳಲು ಸಹಕಾರಿಯಾಗಿವೆ. ಇದರಿಂದ ತಿಳಿವಳಿಕೆ ಮತ್ತು ಅನ್ವಯ ಕೌಶಲಗಳು ವೃದ್ಧಿಯಾಗುತ್ತವೆ.

ಈ ವಿಧಾನದ ಪ್ರಯೋಜನಗಳು

ಜ್ಞಾನದ ಬಲವರ್ಧನೆ: ವಿಷಯವನ್ನು ಇತರರೊಂದಿಗೆ ಚರ್ಚಿಸುವುದರಿಂದ ವಿಷಯದ ಕುರಿತು ಸ್ವಂತ ತಿಳಿವಳಿಕೆ ಬಲಗೊಳ್ಳುತ್ತದೆ. ಬೇರೆಯವರಿಗೆ ಪರಿಕಲ್ಪನೆಯನ್ನು ವಿವರಿಸಿದಾಗ, ನಿಮ್ಮ ಆಲೋಚನೆಗಳನ್ನು ಒಗ್ಗೂಡಿಸಲು ಸಹಾಯ ಮಾಡುತ್ತದೆ. ಮಾಹಿತಿಯನ್ನು ಸ್ಪಷ್ಟವಾಗಿ ಹೇಳುವಾಗ, ಸ್ಮೃತಿಕೋಶದ ಆಳಕ್ಕಿಳಿಯುತ್ತದೆ.

ಸಕ್ರಿಯ ತೊಡಗಿಸಿಕೊಳ್ಳುವಿಕೆ: ಚರ್ಚೆಯಲ್ಲಿ ಭಾಗವಹಿಸುವಿಕೆಯು ಸಕ್ರಿಯರಾಗುವುದನ್ನು ಉದ್ದೀಪಿಸುತ್ತದೆ. ವಿಭಿನ್ನವಾಗಿ ವಿಷಯ ಮಂಡಿಸುವ ಸಲುವಾಗಿ ಆಳವಾಗಿ ಅಧ್ಯಯನ ಮಾಡಲು ಸಕ್ರಿಯವಾಗಿ ತೊಡಗಿಕೊಳ್ಳುವಿರಿ.

ಕಲಿಕಾ ಕೊರತೆಯನ್ನು ನೀಗಿಸುತ್ತದೆ: ಚರ್ಚೆಯಲ್ಲಿ ಭಾಗವಹಿಸುವುದರಿಂದ ನಿಮ್ಮಲ್ಲಿನ ಕಲಿಕೆಯ ಕೊರತೆ ನೀಗುತ್ತದೆ. ಅನುಮಾನಗಳಿದ್ದಲ್ಲಿ ಪ್ರಶ್ನೆಗಳನ್ನು ಕೇಳುತ್ತ ಉತ್ತರ ಕಂಡುಕೊಳ್ಳಲು ಅವಕಾಶವಿದೆ.

ಪರೀಕ್ಷೆಯ ಆತಂಕವನ್ನು ಕಡಿಮೆ ಮಾಡುತ್ತದೆ: ವಿಷಯಾಧಾರಿತವಾಗಿ ಚರ್ಚಿಸುವುದರಿಂದ ಪರೀಕ್ಷೆಗೆ ಸಂಬಂಧಿಸಿದ ಕಳವಳ, ಆತಂಕಗಳಿಗೆ ಸೂಕ್ತ ಪರಿಹಾರ ದೊರೆಯುತ್ತದೆ. ಪರೀಕ್ಷಾ ತಯಾರಿಗೆ ಇತರರಿಂದ ಬೆಂಬಲವನ್ನು ಪಡೆಯುವ ಅವಕಾಶವನ್ನು ಚರ್ಚೆಯು ಒದಗಿಸುತ್ತದೆ.

ಸ್ಮರಣಶಕ್ತಿಯನ್ನು ಹೆಚ್ಚಿಸುತ್ತದೆ: ಪರೀಕ್ಷೆಯ ವಿಷಯಗಳನ್ನು ಇತರರೊಂದಿಗೆ ಚರ್ಚಿಸುವುದರಿಂದ ಸ್ಮರಣಶಕ್ತಿಯನ್ನು ಹೆಚ್ಚಿಸುತ್ತದೆ. ಅಲ್ಲದೇ ಪರಿಕಲ್ಪನೆಯನ್ನು ಹಲವು ಬಾರಿ ಪರಿಶೀಲಿಸಲು ಮತ್ತು ಅಭ್ಯಾಸ ಮಾಡಲು ಉತ್ತೇಜಿಸುತ್ತದೆ.

ವಿಭಿನ್ನ ದೃಷ್ಟಿಕೋನಗಳು: ಚರ್ಚೆಯ ಸಮಯದಲ್ಲಿ, ವಿಷಯ/ಪರಿಕಲ್ಪನೆ ಕುರಿತ ವಿಭಿನ್ನ ದೃಷ್ಟಿಕೋನಗಳು ಮತ್ತು ಕಲಿಕಾ ವಿಧಾನಗಳ ಪರಿಚಯವಾಗುತ್ತದೆ. ಇದು ವಿಷಯದ ಬಗ್ಗೆ ತಿಳಿವಳಿಕೆಯನ್ನು ವಿಸ್ತರಿಸುತ್ತದೆ ಮತ್ತು ಇದುವರೆಗೂ ಪರಿಗಣಿಸದಿರುವ ಹೊಸ ಒಳನೋಟಗಳನ್ನು ಒದಗಿಸುತ್ತದೆ.

ಸ್ಪಷ್ಟೀಕರಣ: ಚರ್ಚೆಯಲ್ಲಿ ತೊಡಗಿದಾಗ, ಅರ್ಥಮಾಡಿಕೊಳ್ಳಲು ಕಷ್ಟಕರವಾದ ಅಥವಾ ಗೊಂದಲಗಳಿಂದ ಕೂಡಿದ ಪ್ರಶ್ನೆಗಳಿಗೆ ಸ್ಪಷ್ಟೀಕರಣ ದೊರೆಯುತ್ತದೆ. ಇದು ಪರೀಕ್ಷಾ ತಯಾರಿಯಲ್ಲಿ ನೀವು ಎದುರಿಸುತ್ತಿರುವ ಅಡೆತಡೆಗಳನ್ನು ನಿವಾರಿಸುತ್ತದೆ.

ಅಭ್ಯಾಸ: ಲಿಖಿತ ಅಥವಾ ಮೌಖಿಕ ಪರೀಕ್ಷೆಯಲ್ಲಿ ನಿಮ್ಮ ಆಲೋಚನೆಗಳು ಮತ್ತು ಜ್ಞಾನವನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಲು ಅಗತ್ಯವಿರುವ ಕೌಶಲಗಳನ್ನು ಅಭ್ಯಾಸ ಮಾಡಲು ಸಹಕಾರಿ.

ಸಂವಹನ ಕೌಶಲ ಗಟ್ಟಿಗೊಳಿಸುತ್ತದೆ: ಚರ್ಚೆಯ ವಿಧಾನವು ಸಂವಹನ ಕೌಶಲವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ನಿಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಮುಕ್ತ ಅವಕಾಶ ಇರುವುದರಿಂದ, ಪರಿಣಾಮಕಾರಿಯಾದ ಸಂವಹನಕಾರರಾಗಲು ಹೆಚ್ಚು ಸೂಕ್ತವಾಗಿದೆ. ಇದು ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಉಪಯುಕ್ತವಾಗಿದೆ.


ಚರ್ಚಾವಿಧಾನದ ಸುಲಭ ಅಳವಡಿಕೆ

- ಚರ್ಚಾವಿಧಾನ ಅಳವಡಿಕೆ ತುಂಬಾ ಸುಲಭ. ಇದಕ್ಕೆ ಪೂರ್ವ ತಯಾರಿ ಅಗತ್ಯ. ಚರ್ಚೆಯಲ್ಲಿ ಭಾಗವಹಿಸುವವರ ಪಟ್ಟಿ. ಸ್ಥಳ, ಸಮಯ ಮುಂತಾದ ಮಾಹಿತಿಯನ್ನು ಸಿದ್ಧಪಡಿಸಿಕೊಳ್ಳಬೇಕು.
- ಬಹಳ ಮುಖ್ಯವಾಗಿ ಚರ್ಚಿಸಬಹುದಾದ, ಕಲಿಕೆಗೆ ಕಷ್ಟ ಎನಿಸುವ ವಿಷಯಗಳ ಪಟ್ಟಿ ಸಿದ್ಧಪಡಿಸಿಕೊಳ್ಳಬೇಕು.
- ಶಾಲೆಯಲ್ಲಿ ಚರ್ಚಾ ವಿಧಾನ ಸಂಘಟಿಸುವುದಾದರೆ ಶಿಕ್ಷಕರ ಉಪಸ್ಥಿತಿ ಅಗತ್ಯ. ಎಲ್ಲ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿಕೊಳ್ಳಬೇಕು. ನಾಲ್ಕರಿಂದ ಆರು ವಿದ್ಯಾರ್ಥಿಗಳ ಗುಂಪು ಮಾಡಿ ವಿಷಯಗಳನ್ನು ನೀಡಿ ಚರ್ಚೆಗೆ ಅವಕಾಶ ನೀಡಬಹುದು. ಗುಂಪು ದೊಡ್ಡದಾದರೆ ವಿಷಯದ ಸ್ಪಷ್ಟತೆ ಲಭ್ಯವಾಗುವುದಿಲ್ಲ.
- ಚರ್ಚೆಗೆ ಪೂರಕವಾದ ವಿಷಯಗಳನ್ನು ಮುಂಚಿತವಾಗಿ ನೀಡಬೇಕು.
- ವಿಷಯದ ಕುರಿತ ಮಾಹಿತಿಗಳನ್ನು ವಿವಿಧ ಆಯಾಮಗಳಿಂದ ಸಂಗ್ರಹಿಸಿ ಪ್ರಸ್ತುತಪಡಿಸಲು ಸಹಾಯವಾಗುತ್ತದೆ.
- ಪ್ರಶ್ನೋತ್ತರ ವೇಳೆಯಲ್ಲಿ ಎಲ್ಲಾ ಕಲಿಕಾರ್ಥಿಗಳು ಭಾಗವಹಿಸಿದರೆ, ಅವರಲ್ಲಿದ್ದ ಗೊಂದಲಗಳಿಗೆ ಪರಿಹಾರ ಕಂಡುಕೊಳ್ಳಲು ಸಹಾಯವಾಗುತ್ತದೆ.
- ಪ್ರತಿ ವಿದ್ಯಾರ್ಥಿಯೂ ಕಲಿತ ಅಂಶಗಳನ್ನು ದಾಖಲಿಸಿಕೊಳ್ಳಬೇಕು.
- ವಿಜ್ಞಾನ, ಗಣಿತ, ಸಮಾಜವಿಜ್ಞಾನ ಮತ್ತು ಭಾಷಾ ವಿಷಯಗಳಲ್ಲಿನ ಕಲಿಕಾಂಶಗಳನ್ನು ಚರ್ಚೆಗೆ ಬಳಸಿಕೊಳ್ಳುವುದರಿಂದ ಕಲಿಕಾರ್ಥಿಗಳಲ್ಲಿ ಆತಂಕ ದೂರವಾಗುತ್ತದೆ.



ನೆಟ್/ಸ್ಲೆಟ್ ಪರೀಕ್ಷೆ ಪಾಸಾಗುವುದು ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು

1. ನೆಟ್ ಮತ್ತು ಸ್ಲೆಟ್ ಪರೀಕ್ಷೆಗೆ ತಯಾರಿ ಹೇಗೆ?
ಹೆಸರು, ಊರು ತಿಳಿಸಿಲ್ಲ.

ನೆಟ್ (ರಾಷ್ಟ್ರೀಯ ಅರ್ಹತಾ ಪರೀಕ್ಷೆ) ಅಥವಾ ಸ್ಲೆಟ್/ಕೆಎಸ್ಇಟಿ (ರಾಜ್ಯ ಮಟ್ಟದ ಅರ್ಹತಾ ಪರೀಕ್ಷೆ) ಪರೀಕ್ಷೆಗಳ ಮೂಲಕ ಕಾಲೇಜು/ವಿಶ್ವವಿದ್ಯಾಲಯಗಳಿಗೆ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಾಗುತ್ತದೆ. ನೆಟ್/ಸ್ಲೆಟ್ ಪರೀಕ್ಷೆಯಲ್ಲಿ ಒಟ್ಟು ಎರಡು ಪ್ರಶ್ನೆ ಪತ್ರಿಕೆಗಳಿರುತ್ತದೆ. ಮೂರು ಗಂಟೆಗಳ ಅವಧಿಯ ಈ ಪರೀಕ್ಷೆಯಲ್ಲಿ ಒಟ್ಟು 150 ಪ್ರಶ್ನೆಗಳಿರುತ್ತದೆ (300 ಅಂಕಗಳು). ಮೊದಲನೇ ಪತ್ರಿಕೆ ಬೋಧನೆ/ ಸಂಶೋಧನಾ ಕ್ರಮ, ಅಭಿರುಚಿ ಇತ್ಯಾದಿ ಕುರಿತದ್ದಾಗಿದ್ದು, ಎರಡನೇ ಪತ್ರಿಕೆ ನೀವು ಬೋಧಿಸುವ ವಿಷಯಕ್ಕೆ ಸಂಬಂಧಪಟ್ಟಿರುತ್ತದೆ. ಬಹುತೇಕ ಪ್ರಶ್ನೆಪತ್ರಿಕೆಗಳು ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮದಲ್ಲಿರುತ್ತದೆ. ವಿಷಯಸೂಚಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಜಾಲತಾಣದಲ್ಲಿ ಲಭ್ಯ.

ಈ ಸಲಹೆಗಳನ್ನು ಗಮನಿಸಿ:

- ಈ ಪರೀಕ್ಷೆಗಳು ಸ್ಪರ್ಧಾತ್ಮಕವಾಗಿರುತ್ತದೆ. ಹಾಗಾಗಿ, ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗಮನದಲ್ಲಿಟ್ಟುಕೊಂಡು, ಸೂಕ್ತವಾದ ಕಾರ್ಯತಂತ್ರವನ್ನು ರೂಪಿಸಿ.
- ವಿಷಯಸೂಚಿಯ ಪ್ರಕಾರ ಅಗತ್ಯವಾದ ಪುಸ್ತಕಗಳು ಮತ್ತು ಇನ್ನಿತರ ಅಧ್ಯಯನದ ಮಾಹಿತಿಯನ್ನು ಸಂಗ್ರಹಿಸಿ.
- ಕಳೆದ ವರ್ಷಗಳ ಪ್ರಶ್ನೆಪತ್ರಿಕೆಗಳನ್ನು ಗಮನಿಸಿ, ಅಣಕು-ಪರೀಕ್ಷೆ ಆಧಾರಿತ ತಯಾರಿಯನ್ನು ಮಾಡುತ್ತಿರಬೇಕು.
- ಪರೀಕ್ಷೆಯಲ್ಲಿ ಯಶಸ್ವಿಯಾಗಲು ನಿಗದಿತ ವೇಳಾಪಟ್ಟಿಯಂತೆ ಸಮಗ್ರವಾದ ಮತ್ತು ಆಳವಾದ ಓದುವಿಕೆ, ಪುನರಾವರ್ತನೆ ಮತ್ತು ಉತ್ಕೃಷ್ಟವಾದ ಬರವಣಿಗೆ ಇರಬೇಕು. ಬರವಣಿಗೆ ಕಾಗುಣಿತ, ವ್ಯಾಕರಣ ದೋಷ ಮುಕ್ತವಾಗಿರಲಿ; ಓದಲು ಸುಲಭವಾಗಿರಲಿ.
- ಜೊತೆಗೆ ಸಮಯದ ನಿರ್ವಹಣೆ, ಸಾಕಷ್ಟು ಪರಿಶ್ರಮ, ದೃಢತೆ, ಗೆಲ್ಲುವ ಆಶಾಭಾವನೆ ಅತ್ಯಗತ್ಯ.

ಪರಿಣಾಮಕಾರಿ ಓದುವಿಕೆಯ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=3PzmKRaJHmk

2. ನಾನು ದ್ವಿತೀಯ ಎಂಎ (ಅರ್ಥಶಾಸ್ತ್ರ) ಮಾಡುತ್ತಿದ್ದು, ಎನ್ಇಟಿ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದೇನೆ. ಆದರೆ, ಓದಿದ್ದು ಸರಿಯಾಗಿ ನೆನಪಿನಲ್ಲಿ ಉಳಿಯುತ್ತಿಲ್ಲ. ನಾನು ಪದವಿ ಕಾಲೇಜಿನ ಪ್ರಾಧ್ಯಾಪಕಳಾಗಬೇಕೆಂಬ ಗುರಿಯನ್ನು ಹೊಂದಿದ್ದೇನೆ. ಓದುವ ಕ್ರಮವನ್ನು ತಿಳಿಸಿ ಕೊಡಿ.
ಪಾರ್ವತಿ, ಊರು ತಿಳಿಸಿಲ್ಲ.

ಓದಿದ ವಿಷಯ ಮರೆತುಹೋಗುವುದು ಒಂದು ಗಂಭೀರವಾದ ಹಾಗೂ ಸಾಮಾನ್ಯವಾದ ಸಮಸ್ಯೆ. ಪರಿಣಾಮಕಾರಿ ಕಾರ್ಯತಂತ್ರಗಳನ್ನು ಓದುವಿಕೆಯಲ್ಲಿ ಅಳವಡಿಸದಿರುವುದರಿಂದ ಓದಿದ ವಿಷಯಗಳು ನಿಮ್ಮ ಅಲ್ಪಾವಧಿ ಸ್ಮರಣೆಯಲ್ಲಿ ಮಾತ್ರ ಇರುತ್ತದೆ. ಹಾಗಾಗಿ, ಪರೀಕ್ಷೆಯಲ್ಲಿ ಓದಿದ ವಿಷಯ ಜ್ಞಾಪಕಕ್ಕೆ ಬರದೆ, ಸಮಸ್ಯೆಯಾಗುವುದು ಸಾಮಾನ್ಯ. ಓದಿದ ವಿಷಯಗಳು ದೀರ್ಘಾವಧಿ ಸ್ಮರಣೆಯಲ್ಲಿರಬೇಕಾದರೆ, ಓದುವಿಕೆ ಪರಿಣಾಮಕಾರಿಯಾಗಿರಬೇಕು. ಓದುವಿಕೆಯ ಕಾರ್ಯತಂತ್ರಗಳಲ್ಲಿ ಓದುವ ಪ್ರಕ್ರಿಯೆಯ ಜೊತೆ ಸಮೀಕ್ಷೆ, ಪ್ರಶ್ನಿಸುವಿಕೆ, ಪುನರುಚ್ಚಾರಣೆ ಮತ್ತು ಪುನರಾವರ್ತನೆ ಇರಬೇಕು. ಇದಲ್ಲದೆ ತರಗತಿಗಳಲ್ಲಿ, ಉಪನ್ಯಾಸದ ಟಿಪ್ಪಣಿಯನ್ನು ಸರಿಯಾದ ಕ್ರಮದಲ್ಲಿ, ಓದುವಿಕೆಗೆ ಪೂರಕವಾಗುವಂತೆ ಬರೆಯಬೇಕು. ಹಾಗೂ, ಮನೆಯಲ್ಲಿ ಓದುವಾಗ ಕಣ್ಣಿಗೂ, ಮನಸ್ಸಿಗೂ ತರಬೇತಿಯ ಅಗತ್ಯವಿರುತ್ತದೆ. ದುರದೃಷ್ಟವಶಾತ್, ಹೆಚ್ಚಿನ ಶಾಲಾ/ಕಾಲೇಜುಗಳಲ್ಲಿ ಪರಿಣಾಮಕಾರಿ ಓದುವಿಕೆಯ ಈ ಕಾರ್ಯತಂತ್ರಗಳ ಕುರಿತು ತರಬೇತಿ ನೀಡಿರುವುದಿಲ್ಲ. ಪರಿಣಾಮಕಾರಿ ಓದುವಿಕೆಯ ಕಾರ್ಯತಂತ್ರಗಳು ಮತ್ತು ಟಿಪ್ಪಣಿ ಬರೆಯುವ ಕ್ರಮ ಇತ್ಯಾದಿ ವಿಷಯಗಳ ಕುರಿತ ಮಾರ್ಗದರ್ಶನಕ್ಕಾಗಿ ಈ ವಿಡಿಯೊಗಳನ್ನು ವೀಕ್ಷಿಸಿ, ನಿಮ್ಮ ಓದುವಿಕೆಯಲ್ಲಿ ಈ ಕಾರ್ಯತಂತ್ರಗಳನ್ನು ಅಳವಡಿಸಿಕೊಂಡರೆ ನಿಮ್ಮ ಸಮಸ್ಯೆಯ ಪರಿಹಾರವಾಗುತ್ತದೆ:

https://www.youtube.com/watch?v=3PzmKRaJHmk
https://www.youtube.com/watch?v=Y2IPeZ6lbeM

ಹೆಚ್ಚಿನ ಪ್ರಶ್ನೆಗಳಿಗೆ https://www.prajavani.net/education-career/career ನೋಡಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ: 2 ತ್ರಿಭುಜ

ಅಭ್ಯಾಸ – 2. 1

ಆವರಣದಲ್ಲಿ ಕೊಟ್ಟಿರುವ ಪದಗಳಿಂದ ಸೂಕ್ತವಾದ ಪದವನ್ನು ಆರಿಸಿ ಬಿಟ್ಟ ಪದ ತುಂಬಿಸಿ

1) ಎಲ್ಲಾ ವೃತ್ತಗಳು________ (ಸರ್ವಸಮ, ಸಮರೂಪ)
ಉತ್ತರ:– ಸಮರೂಪ


2) ಎಲ್ಲಾ ವರ್ಗಗಳು ________ (ಸಮರೂಪ, ಸರ್ವಸಮ)
ಉತ್ತರ:– ಸಮರೂಪ

3) ಎಲ್ಲಾ ________ ತ್ರಿಭುಜಗಳು ಸಮರೂಪ (ಸಮದ್ವಿಬಾಹು, ಸಮಬಾಹು)
ಉತ್ತರ:– ಸಮಬಾಹು

4) ಬಾಹುಗಳ ಸಂಖ್ಯೆ ಒಂದೇ ಇರುವ ಎರಡು ಬಹುಭುಜಾಕೃತಿಗಳು ಸಮರೂಪವಾಗಬೇಕಾದರೆ a) ಅದರ ಅನುರೂಪ ಕೋನಗಳು ________ ಮತ್ತು b) ಅದರ ಅನುರೂಪ ಬಾಹುಗಳು ________ (ಸಮ, ಸಮಾನುಪಾತದಲ್ಲಿದೆ)
ಉತ್ತರ:– a)ಸಮ, b) ಸಮಾನುಪಾತದಲ್ಲಿದೆ

2. ಎರಡು ವಿಭಿನ್ನ ಉದಾಹರಣೆಗಳನ್ನು ಕೊಡಿ
i) ಒಂದು ಜೊತೆ ಸಮರೂಪ ಆಕೃತಿಗಳು
ii) ಒಂದು ಜೊತೆ ಸಮರೂಪವಲ್ಲದ ಆಕೃತಿಗಳು
ಉತ್ತರ:–1) ಎರಡು ಸಮಭಾಹು ತ್ರಿಭುಜಗಳು
2) ಒಬ್ಬ ವ್ಯಕ್ತಿಯ ಬೇರೆಬೇರೆ ಭಂಗಿಯ 2 ಬೇರೆಬೇರೆ ಅಳತೆಯ ಭಾವ ಚಿತ್ರಗಳು.


3. ಕೆಳಗಿನ ಚತುರ್ಭುಜಗಳು ಸಮರೂಪವೇ? ಇಲ್ಲವೆ ತಿಳಿಸಿ.



ಉತ್ತರ:– ಸಮರೂಪದ ಚತುರ್ಭುಜಗಳಲ್ಲ

ಅಭ್ಯಾಸ –2.2

1) ಚಿತ್ರ 2.17 ರ (i) ಮತ್ತು (ii)ರಲ್ಲಿ DE‖BC ಆದರೆ (i)ರಲ್ಲಿ EC (ii)ರಲ್ಲಿ AD ಕಂಡುಹಿಡಿಯಿರಿ.



ಪರಿಹಾರ:–(i) △ ABC, DE‖BC (ದತ್ತ)

∴AD/DB=AE/EC(ಮೂಲ ಸಮಾನುಪಾತತೆಯ ಪ್ರಮೇಯದಂತೆ)

$$\Rightarrow \frac{1.5}{3} = \frac{1}{EC}$$

$$\Rightarrow EC = 3/1.5$$

$$EC = 3x\frac{10}{15} = 2cm$$

EC = 2 cm.

(ii) △ ABC, DE ‖ BC (ದತ್ತ)

∴ AD/DB = AE/EC (ಮೂಲ ಸಮಾನುಪಾತತೆಯ ಪ್ರಮೇಯದಂತೆ)


$$\Rightarrow \frac{AD}{7.2} = \frac{1.8}{5.4} \Rightarrow AD = \frac{1.8x7.2}{5.4} = 2$$

⇒ AD = 2.4
AD = 2.4 cm.

2) E ಮತ್ತು F ಬಿಂದುಗಳು ಕ್ರಮವಾಗಿ ΔPQRನ PQ ಮತ್ತು PRಗಳ ಮೇಲಿನ ಬಿಂದುಗಳು. ಕೆಳಗಿನ ಪ್ರತಿ ಸಂದರ್ಭಗಳಲ್ಲಿ EF‖QR ಆಗಿದೆಯೇ ಪರೀಕ್ಷಿಸಿ.

(i) PE = 3.9cm, EQ = 3cm, PF 3.6cm ಮತ್ತು FR=2.4 cm
(ii) PE = 4 cm, QE = 4.5 cm, PF = 8 cm ಮತ್ತು RF=9 cm
(iii) PQ =1.28 cm, PR = 2.56 cm, PE = 0.18 cm ಮತ್ತು PF = 0.63 cm

ಪರಿಹಾರ:– **ΔPQR, ದಲ್ಲಿ PQ ಮತ್ತು PR ಬಾಹುವಿನಲ್ಲಿ E ಮತ್ತು F ಗಳು ಬಿಂದುಗಳಾಗಿವೆ.**



(i) PE = 3.9 cm, EQ = 3 cm, PF = 3.6 cm ಮತ್ತು FR = 2,4 cm (ದತ್ತ)

ಮೂಲ ಸಮಾನುಪಾತತೆಯ ಪ್ರಮೇಯದಂತೆ

$$\frac{PE}{EQ} = \frac{3.9}{3} \Rightarrow = \frac{39}{30} = 1.3$$

$$And \frac{PF}{FR} = \frac{3.6}{2.4} = \frac{36}{24} = \frac{3}{2} = 1.5$$

$$\frac{PE}{EQ} \neq \frac{PF}{FR}$$

EF‖QR ಆಗಿಲ್ಲ

(ii) PE = 4 cm, QE = 4.5 cm, PF = 8cm ಮತ್ತು RF = 9cm

ಮೂಲ ಸಮಾನುಪಾತತೆಯ ಪ್ರಮೇಯದಂತೆ

$$\frac{PE}{QE} = \frac{4}{4.5} \Rightarrow = \frac{40}{45} = \frac{8}{9}$$

$$And \frac{PF}{RF} = \frac{8}{9}$$

ಆದ್ದರಿಂದ **PE/QE = PF/RF**

EF‖QR ಆಗಿದೆ

(iii) PQ = 1.28 cm, PR= 2.56 cm, PE=0.18 cm ಮತ್ತು PF = 0.36 cm

EQ = PQ – PE = 1.28 – 0.18 = 1.10 cm

ಮತ್ತು **FR = PR – PF = 2.56 – 0.36 = 2.20 cm**

So, PE/EQ = 0.18/1.10 = 18/110 = 9/55....... (i)

ಮತ್ತು **PE/FR = 0.36/2.20=36/220=9/55......... (ii)**

ಇಲ್ಲಿ ಸಮೀಕರಣ 1 ಮತ್ತು 2 ರಿಂದ,

PE/EQ = PF/FR

ಹೀಗಾಗಿ EF‖QR ಆಗಿದೆ

(ಮುಂದುವರಿಯುವುದು)

II PUC CHEMISTRY

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

CHEMICAL KINETICS

39. What is Activation energy (E_a)?

Ans:- Activation energy (E_a) = Threshold energy - average energy

40. How does the catalyst affect the activation energy of the reaction.

Ans:- A positive catalyst decreases the activation energy of the reaction and makes it faster. That is, if E_a is the activation energy of the reaction in the absence of the catalyst and Ea` is the activation energy of the reaction in the presence of the catalyst. Then Ea` < Ea.

41. The activation energy of the first order reaction at 300 K is 60 kJ mol^{-1}. In the presence of the catalyst, the activation energy gets lowered to 50 $kJmol^{-1}$ at 300K. How many times the reaction rate changes in the presence of a catalyst at the same temperature?

Soln:– Let $k_1 = A.\, e^{-Ea/RT}$ and

$$k_2 = A.\, e^{-Ea(c)/RT}$$

$$\log\frac{k_2}{k_1} = \frac{E_a - E_a(c)}{2.303RT}$$

$$\log\frac{k_2}{k_1} = \frac{6000 - 5000}{2.303 \times 8.314 \times 300} = 1.741$$

$$\therefore \frac{k_2}{k_1} = 55.08$$

∴ Reaction rate increases by 55.08 times.

42. From a graph of log k versus $\frac{1}{T}$, slope of the graph was found to be 3.4 x 10^3. Calculate the energy of activation of the reaction.

Soln:- Arrhenius equation can be written as -

$$\log k = \log A - \frac{E_a}{2.303RT}$$

Hence, the graph of log k versus $\frac{1}{T}$ should be a straight line.

Its slope is $\frac{E_a}{2.303R}$

that is, $\frac{E_a}{2.303R}$ = slope

$$E_a = slope \times 2.303R = 3.4 \times 10^3 \times 2.303 \times 8.314$$
$$= 6.51\ kJ\ /\ mol$$

43. A first order reaction is 50% completed in 40 minutes. Calculate (i) rate constant and (ii) the time taken for its 90% completion.

Soln:- **Given that -** $t_{1/2} = 40$ min

$$k = \frac{0.693}{40} = 0.017325\ min^{-1}$$

$$t = \frac{2.303}{k} \times \log\frac{a}{(a-x)}$$

$$t = \frac{2.303}{0.017325} \times \log\frac{100}{10} = 132.93\, min$$

Rate constant = 0.017325 min^{-1}

Time for 90% completion =132.93 min

44. A first order reaction is 60% completed in 80 minutes. Calculate – (i) rate constant and (ii) half life period of the reaction.

Soln:- **The rate constant k, is given by**

$$k = \frac{2.303}{t} \times \log\frac{a}{(a-x)}$$

$$\Rightarrow k = \frac{2.303}{80} \times \log\frac{100}{(100-60)}$$

$$= \frac{2.303}{80} \times \log\frac{100}{40}$$

$$= \frac{2.303}{80} \times 0.3979 = 0.01145\ min^{-1}$$

$$and\ t_{1/2} = \frac{0.693}{k} = \frac{0.693}{0.01145}$$

$$\therefore t_{1/2} = 60.52\ min.$$

45. In a first order reaction, show that the time taken for 75% completion of the reaction is twice the time taken for the 50% completion of the reaction.

Soln:- For 50% completion of the reaction,

$$t_1 = \frac{1}{k} \times 2.303 \times \log\frac{100}{50}$$

$$= \frac{1}{k} \times 2.303 \times \log 2$$

For 75% completion of the reaction,

$$t_2 = \frac{1}{k} \times 2.303 \times \log\frac{100}{25}$$

$$= \frac{1}{k} \times 2.303 \times \log 4 \quad (\because 4 = 2^2)$$

$$= \frac{1}{k} \times 2.303 \times \log 2^2$$

$$= \frac{1}{k} \times 2.303 \times 2\log 2$$

$$\therefore t_2 = 2\left(\frac{1}{k} \times 2.303 \times \log 2\right)$$

$$\Rightarrow t_2 = 2t_1$$

46. What is the significance of the following terms - (i) Arrhenius factor, A (ii) $e^{-Ea/RT}$ in the Arrhenius equation $k = A.\, e^{-Ea/RT}$.

Soln:- (i) The Arrhenius factor, A is known as the frequency factor and is related to the number of binary molecular collisions per dm^3 per second.

(ii) The term $e^{-Ea/RT}$ expresses the fraction of the collisions which becomes effective in a reaction.

47. Give different forms of the Arrhenius equation.

Ans:- The different forms of the Arrhenius equation are -

(a) $k = A.\, e^{-Ea/RT}$

(b) $\log k = -\frac{E_a}{2.303RT} + \log A$

(c) $\log\left(\frac{k_2}{k_1}\right) = \frac{E_a}{2.303R}\left[\frac{T_2 - T_1}{T_1 T_2}\right]$

where, A is the Arrhenius constant,
e is the napier's base of logarithms,
R is the ideal gas constant and
E_a is the activation energy of the reaction, rate constant of a reaction is k_1 at the temperature T_1 and its rate constant is k_2 at another temperature T_2.

• ಫಾದರ್ ಚೇತನ್



ಕ್ರಿಸ್‌ಮಸ್ ವಿಶ್ವಶಾಂತಿಯ ಮಹೋತ್ಸವ

ಇಂದು ಕ್ರಿಸ್‌ಮಸ್

ನಮ್ಮ ಪ್ರಪಂಚವು ಯುದ್ಧ, ಭಯೋತ್ಪಾದನೆ, ಹಿಂಸೆ, ನಿರಾಶ್ರಿತರ ಸಮಸ್ಯೆ, ನಿರುದ್ಯೋಗ ಮುಂತಾದ ಸಮಸ್ಯೆಗಳಿಂದ ಬಳಲುತ್ತಿದೆ. ಶಾಂತಿ ಸಮಾಧಾನಕ್ಕಾಗಿ ಮಾನವ ಜೀವ ತುಡಿಯುತ್ತಿರುವ ಈ ದಿನಗಳಲ್ಲಿ ಯೇಸು ಕ್ರಿಸ್ತರ ಜನನದ ಕ್ರಿಸ್ಮಸ್ ಹಬ್ಬ ಮಾನವನ ಬಳಲಿದ ತನುಮನಕ್ಕೆ ಅಮೃತ ಸಿಂಚನ ನೀಡಬಲ್ಲ ಮಾಂತ್ರಿಕ ಶಕ್ತಿಯನ್ನೊಳಗೊಂಡಿದೆ.

ಯೆಹೂದ್ಯ ಜನರು ಪರಕೀಯರಾದ ರೋಮನ್ನರ ದಾಸ್ಯದಿಂದ ತಮ್ಮನ್ನು ಬಿಡುಗಡೆಗೊಳಿಸಲಿರುವ ವಿಮೋಚಕನ ಆಗಮನವನ್ನು ಎದುರು ನೋಡುತ್ತಿದ್ದರು.

ಬರಲಿರುವ ವಿಮೋಚಕನು ಮತ್ತೊಮ್ಮೆ ದೇವರ ರಾಜ್ಯದ ಶಾಂತಿಯನ್ನು ಈ ಲೋಕದಲ್ಲಿ ಸ್ಥಾಪಿಸುವನು ಎಂಬುದಾಗಿ ಅವರು ನಂಬಿದ್ದರು. 'ಆತನ ದಿನಗಳಲ್ಲಿ ನೀತಿವಂತನು ವೃದ್ಧಿಯಾಗುವನು. ಸಮೃದ್ಧಿಯಾದ ಶಾಂತಿ-ಸಮಾಧಾನವು ಚಂದ್ರನಿರುವವರೆಗೂ ಇರುವುದು' ಎಂದು ಪ್ರವಾದಿಗಳು ಆತನ ಹುಟ್ಟಿನ ಸುಮಾರು ಏಳುನೂರು ವರ್ಷಗಳಿಗೆ ಮುಂಚಿತವಾಗಿಯೇ ನುಡಿದಿದ್ದರು.

ಈ ಲೋಕದ ದೊಡ್ಡ ವ್ಯಕ್ತಿಗಳಿಗೆ ಆತನ ಆಗಮನದ ಅರಿವೇ ಆಗಲಿಲ್ಲ. ಕಾರಣ, ಆತನ ಹುಟ್ಟು ಅರಮನೆಯಲ್ಲಲ್ಲ, ದನದ ಹಟ್ಟಿಯಲ್ಲಿ ಆಯಿತು; ಮಹಲುಗಳ ಮೆತ್ತನೆಯ ತೊಟ್ಟಿಲಲ್ಲಲ್ಲ, ಹುಲ್ಲಿನ ಗೋದಲಿಯಲ್ಲಿ ಆಯಿತು; ಸುಗಂಧ ದ್ರವ್ಯಗಳು ಅವರನ್ನು ಆವರಿಸಿದ್ದಿರಲಿಲ್ಲ, ಪ್ರಾಣಿಗಳ ತ್ಯಾಜ್ಯದ ದುರ್ವಾಸನೆಯಿತ್ತು; ಆರೈಕೆಗೆ ದಾಸಿ-ದಾದಿಯರಿರಲಿಲ್ಲ, ಮೂಕ ಪ್ರಾಣಿಗಳಿದ್ದವು; ಬೆಲೆಬಾಳುವ ಕಾಣಿಕೆಗಳನ್ನೀಯುವ ರಾಜ ಸಾಮಂತರಿರಲಿಲ್ಲ, ದೀನಮೂರ್ತಿಗಳಾದ ಕುರಿಗಾಹಿಗಳಿದ್ದರು. 'ದೊಡ್ಡಸ್ತಿಕೆ'ಯ ಅಮಲಿನಲ್ಲಿದ್ದ ಜಗಕ್ಕೆ ಆತನ 'ಅಸಹಾಯಕತೆ', 'ದೀನತೆ'ಯ ಪರಿ ಅರ್ಥವಾಗಲೇ ಇಲ್ಲ.

ಆದರೆ, ಶಾಂತಿಯನ್ನು ಸ್ಥಾಪಿಸಿ ಪಸರಿಸಲು ಆತನು ಆರಿಸಿದ ರೀತಿ ಇದೇ ಆಗಿತ್ತು. ರಾಜ ಮಹಾರಾಜರು, ಚಕ್ರವರ್ತಿಗಳು ತಮ್ಮ ಸೈನ್ಯಗಳಿಂದ ಸ್ಥಾಪಿಸಲಾಗದ ಶಾಂತಿಯ ಸ್ಥಾಪನೆ ಅವನ ಗುರಿಯಾಗಿತ್ತು.

'ಖಡ್ಗವನ್ನು ಹಿಡಿದವನು ಖಡ್ಗದಿಂದಲೇ ಹತನಾಗುವನು'

ಎಂಬ ಯೇಸು ಕ್ರಿಸ್ತರ ಮಾತುಗಳು ಈ ದಿನದ ಪ್ರಪಂಚಕ್ಕೆ ಬಹು ಪ್ರಸ್ತುತ. ಮಾರಕ ಯುದ್ಧೋಪಕರಣಗಳನ್ನು ತಯಾರಿಸುವ ಬಲಿಷ್ಠ ದೇಶಗಳು ಪ್ರಪಂಚದಲ್ಲಿ ಯುದ್ಧಗಳು ನಡೆಯುತ್ತಿರಲೇ ಬೇಕು ಎಂದು ಬಯಸುತ್ತವೆ. ಈ ಯುದ್ಧೋಪಕರಣಗಳನ್ನು ದುಬಾರಿ ಬೆಲೆ ಕೊಟ್ಟು ಖರೀದಿಸಿ, ಅವುಗಳನ್ನು ಬಳಸುವವರು ಬಡದೇಶದವರು. ಅವುಗಳಿಂದಲೇ ಹತವಾಗುವವರು ಬಡ ದೇಶಗಳ ಅಮಾಯಕ ಜನರು. ಮಾರಕ ಆಯುಧಗಳಿಂದ ಶಾಂತಿ ಸ್ಥಾಪನೆಗೆ ಹೊರಟವರೆಲ್ಲರೂ ಆ ಆಯುಧಗಳಿಗೇ ಬಲಿಯಾಗಿದ್ದಾರೆ.

ಶಾಂತಿ ಸ್ಥಾಪನೆಯ ಆಯುಧಗಳನ್ನು ಬದಲಾಯಿಸುವ ತುರ್ತು ಅಗತ್ಯವಿದೆ. `ಶಾಲೋಮ್' ಎಂದರೆ ಹಿಬ್ರೂ ಭಾಷೆಯಲ್ಲಿ ಶಾಂತಿ ಎಂದರ್ಥ – ಅಂದರೆ ನೀತಿ, ಸಮಾನತೆ ಹಾಗೂ ರಕ್ಷಣೆ. ಅದೊಂದು ಸಮಗ್ರ ಚಿಂತನೆ.



ಪ್ರೀತಿ ಎಂಬ ಪದದ ವ್ಯಾಖ್ಯಾನ ನೀಡುವುದು ಸುಲಭವಲ್ಲ. ಪರರಿಗಾಗಿ ತನ್ನ ಸರ್ವಸ್ವವನ್ನೂ ತ್ಯಾಗ ಮಾಡುವುದು ಎಂದು ಸರಳವಾಗಿ ಹೇಳಬಹುದು. ಈ ಅಸೀಮ ಪ್ರೀತಿಯ ಸಂಭ್ರಮವೇ ಕ್ರಿಸ್‌ಮಸ್. ಪ್ರತಿಯೊಬ್ಬರೂ ಪರರ ಒಳಿತಿಗಾಗಿ ತಮ್ಮನ್ನೇ ಕೊಡುಗೆಯಾಗಿ ಸಮರ್ಪಿಸಲು ಕ್ರಿಸ್‌ಮಸ್ ಹಬ್ಬ ಕರೆಕೊಡುತ್ತದೆ.

ಅಸುರಕ್ಷತೆ, ಅಶಾಂತಿ ಹಾಗೂ ಹಿಂಸೆಯಿಂದ ನೊಂದಿರುವ ಈ ಲೋಕದ ಎಲ್ಲ ಮಾನವರಿಗೂ ಈ ವರ್ಷದ ಕ್ರಿಸ್‌ಮಸ್ ಆಚರಣೆಯು ಸಾಂತ್ವನವನ್ನು ನೀಡಲಿ. ಈ ಲೋಕವು ಎಲ್ಲರಿಗೂ ಸಂಪೂರ್ಣ ಸುರಕ್ಷತೆಯನ್ನು ನೀಡುವ ಸುಂದರ ಗೋದಲಿಯಾಗಲಿ ಎಂದು ಹಂಬಲಿಸೋಣವೇ? ಶಾಂತಿಯ ಅರಸ ಯೇಸುಕ್ರಿಸ್ತ ನೊಂದ ಹೃದಯಗಳಿಗೆ ಸಾಂತ್ವನವನ್ನು ನೀಡಿ, ನಮ್ಮ ಮನಗಳನ್ನು ಶಾಂತಿಯಿಂದ ತುಂಬಲಿ.

ಯೇಸು ಕ್ರಿಸ್ತ ಜಯಂತಿ ಹಾಗೂ 2025 ಮಹೋತ್ಸವಕ್ಕೆ ಕ್ಷಣಗಣನೆ ಈಗಾಗಲೇ ಆರಂಭಗೊಂಡಿದೆ. ಯೇಸು ಕಂದ ಈ ಧರೆಯಲ್ಲಿ ಹುಟ್ಟಿ 2025 ವರ್ಷಗಳು ಪೂರ್ಣಗೊಳ್ಳುವ ಉತ್ಸವವದು. ಆ ಉತ್ಸವಕ್ಕೆ ಸಿದ್ಧತೆಯಾಗಿ 2024 ಪ್ರಾರ್ಥನಾ ವರ್ಷವಾಗಿ ಆಚರಿಸಬೇಕೆಂದು ಪೋಪ್ ಫ್ರಾನ್ಸಿಸ್‌ರವರ ಆಶಯ.

ಇದಕ್ಕೆ ಈ ವರ್ಷ ನವಂಬರ್ 26 ರಂದು ಚಾಲನೆಯನ್ನು ನೀಡಲಾಯಿತು. 'ಭರವಸೆಯ ಯಾತ್ರಿಕರು' ಎಂಬ ಧ್ಯೇಯದೊಂದಿಗೆ ಮುನ್ನಡೆದು ಮಹೋತ್ಸವ ವರ್ಷದಲ್ಲಿ ಯೇಸು ಸ್ವಾಮಿಯನ್ನು ಸಂಧಿಸುವ ಉತ್ಸುಕತೆಯಿಂದ ಆಧ್ಯಾತ್ಮಿಕ ಯಾತ್ರೆಯನ್ನು ಆರಂಭಿಸುವ ಶುಭ ಗಳಿಗೆಯಿದು. ಈ ಯಾತ್ರೆಯು ವಿಶ್ವಶಾಂತಿಗೆ ನಾಂದಿಯಾಗಲಿ ಎಂದು ಹಾರೈಸೋಣ.



ಚಿಕ್ಕಮಗಳೂರು ನಗರದ ಕಾಮಧೇನು ಗಣಪತಿ ದೇವಾಲಯದಲ್ಲಿ ದತ್ತಮಾಲೆ ಧರಿಸಿದ ಆರ್. ಅಶೋಕ

ದತ್ತಮಾಲೆ ಧರಿಸಿದ ಅಶೋಕ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಇದೇ ಮೊದಲ ಬಾರಿ ದತ್ತಮಾಲೆ ಧರಿಸಿ ದತ್ತ ಜಯಂತಿಯಲ್ಲಿ ಭಾಗವಹಿಸಿದ್ದಾರೆ.

'ದತ್ತಪೀಠ ಹಿಂದೂಗಳ ಧಾರ್ಮಿಕ ಕ್ಷೇತ್ರ ಎಂದು ಘೋಷಿಸಲು ಇರುವ ಗೊಂದಲ ಬಗೆಹರಿಸಲು ಹಾಲಿ ನ್ಯಾಯಾಧೀಶರನ್ನು ನೇಮಿಸಬೇಕು' ಎಂದು ಅವರು ಈ ಸಂದರ್ಭದಲ್ಲಿ ಒತ್ತಾಯಿಸಿದರು.

ಅಯೋಧ್ಯೆ, ಶ್ರೀರಂಗಪಟ್ಟಣ, ಕಾಶಿ ರೀತಿ ದತ್ತಪೀಠ ಕೂಡ ಹಿಂದೂಗಳ ಧಾರ್ಮಿಕ ಕ್ಷೇತ್ರ. ಈ ಎಲ್ಲಾ ಕ್ಷೇತ್ರಗಳಲ್ಲಿ ಇದ್ದ ಗೊಂದಲ ಬಗೆ ಹರಿದಿದೆ. ಅದೇ ರೀತಿ ಇಲ್ಲಿರುವ ಗೊಂದಲಗಳನ್ನೂ ಸರ್ಕಾರ ಬಗೆಹರಿಸಬೇಕು ಎಂದರು.

ಈ ಕ್ಷೇತ್ರವನ್ನು ಹಿಂದೂಗಳ ಕ್ಷೇತ್ರವಾಗಿ ಉಳಿಸಬೇಕು ಎಂಬ ಹೋರಾಟವನ್ನು ಲಕ್ಷಾಂತರ ಕಾರ್ಯಕರ್ತರು ನಿರಂತರವಾಗಿ ಮಾಡುತ್ತಿದ್ದಾರೆ. ಸರ್ಕಾರ ಹಿಂದೂಗಳ ಭಾವನೆ ಕೆರಳಿಸುವ ಪ್ರಯತ್ನ ಮಾಡಬಾರದು. ಈಗ ಹೋರಾಟದ ಮನೋಭಾವದಲ್ಲಿ ದತ್ತಪೀಠಕ್ಕೆ ಬರುತ್ತಿರುವ ಕಾರ್ಯಕರ್ತರು ಮುಂದಿನ ವರ್ಷ ಸಂತಸ ಮತ್ತು ಸಂಭ್ರಮದಿಂದ ಭಾಗವಹಿಸುವಂತೆ ಆಗಬೇಕು. ಸರ್ಕಾರ ಆ ಕೆಲಸ ಮಾಡಬೇಕು ಎಂದು ಒತ್ತಾಯಿಸಿದರು.

'ಈ ಹಿಂದೆ ದತ್ತಪೀಠಕ್ಕೆ ಭೇಟಿ ನೀಡಿದ್ದೇನೆ. ಇದೇ ಮೊದಲ ಬಾರಿಗೆ ಮಾಲೆ ಧರಿಸಿದ್ದೇನೆ. ಸೋಮವಾರ ಹೋಮದಲ್ಲೂ ಪಾಲ್ಗೊಳ್ಳುತ್ತೇನೆ. ಈ ಹಿಂದೆ ನ್ಯಾಯಾಲಯದಲ್ಲಿ ವಿಷಯ ಇತ್ತು. ಕಂದಾಯ ಸಚಿವನಾಗಿ ಆದೇಶ ಹೊರಡಿಸುವ ಸ್ಥಾನದಲ್ಲಿ ಇದ್ದು ಹಿಂದೂ ಅರ್ಚಕರ ನೇಮಕ ರೀತಿಯ ಕ್ರಮಗಳನ್ನು ಕೈಗೊಂಡಿದ್ದೇನೆ. ದತ್ತಪೀಠವೇ ಬೇರೆ, ದರ್ಗಾವೇ ಬೇರೆ ಎಂದು ನ್ಯಾಯಾಲಯ ಹೇಳಿದೆ. ಆದ್ದರಿಂದ ಗೊಂದಲ ಪರಿಹರಿಸುವ ಕೆಲಸವನ್ನು ಸರ್ಕಾರ ಮಾಡಬೇಕಿದೆ' ಎಂದರು. ಬಿಜೆಪಿ ಮುಖಂಡರಾದ ಸಿ.ಟಿ.ರವಿ, ಪ್ರಮೋದ್ ಮಧ್ವರಾಜ್ ಇದ್ದರು.

ಚಿಕ್ಕಮಗಳೂರು: ನೂರಾರು ಮಹಿಳೆಯರು ಭಾಗಿ, ದತ್ತಾತ್ರೇಯ ಸ್ವಾಮಿ, ಅನಸೂಯ ದೇವಿ ಸ್ಮರಣೆ

ದತ್ತ ಜಯಂತಿ: ಅನಸೂಯ ದೇವಿ ಸಂಕೀರ್ತನೆ



ಚಿಕ್ಕಮಗಳೂರಿನ ಬೋಳರಾಮೇಶ್ವರ ದೇವಾಲಯ ಆವರಣದಲ್ಲಿ ಅನಸೂಯ ದೇವಿ, ದತ್ತಾತ್ರೇಯ ಸ್ವಾಮಿ ಭಾವಚಿತ್ರಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹಾಗೂ ಬಿಜೆಪಿ ಮುಖಂಡ ಸಿ.ಟಿ.ರವಿ ಪುಷ್ಪ ನಮನ ಸಲ್ಲಿಸಿದರು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗ ದಳ ಆಯೋಜಿಸಿರುವ ದತ್ತ ಜಯಂತಿ ಉತ್ಸವದ ಮೊದಲ ದಿನವಾದ ಭಾನುವಾರ ಅನಸೂಯ ದೇವಿ ಸಂಕೀರ್ತನಾ ಯಾತ್ರೆ ನಡೆಯಿತು. ದೇವಾಲಯದಲ್ಲಿ ಅನಸೂಯ ದೇವಿಗೆ ಬೆಳಿಗ್ಗೆ ವಿಶೇಷ ಪೂಜೆ ನಡೆಯಿತು.

ನಗರದ ಬೋಳರಾಮೇಶ್ವರ ದೇವಾಲಯದ ಆವರಣದಿಂದ ಕಾಲ್ನಡಿಗೆಯಲ್ಲಿ ಹೊರಟ ಸಂಕೀರ್ತನಾ ಯಾತ್ರೆಯು ಐ.ಜಿ ರಸ್ತೆ, ರತ್ನಗಿರಿ ರಸ್ತೆಯ ಶ್ರೀರಾಮ ದೇವಸ್ಥಾನವನ್ನು ಹಾದು ಕಾಮಧೇನು ಗಣಪತಿ ದೇವಾಲಯ ತಲುಪಿತು.

ವಿವಿಧ ಕಡೆಗಳಿಂದ ಬಂದಿದ್ದ ನೂರಾರು ಭಕ್ತರು, ವಿವಿಧ ಸಂಘಟನೆ, ಭಜನಾ ಮಂಡಳಿಗಳ ಕಾರ್ಯಕರ್ತರು ಸಂಭ್ರಮಿಸಿದರು. ಕೊರಳಿನಲ್ಲಿ ಕೇಸರಿ ಶಾಲು, ಕೈಯಲ್ಲಿ ಅನಸೂಯ ದೇವಿಯ ಚಿತ್ರಪಟ ಇತ್ತು. ಭಜನಾ ಮಂಡಳಿಗಳ ಸದಸ್ಯೆಯರು ಭಜನೆ ಪದ ಹಾಡುತ್ತ, ದತ್ತಾತ್ರೇಯ ಸ್ವಾಮಿ ಸ್ಮರಣೆ ಮಾಡಿದರು. ಕೆಲವರ ಬಳಿ ಭಗವಾಧ್ವಜ ಮತ್ತು ದತ್ತಾತ್ರೇಯ ಸ್ವಾಮಿ ಮೂರ್ತಿಯ ಅಡ್ಡೆ ಇತ್ತು. 'ನಮ್ಮ ನಿಮ್ಮ ಪೀಠ ದತ್ತಪೀಠ' 'ಭಾರತ ಮಾತಾಕೀ ಜೈ' ಘೋಷಣೆಗಳು ಮೊಳಗಿದವು.

ವಾಹನಗಳಲ್ಲಿ ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾಕ್ಕೆ ತೆರಳಿ ಅನಸೂಯ ದೇವಿ ಪೂಜೆ, ಗಣಪತಿ ಪೂಜೆ, ದುರ್ಗಾ ಹೋಮ, ಕಲಾಶಾಭಿಷೇಕ ಮಾಡಿದರು. ದತ್ತಾತ್ರೇಯ ಸ್ವಾಮಿಯ ಪಾದುಕೆ ದರ್ಶನವೂ ಆಯಿತು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬಿಜೆಪಿ ಮುಖಂಡ ಸಿ.ಟಿ ರವಿ, ವಿಶ್ವ ಹಿಂದೂ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಶ್ರೀಕಾಂತ್ ಸೇರಿದಂತೆ ಹಲವು ಪ್ರಮುಖರು ಇದ್ದರು.

ನಿಷೇಧಿತ ಜಾಗದಲ್ಲಿ ಪಟಾಕಿ: ಎಫ್‌ಐಆರ್

ಆಲ್ದೂರು (ಚಿಕ್ಕಮಗಳೂರು ಜಿಲ್ಲೆ): ದತ್ತ ಜಯಂತಿ ಪ್ರಯುಕ್ತ ಪಟ್ಟಣದಲ್ಲಿ ಶನಿವಾರ ನಡೆದ ಶೋಭಾ ಯಾತ್ರೆ ವೇಳೆ ನಿಷೇಧಿತ ಪ್ರದೇಶಗಳಾದ ಜಾಮಿಯಾ ಮಸೀದಿ ಮುಂಭಾಗದಲ್ಲಿ ಪಟಾಕಿಯ ಕಿಡಿ ಹಾರಿ ಡಿವೈಎಸ್‌ಪಿ ಶೈಲೇಂದ್ರ ಅವರ ಸಮವಸ್ತ್ರದ ಒಂದು ಭಾಗ ಸುಟ್ಟು ಹೋಯಿತು.

ಅಂಬೇಡ್ಕರ್ ವೃತ್ತದಲ್ಲಿ ದತ್ತಾತ್ರೇಯ ಸ್ವಾಮಿಯ ವಿಗ್ರಹದ ಅಡ್ಡೆ ಹೊತ್ತಿದ್ದ ಮಾಲಾಧಾರಿಗಳು ಹೆಡ್ ಕಾನ್‌ಸ್ಟೆಬಲ್ ಚಂದ್ರಪ್ಪ ಅವರ ಭುಜಕ್ಕೆ ಗುದ್ದಿದ ಆರೋಪದ ಮೇಲೆ ಸುನಿಲ್ ಹಾಂದಿ, ತುಡುಕೂರು ಮಂಜು, ಪ್ರಜ್ವಲ್, ಸತೀಶ ಅಲಿಯಾಸ್ ದುಗ್ಗ, ಹಾಂದಿ ಮಂಜು ನಾಗ ಅಲಿಯಾಸ್ ನಾಗರಾಜ ಒಳಗೊಂಡು 7 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಶೋಭಾಯಾತ್ರೆ ಇಂದು

ದತ್ತ ಜಯಂತಿ ಅಂಗವಾಗಿ ಶೋಭಾ ಯಾತ್ರೆ ಸೋಮವಾರ ನಡೆಯಲಿದೆ. ಮಧ್ಯಾಹ್ನ 2.30ಕ್ಕೆ ಕಾಮಧೇನು ಗಣಪತಿ ದೇವಾಲಯದಿಂದ ಎಂ.ಜಿ ರಸ್ತೆ ಮೂಲಕ ಆಜಾದ್ ಪಾರ್ಕ್ ವೃತ್ತದವರೆಗೂ ಯಾತ್ರೆ ಸಾಗಲಿದೆ. ಸಂಜೆ 6 ಗಂಟೆಗೆ ಧಾರ್ಮಿಕ ಸಭೆ ನಡೆಯಲಿದೆ. ಬಸವಪಟ್ಟಣ ತೋಂಟದಾರ್ಯ ಮಠದ ಸ್ವತಂತ್ರ್ಯ ಬಸವಲಿಂಗಸ್ವಾಮೀಜಿ, ಶಂಕರದೇವರ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಬಸವತತ್ವ ಪೀಠದ ಬಸವಮರಳ ಸಿದ್ಧಸ್ವಾಮೀಜಿ ಸೇರಿ ಹಲವರು ಭಾಗ ವಹಿಸಲಿದ್ದಾರೆ.



ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಅಂಜನಾದ್ರಿಯಲ್ಲಿ ಭಾನುವಾರ ಹನುಮ ಮಾಲಾಧಾರಿಗಳು ಮಾಲೆ ವಿಸರ್ಜನೆ ಮಾಡಲು ಬಂದ ಚಿತ್ರಣ ಸೂರ್ಯೋದಯದ ಹೊಳಪಿನಲ್ಲಿ ಕಂಗೊಳಿಸಿದ್ದು ಹೀಗೆ –ಪ್ರಜಾವಾಣಿ ಚಿತ್ರ/ ಭರತ್ ಕಂದಕೂರ

ಅಂಜನಾದ್ರಿ: ಹನುಮ ಮಾಲೆ ವಿಸರ್ಜನೆ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಅಂಜನಾದ್ರಿ ಬೆಟ್ಟದಲ್ಲಿ ಹನುಮ ಮಾಲಾಧಾರಿಗಳು ಭಾನುವಾರ ಮಾಲೆ ವಿಸರ್ಜನೆ ಮಾಡಿ ಸಂಭ್ರಮಿಸಿದರು.

ಶನಿವಾರ ರಾತ್ರಿಯಿಂದಲೇ ಮಾಲೆ ವಿಸರ್ಜನೆ ಆರಂಭವಾಗಿ ಭಾನುವಾರ ಸಂಜೆ ತನಕ ನಡೆಯಿತು. ಬೆಳಗಾವಿ, ಕಲಬುರಗಿ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದಿಂದ ಹನುಮ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ಥರಗುಟ್ಟುವ ಚಳಿ, ದಟ್ಟ ಮಂಜಿನ ವಾತಾವರಣದ ನಡುವೆಯೂ ಜಿಲ್ಲೆ ಹಾಗೂ ಸುತ್ತಮುತ್ತಲಿನ ಊರಿನ ಮಾಲಾಧಾರಿಗಳು ತಮ್ಮೂರಿನಿಂದ ಪಾದಯಾತ್ರೆ ಮೂಲಕ ಅಂಜನಾದ್ರಿಗೆ ಬಂದಿದ್ದರು.

ಭಕ್ತರಿಗೆ ಜಿಲ್ಲಾಡಳಿತದ ವತಿಯಿಂದಲೇ ಊಟದ ವ್ಯವಸ್ಥೆ ಮಾಡಲಾಗಿತ್ತು. ಒಂದು ದಿನ ಮೊದಲು ಬಂದವರಿಗೆ ವಸತಿ ಸೌಲಭ್ಯ ಕೂಡ ಕಲ್ಪಿಸಲಾಗಿತ್ತು. ಮಾಲೆ ಧರಿಸಿದ್ದ ಶಾಸಕ ಜನಾರ್ದನ ರೆಡ್ಡಿ ಭಕ್ತರ ನಡುವೆ ಬಂದು ಮಾಲೆ ವಿಸರ್ಜನೆ ಮಾಡಿದರು.

ಮೆರವಣಿಗೆ

ಮಂಡ್ಯ: ಸಂಕೀರ್ತನಾ ಯಾತ್ರೆ ಅಂಗವಾಗಿ ಶ್ರೀರಂಗಪಟ್ಟಣದ ನಿಮಿಷಾಂಬ ದೇಗುಲ ಬಳಿಯ ಆಂಜನೇಯಸ್ವಾಮಿ ದೇವಾಲಯದಿಂದ ರಂಗನಾಥಸ್ವಾಮಿ ದೇಗುಲದವರೆಗೆ ನಡೆದ ಮೆರವಣಿಗೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡರು. ಜಾಮಿಯಾ ಮಸೀದಿ ಬಳಿಯ ಪುರಸಭೆ ವೃತ್ತದಲ್ಲಿ ವಿವಿಧ ತಂಡಗಳು ಅರ್ಧ ಗಂಟೆಗೂ ಹೆಚ್ಚು ಕಾಲ ಕುಳಿತು ಭಜನೆ ನಡೆಸಿದವು. ನಂತರ ಮಾಲೆ ವಿಸರ್ಜನೆ ಕಾರ್ಯ ನಡೆಯಿತು.

ಗೌರವ ಗುಪ್ತ ನೇತೃತ್ವದಲ್ಲಿ ಸಮಿತಿ ರಚನೆ: ಜಾರ್ಜ್

ಬೆಂಗಳೂರು: 'ಕೆಪಿಟಿಸಿಎಲ್ ಮತ್ತು ಎಸ್ಕಾಂಗಳ ತಾಂತ್ರಿಕ ವಿಭಾಗದಲ್ಲಿ 15-20 ವರ್ಷಗಳಿಂದ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ನೌಕರರನ್ನು ಒಳಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರ ಚಿಂತನೆ ನಡೆಸಿದೆ. ಈ ಹಿನ್ನೆಲೆಯಲ್ಲಿ ಸಾಧಕ-ಬಾಧಕಗಳ ಬಗ್ಗೆ ಪರಿಶೀಲಿಸಲು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

'ಸ್ಟೇಷನ್ ಆಪರೇಟರ್‌ಗಳು, ಸ್ಟೇಷನ್ ಸಹಾಯಕರು, ಗ್ಯಾಂಗ್‌ಮೆನ್ ಮತ್ತು ಮೀಟರ್ ರೀಡರ್ ಹುದ್ದೆಗಳಲ್ಲಿ ಸಾಕಷ್ಟು ಮಂದಿ ಹಲವು ವರ್ಷಗಳಿಂದ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸೇವಾ ಭದ್ರತೆ ಒದಗಿಸಿ ಒಳಗುತ್ತಿಗೆ ವ್ಯಾಪ್ತಿಗೆ ತರಲು ಸರ್ಕಾರ ಯೋಚಿಸಿದೆ. ಕಾನೂನಿನ ಅವಕಾಶಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಸಮಿತಿಯು ಈಗಾಗಲೇ ಒಂದು ಸುತ್ತಿನ ಸಮಾಲೋಚನೆ ನಡೆಸಿದೆ. ಡಿ. 29 ರೊಳಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ. ಈ ವರದಿ ಆಧರಿಸಿ ಸರಕಾರ ಮುಂದಿನ ನಿರ್ಧಾರ ಕೈಗೊಳ್ಳಲಿದೆ ಎಂದು ಹೇಳಿದರು.

ಕೋವಿಡ್: ಸಕ್ರಿಯ ಪ್ರಕರಣ ಏರಿಕೆ

ಬೆಂಗಳೂರು: ರಾಜ್ಯದಲ್ಲಿ 106 ಕೋವಿಡ್ ಪ್ರಕರಣಗಳು ಭಾನುವಾರ ದೃಢಪಟ್ಟಿವೆ. ಇದರಿಂದಾಗಿ ಸಕ್ರಿಯ ಪ್ರಕರಣಗಳು 344ಕ್ಕೆ ಏರಿಕೆಯಾಗಿವೆ.

24 ಗಂಟೆಗಳಲ್ಲಿ 1,441 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 7.35ರಷ್ಟು ವರದಿಯಾಗಿದೆ. ಸಕ್ರಿಯ ಪ್ರಕರಣಗಳಲ್ಲಿ 323 ಮಂದಿ ಮನೆ ಆರೈಕೆಗೆ ಒಳಗಾದರೆ, 21 ಮಂದಿ ಮಾತ್ರ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಲ್ಲಿ 7 ಮಂದಿಗೆ ತೀವ್ರ ನಿಗಾ ಘಟಕ ಹಾಗೂ 14 ಮಂದಿಗೆ ಸಾಮಾನ್ಯ ಹಾಸಿಗೆಯಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ.

ಬೆಂಗಳೂರಿನಲ್ಲಿ ಒಂದು ದಿನದಲ್ಲಿ 899 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದ್ದು, 95 ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಸಕ್ರಿಯ ಪ್ರಕರಣಗಳ ಸಂಖ್ಯೆ 297 ಕ್ಕೆ ಏರಿಕೆಯಾಗಿದೆ. ಹೊಸದಾಗಿ ಮೈಸೂರಿನಲ್ಲಿ ಆರು, ದಕ್ಷಿಣ ಕನ್ನಡದಲ್ಲಿ ಎರಡು, ಚಾಮರಾಜನಗರ, ಮಂಡ್ಯ ಹಾಗೂ ಶಿವಮೊಗ್ಗದಲ್ಲಿ ತಲಾ ಒಂದು ಪ್ರಕರಣ ದೃಢಪಟ್ಟಿದೆ.

ಬಿರುಗಾಳಿ ಎಬ್ಬಿಸಿದ ಮಾರನ್ ಹಳೆ ಭಾಷಣ

ಪ್ರಜಾವಾಣಿ ವಾರ್ತೆ



ದಯಾನಿಧಿ

ಚೆನ್ನೈ: ಬಿಹಾರ ಮತ್ತು ಉತ್ತರ ಪ್ರದೇಶದ ಜನರನ್ನು ಹೀಯಾಳಿಸಿ ಡಿಎಂಕೆ ಸಂಸದ ದಯಾನಿಧಿ ಮಾರನ್ ಅವರು 2019ರಲ್ಲಿ ಮಾಡಿರುವ ಭಾಷಣವೊಂದು ಈಗ ರಾಜಕೀಯ ವಲಯದಲ್ಲಿ ಬಿರುಗಾಳಿ ಎಬ್ಬಿಸಿದೆ.

'ಕೇವಲ ಹಿಂದಿ ಮಾತನಾಡುವ ಉತ್ತರಪ್ರದೇಶ ಮತ್ತು ಬಿಹಾರದ ಜನರು ತಮಿಳುನಾಡಿನಲ್ಲಿ ಶೌಚಾಲಯ ತೊಳೆಯುವ ಮತ್ತು ಕಟ್ಟಡ ನಿರ್ಮಾಣ ಕೆಲಸಗಳಲ್ಲಿ ತೊಡಗಿದ್ದಾರೆ. ಆದರೆ, ಇಲ್ಲಿನ ಯುವಜನರು ಇಂಗ್ಲಿಷ್ ಪ್ರೌಢಿಮೆಯಿಂದ ಸಾಫ್ಟ್‌ವೇರ್ ಎಂಜಿನಿಯರ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ' ಎಂದು ಸಂಸದ ದಯಾನಿಧಿ ಮಾರನ್ ಅವರು ಹೇಳಿರುವ ಭಾಷಣದ ತುಣುಕು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಬಿಜೆಪಿ ಮಾತ್ರವಲ್ಲ, 'ಇಂಡಿಯಾ' ಮೈತ್ರಿಕೂಟದ ಭಾಗವೂ ಆಗಿರುವ ಬಿಹಾರದ ಆಡಳಿತಾರೂಢ ಪಕ್ಷ ಆರ್‌ಜೆಡಿ, ಮಾರನ್ ಅವರ ಈ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿವೆ. 'ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಟ್ಟಿರುವ ಪಕ್ಷದ ನಾಯಕರೊಬ್ಬರು ಇಂತಹ ಹೇಳಿಕೆ ನೀಡಿರುವುದು ಸರಿಯಲ್ಲ' ಎಂದು ದಯಾನಿಧಿ ಮಾರನ್ ಅವರಿಗೆ ಉಭಯ ಪಕ್ಷಗಳ ನಾಯಕರು ತಿರುಗೇಟು ನೀಡಿದ್ದಾರೆ.

ಬಿಹಾರ ಮತ್ತು ಉತ್ತರ ಪ್ರದೇಶದ ಜನರನ್ನು ಅವಮಾನಿಸಿದ್ದಕ್ಕಾಗಿ ಇಂಡಿಯಾ ಮೈತ್ರಿಕೂಟದಿಂದ ಡಿಎಂಕೆ ಪಕ್ಷವನ್ನು ಜೆಡಿಯು ಮತ್ತು ಆರ್‌ಜೆಡಿ ತಕ್ಷಣವೇ ಹೊರಹಾಕಲಿ ಎಂದು ಬಿಹಾರ ಮಾಜಿ ಮುಖ್ಯಮಂತ್ರಿ ಸುಶೀಲ್ ಕುಮಾರ್ ಮೋದಿ ಒತ್ತಾಯಿಸಿದ್ದಾರೆ.

ಬಿಜೆಪಿ ಮುಖಂಡ ಶಾನವಾಜ್ ಹುಸೇನ್ ಅವರು, 'ಉತ್ತರದ ರಾಜ್ಯಗಳ ಬಗ್ಗೆ ತುಚ್ಛವಾಗಿ ಮಾತನಾಡುವುದು ವಿರೋಧ ಪಕ್ಷದ ನಾಯಕರಿಗೆ ಅಭ್ಯಾಸವಾಗಿದೆ' ಎಂದಿದ್ದಾರೆ.

ಆರ್‌ಜೆಡಿ ನಾಯಕ ಮತ್ತು ಬಿಹಾರದ ಉಪಮುಖ್ಯ ಮಂತ್ರಿ ತೇಜಸ್ವಿ ಯಾದವ್, 'ಮಾರನ್ ಅವರು ಜಾತಿ ಪದ್ಧತಿಯಿಂದಾಗಿ ತುಂಬಿರುವ ಅನ್ಯಾಯಗಳನ್ನು ಮತ್ತು ಕೆಲವು ಸಮುದಾಯದ ಜನರನ್ನು ಮಾತ್ರ ಇಂತಹ ಅಪಾಯಕಾರಿ ಕೆಲಸಗಳಲ್ಲಿ ತೊಡಗಿಸಿರುವುದನ್ನು ತಮ್ಮ ಭಾಷಣದಲ್ಲಿ ಎತ್ತಿ ತೋರಿಸಿದ್ದರೆ ಅದು ಅರ್ಥಪೂರ್ಣ. ಆದರೆ, ಬಿಹಾರ ಮತ್ತು ಉತ್ತರಪ್ರದೇಶದ ಸಂಪೂರ್ಣ ಜನತೆಯ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವುದನ್ನು ನಾವು ಖಂಡಿಸುತ್ತೇವೆ' ಎಂದು ಹೇಳಿದ್ದಾರೆ.

'ದೇಶದ ಯಾವುದೇ ಭಾಗದಿಂದ ಬರುವ ಜನರನ್ನು ನಾವು ಗೌರವಿಸಬೇಕು. ನಾವು ಡಿಎಂಕೆಯನ್ನು ನಮ್ಮಂತೆಯೇ ಸಾಮಾಜಿಕ ನ್ಯಾಯದ ಆದರ್ಶ ಪಾಲಿಸುವ ಪಕ್ಷವಾಗಿ ನೋಡುತ್ತೇವೆ. ಆ ಪಕ್ಷದ ನಾಯಕರು ಈ ಆದರ್ಶಕ್ಕೆ ವಿರುದ್ಧವಾಗಿ ಮಾತನಾಡುವುದನ್ನು ನಿಲ್ಲಿಸಬೇಕು' ಎಂದು ಯಾದವ್ ಹೇಳಿದರು.

ಮಾರನ್ ಅವರು 2019ರ ಜೂನ್‌ನಲ್ಲಿ ಡಿಎಂಕೆ ವರಿಷ್ಠ ಎಂ. ಕರುಣಾನಿಧಿ ಅವರ 96ನೇ ಜನ್ಮದಿನ ವಾರ್ಷಿಕೋತ್ಸವದ ಸ್ಮರಣಾರ್ಥ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದಾಗ ಈ ಭಾಷಣ ಮಾಡಿದ್ದರು.

ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಅವರು ಈ ವಿಡಿಯೊ ಕ್ಲಿಪ್ ಅನ್ನು ಶನಿವಾರ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದರು. 10 ನಿಮಿಷ 24 ಸೆಕೆಂಡುಗಳ ಈ ಭಾಷಣದ ವಿಡಿಯೊ ಕ್ಲಿಪ್ 'ಪ್ರಜಾವಾಣಿ'ಗೆ ಲಭಿಸಿದೆ.

ಮುಖ್ಯಾಂಶಗಳು

- 2019ರ ಜೂನ್‌ನಲ್ಲಿ ಮಾಡಿದ್ದ ಭಾಷಣ
- ಆರ್‌ಜೆಡಿ ಪಕ್ಷದಿಂದಲೂ ಖಂಡನೆ

ಚಿನ್ನದ ನಾಣ್ಯದ ವದಂತಿ ಹುಡುಕಲು ಮುಗಿಬಿದ್ದ ಜನ

ಪ್ರಜಾವಾಣಿ ವಾರ್ತೆ

ಮೊಳಕಾಲ್ಮುರು (ಚಿತ್ರದುರ್ಗ): ತಾಲ್ಲೂಕಿನ ಮೇಗಲಹಟ್ಟಿ ಬಳಿಯ ಖಾಲಿ ಜಾಗದಲ್ಲಿ ಚಿನ್ನದ ನಾಣ್ಯಗಳು ಸಿಗುತ್ತಿವೆ ಎಂಬ ವದಂತಿ ಹರಡಿದ ಹಿನ್ನೆಲೆಯಲ್ಲಿ ಅಕ್ಕಪಕ್ಕದ ಗ್ರಾಮಸ್ಥರು ಭಾನುವಾರ ತಂಡೋಪತಂಡವಾಗಿ ಬಂದು ನಾಣ್ಯಗಳಿಗಾಗಿ ಹುಡುಕಾಟ ನಡೆಸಿದರು.

ರಾಷ್ಟ್ರೀಯ ಹೆದ್ದಾರಿ–150 'ಎ'ಗೆ ಹೊಂದಿಕೊಂಡ ಸ್ಥಳದಲ್ಲಿ ಬೆಳಿಗ್ಗೆ ಕೆಲವರಿಗೆ ಚಿನ್ನದ ನಾಣ್ಯಗಳು ದೊರೆತಿವೆ ಎಂಬ ಸುದ್ದಿ ಹಬ್ಬಿತ್ತು. ವಿಷಯ ತಿಳಿದು ವೃದ್ಧರು, ಮಹಿಳೆಯರೂ ಸ್ಥಳಕ್ಕೆ ಬಂದು ಹುಡುಕಾಡಿದರು. ಈ ಪೈಕಿ ಕೆಲವರಿಗೆ ವಿಕ್ಟೋರಿಯಾ ರಾಣಿಯ ಚಿತ್ರವಿರುವ ನಾಣ್ಯಗಳು ದೊರೆತಿವೆ.

ಈಚೆಗೆ ಸಮೀಪದ ಬೈರಾಪುರ ಬಳಿ ಕುರಿಗಾಹಿಗಳಿಗೆ ಶಿವಾಜಿ ಚಿತ್ರವಿರುವ ನಾಣ್ಯಗಳು ಸಿಕ್ಕಿದ್ದವು. ಅವು ನಕಲಿ ಎಂದು ಪೊಲೀಸರು ಹೇಳಿದ್ದರು.



ವ್ಯಕ್ತಿಯೊಬ್ಬರಿಗೆ ಸಿಕ್ಕಿರುವ ನಾಣ್ಯಗಳು

'ತಾಲ್ಲೂಕಿನಲ್ಲಿ ನಕಲಿ ಚಿನ್ನದ ನಾಣ್ಯಗಳನ್ನು ನೀಡಿ ವಂಚಿಸುವ ಜಾಲ ಸಕ್ರಿಯವಾಗಿದೆ. ಆ ಜಾಲದವರೇ ಇವುಗಳನ್ನು ಎಸೆದು ಹೋಗಿರಬಹುದು. ಕೆಲವರಿಗೆ ನಾಣ್ಯ ಸಿಕ್ಕಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅವುಗಳನ್ನು ವಶಕ್ಕೆ ಪಡೆದು ಪರೀಕ್ಷೆಗೆ ಒಳಪಡಿಸಲಾಗುತ್ತದೆ' ಎಂದು ಮೊಳಕಾಲ್ಮುರು ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಪಾಂಡುರಂಗಪ್ಪ ತಿಳಿಸಿದರು.

'ಕಳೆದ ವಾರ ತಾಲ್ಲೂಕಿನ ರಾಂಪುರ ಠಾಣೆ ವ್ಯಾಪ್ತಿಯಲ್ಲಿ ಚಿನ್ನದ ನಾಣ್ಯ ನೀಡುವುದಾಗಿ ನಂಬಿಸಿ ವಂಚಿಸಿದ ಜಾಲವನ್ನು ಭೇದಿಸಲಾಗಿದೆ. ಸುತ್ತಲಿನ ಜಿಲ್ಲೆಗಳಲ್ಲೂ ಈ ಬಗೆಯ ಪ್ರಕರಣಗಳು ವರದಿಯಾಗಿವೆ' ಎಂದರು.

ಗುರುವಾಯೂರು: ಆನೆಗೆ ರಬ್ಬರಿನ ನೆಲಹಾಸು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಗುರುವಾಯೂರಿನ ಆನೆ ಶಿಬಿರದಲ್ಲಿರುವ 60 ವರ್ಷದ ಹಿರಿಯ ಆನೆ ನಂದಿನಿ ಮೂರ್ನಾಲ್ಕು ದಿನದಿಂದಲೂ ಒಳ್ಳೆಯ ನಿದ್ದೆ ಮಾಡುತ್ತಿದೆ. ಇದಕ್ಕೆ ಕಾರಣ ರಬ್ಬರ್ ನೆಲಹಾಸು.

ನಂದಿನಿ ಸೇರಿದಂತೆ ಶಿಬಿರದಲ್ಲಿರುವ ಕೆಲವು ಆನೆಗಳು ನಿರಂತರವಾಗಿ ತೇವಾಂಶದಿಂದ ಕೂಡಿದ ನೆಲದ ಮೇಲೆ ಮಲಗುತ್ತಿದ್ದರಿಂದ ಕಾಲಿನ ಬಾಧೆ ಹಾಗೂ ಸರಿಯಾಗಿ ನಿದ್ರೆ ಮಾಡಲಾಗದೆ ನರಳುತ್ತಿದ್ದವು. ಇದಕ್ಕೆ ಪರಿಹಾರವಾಗಿ ರಬ್ಬರ್ ಹಾಸಿಗೆಯನ್ನು ಬಳಸಲಾಗುತ್ತಿದೆ. 'ಮೂರ್ನಾಲ್ಕು ದಿನದಿಂದಲೂ ಆನೆಗಳು ಸುಖಕರವಾಗಿ ನಿದ್ರೆ ಮಾಡುತ್ತಿವೆ' ಎಂದು ಆನೆ ಶಿಬಿರದ ಉಪ ಆಡಳಿತಾಧಿಕಾರಿ ಮಾಯಾದೇವಿ ಕೆ.ಎಸ್. ತಿಳಿಸಿದರು.

'ಆನೆಗಳಿಗೆ ರಬ್ಬರ್ ನೆಲಹಾಸು ಬಳಸುತ್ತಿರೋದು ಇಲ್ಲಿಯೇ. ಇದೇ ಮೊದಲು' ಎಂದು ಅವರು ಹೇಳಿದರು.

'ಆನೆಗಳು ಎದುರಿಸುತ್ತಿದ್ದ ಸಮಸ್ಯೆಯ ಪರಿಹಾರಕ್ಕಾಗಿ ಹಲವು ಅನ್ವೇಷಣೆಯ ಬಳಿಕ ರಬ್ಬರ್ ನೆಲಹಾಸು ಬಳಸಲಾಗಿದೆ. ಆರಾಮದಾಯಕ ಮತ್ತು ಆರೋಗ್ಯಕರ ನೆಲ ಒದಗಿಸಲಿಕ್ಕಾಗಿ ರಬ್ಬರ್ ನೆಲಹಾಸನ್ನು ಇಳಿಜಾರಾದ ಸಿಮೆಂಟ್ ನೆಲಕ್ಕೆ ಅಳವಡಿಸಲಾಗಿದೆ. ಇಳಿಜಾರು ಇರೋದರಿಂದ ಲದ್ದಿ, ಮೂತ್ರವು ತಗ್ಗಿಗೆ ಹರಿಯಲಿದೆ. ಇದರಿಂದ ಆನೆಗಳ ಮೈ ಒದ್ದೆಯಾಗುವುದು ತಪ್ಪಿದೆ' ಎಂದರು.

ರಬ್ಬರ್ ನೆಲಹಾಸಿಗೆಗೆ ₹8 ಲಕ್ಷ ವೆಚ್ಚವಾಗಿದ್ದು, ಕೊಯಮತ್ತೂರಿನ ಭಕ್ತ ಮಾಣಿಕಂ ದೇಣಿಗೆ ನೀಡಿದ್ದಾರೆ. ಗುರುವಾಯೂರು ಶ್ರೀಕೃಷ್ಣ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ವಿ.ಕೆ.ವಿಜಯನ್ ಚಾಲನೆ ನೀಡಿದರು.



ರಬ್ಬರ್ ನೆಲಹಾಸಿನ ಮೇಲೆ ಮಲಗಿರುವ ನಂದಿನಿ

ಅಯೋಧ್ಯೆಯಲ್ಲಿ ವಿಮಾನ ನಿಲ್ದಾಣ ಉದ್ಘಾಟನೆ

30ರಂದು ಪ್ರಧಾನಿ ಮೋದಿ ರೋಡ್ ಶೋ

ಅಯೋಧ್ಯೆ (ಉತ್ತರಪ್ರದೇಶ): ಪ್ರಧಾನಿ ನರೇಂದ್ರ ಮೋದಿ ಅವರು ಇದೇ 30ರಂದು ಅಯೋಧ್ಯೆಯಲ್ಲಿ ವಿಮಾನ ನಿಲ್ದಾಣ ಉದ್ಘಾಟಿಸಿ, ಬಳಿಕ ರೋಡ್ ಶೋ ನಡೆಸಲಿದ್ದಾರೆ.

ವಿಮಾನ ನಿಲ್ದಾಣ ಮತ್ತು ರೈಲು ನಿಲ್ದಾಣಗಳ ನಡುವೆ 15 ಕಿ.ಮೀ ವರೆಗೆ ರೋಡ್ ಶೋ ನಡೆಯಲಿದೆ. ಬಳಿಕ ಮೋದಿ ಅವರು ಸಾರ್ವಜನಿಕ ಸಭೆಯಲ್ಲಿ ಮಾತನಾಡುವರು ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ರೋಡ್ ಶೋ ಹಾದುಹೋಗುವ 51 ಕಡೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಾಧು, ಸಂತರು ಮೋದಿ ಅವರನ್ನು ಆಶೀರ್ವದಿಸಲಿದ್ದಾರೆ ಎಂದಿದ್ದಾರೆ.

ಹನುಮಾನ್ ಗರ್ಹಿ ದೇಗುಲಕ್ಕೂ ಅವರು ಭೇಟಿ ನೀಡುವ ನಿರೀಕ್ಷೆ ಇದೆ.


ಅಯೋಧ್ಯೆಯ ನವೀಕೃತ ರೈಲು ನಿಲ್ದಾಣದ ಉದ್ಘಾಟನೆಯನ್ನೂ ಪ್ರಧಾನಿ ನೆರವೇರಿಸುವರು. ಬಳಿಕ ವಂದೇ ಭಾರತ್ ಮತ್ತು ಅಮೃತ್ ಭಾರತ್ ರೈಲುಗಳಿಗೆ ಚಾಲನೆ ನೀಡುವರು ಎಂದು ಅಧಿಕಾರಿಗಳು ಹೇಳಿದ್ದಾರೆ.

ಜನವರಿ 22 ರಂದು ನಡೆಯಲಿರುವ ರಾಮಲಲ್ಲಾ ವಿಗ್ರಹ ಪ್ರತಿಷ್ಠಾಪನೆಗೆ ಪೂರ್ವಭಾವಿಯಾಗಿ ಈ ವಿಮಾನ ನಿಲ್ದಾಣ ಉದ್ಘಾಟನೆಗೊಳ್ಳುತ್ತಿದೆ.

ರಾಮ ಮಂದಿರ ಉದ್ಘಾಟನೆ: ನೇಪಾಳದಿಂದ ವಿಶೇಷ ಸ್ಮರಣಿಕೆ

ಕಠ್ಮಂಡು (ಪಿಟಿಐ): ಅಯೋಧ್ಯೆಯಲ್ಲಿ ಮುಂದಿನ ತಿಂಗಳು ನಡೆಯಲಿರುವ ರಾಮ ಮಂದಿರ ಉದ್ಘಾಟನಾ ಸಮಾರಂಭಕ್ಕೆ ನೇಪಾಳವು ವಿವಿಧ ವಿನ್ಯಾಸದ ಆಭರಣಗಳು, ವಸ್ತ್ರ, ಪಾತ್ರೆಗಳು ಮತ್ತು ಸಿಹಿತಿಂಡಿಗಳನ್ನು ಒಳಗೊಂಡಿರುವ ವಿಶೇಷ ಸ್ಮರಣಿಕೆಗಳನ್ನು ಕಳುಹಿಸಲಿದೆ.

ಜನಕಪುರಧಾಮ–ಅಯೋಧ್ಯಾಧಾಮ ಯಾತ್ರೆಯ ಮೂಲಕ ಸ್ಮರಣಿಕೆಗಳನ್ನು ತಲುಪಿಸಲಾಗುವುದು. ಜನವರಿ 18ರಂದು ಆರಂಭವಾಗಲಿರುವ ಈ ಯಾತ್ರೆಯು 20ರಂದು ಅಯೋಧ್ಯೆಗೆ ತಲುಪಲಿದೆ ಎಂದು ಮೂಲಗಳು ಹೇಳಿವೆ.



ಸ್ಮರಣಿಕೆಗಳನ್ನು ಶ್ರೀರಾಮ ಜನ್ಮಭೂಮಿ ರಾಮ ಮಂದಿರ ಟ್ರಸ್ಟ್‌ಗೆ ಹಸ್ತಾಂತರಿಸಲಾಗುವುದು ಎಂದು ಜಾನಕಿ ದೇವಾಲಯದ ಅರ್ಚಕ ರಾಮರೋಶನ್ ದಾಸ್ ವೈಷ್ಣವ್ ತಿಳಿಸಿದ್ದಾರೆ. ಅಯೋಧ್ಯೆಯಲ್ಲಿ ರಾಮ ಲಲ್ಲಾ ಮೂರ್ತಿ ಪ್ರತಿಷ್ಠಾಪನೆಯು ಜ. 22ರಂದು ನಡೆಯಲಿದೆ.

ಹಳೆಯ ವಿದ್ಯಾರ್ಥಿಗಳಿಂದ ₹57 ಕೋಟಿ ದೇಣಿಗೆ

ನವದೆಹಲಿ (ಪಿಟಿಐ): ಬಾಂಬೆ ಐಐಟಿಯ 1998ನೇ ಸಾಲಿನ ವಿದ್ಯಾರ್ಥಿಗಳು ತಮ್ಮ ಸಮ್ಮಿಲನದ ಬೆಳ್ಳಿ ಹಬ್ಬದ ಸ್ಮರಣಾರ್ಥ ಸಂಸ್ಥೆಗೆ ₹57 ಕೋಟಿ ದೇಣಿಗೆ ನೀಡಿದ್ದಾರೆ. ಒಂದೇ ತರಗತಿಯ ವಿದ್ಯಾರ್ಥಿಗಳು ನೀಡಿದ ಇದುವರೆಗಿನ ಗರಿಷ್ಠ ದೇಣಿಗೆ ಇದಾಗಿದೆ.

ಇದಕ್ಕೂ ಮುನ್ನ 1971ನೇ ಸಾಲಿನ ವಿದ್ಯಾರ್ಥಿಗಳು ತಮ್ಮ ಸಮ್ಮಿಲನದ ಸುವರ್ಣ ಮಹೋತ್ಸವದಲ್ಲಿ ಸಂಸ್ಥೆಗೆ ₹41 ಕೋಟಿ ದೇಣಿಗೆ ನೀಡಿದ್ದರು.

'ಸುಮಾರು 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ದೇಣಿಗೆ ನೀಡಿದ್ದಾರೆ' ಎಂದು ಹಳೆ ವಿದ್ಯಾರ್ಥಿಗಳು ಹೇಳಿಕೆಯಲ್ಲಿ ತಿಳಿಸಿದ್ದಾರೆ. 'ಈ ದೇಣಿಗೆ ಬಾಂಬೆ ಐಐಟಿಯ ಬೆಳವಣಿಗೆಗೆ ವೇಗ ನೀಡಲಿದೆ' ಎಂದು ನಿರ್ದೇಶಕ ಸುಭಾಸಿಸ್ ಚೌಧರಿ ಹೇಳಿದ್ದಾರೆ.


ರಜೆಯ ನೆಪ: ರೋಗಿಗಳನ್ನು ವಾಪಸ್ ಕಳುಹಿಸಿದ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ): 'ನಾಲ್ಕನೇ ಶನಿವಾರ ವೈದ್ಯರೆಲ್ಲ ರಜೆಯಲ್ಲಿದ್ದಾರೆ. ಭಾನುವಾರ ವಾರದ ರಜೆ, ಸೋಮವಾರದ ಕ್ರಿಸ್‌ಮಸ್ ರಜೆ ಮುಗಿದ ಬಳಿಕ ಮಂಗಳವಾರ ಬನ್ನಿ' ಎಂದು ರೋಗಿಗಳನ್ನು ಉಪ್ಪಿನಂಗಡಿ ಸಮುದಾಯ ಆರೋಗ್ಯ ಕೇಂದ್ರದಿಂದ ಶನಿವಾರ ವಾಪಸ್ ಕಳುಹಿಸಲಾಗಿದೆ.

ಇಲ್ಲಿನ ಉಪಾಹಾರ ಹಾಗೂ ಪಾನೀಯ ಮಾರಾಟ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವ ಉತ್ತರ ಭಾರತದ ಕಾರ್ಮಿಕರಾದ ಶಮೀಮ್, ರಹೀಂ ಜ್ವರದಿಂದ ಬಳಲುತ್ತಿದ್ದರು. ಶುಕ್ರವಾರ ರಾತ್ರಿ ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಔಷಧಿ ಪಡೆದುಕೊಂಡಿದ್ದರು. ಜ್ವರ ಕಡಿಮೆ ಆಗದೆ ಇದ್ದರೆ ಶನಿವಾರ ಬಂದು ರಕ್ತ ಪರೀಕ್ಷೆ ಮಾಡಿಸಬೇಕೆಂದು ಸೂಚಿಸಲಾಗಿತ್ತು. ಶನಿವಾರವೂ ಜ್ವರ ಕಡಿಮೆ ಆಗಿರಲಿಲ್ಲ. ಹೀಗಾಗಿ ರಕ್ತಪರೀಕ್ಷೆಗಾಗಿ ಆಸ್ಪತ್ರೆಗೆ ತೆರಳಿದ್ದರು. ಬಳಿಕ ಜ್ವರಪೀಡಿತರು ಶಾಸಕರ ಬಳಿ ಅಳಲು ತೋಡಿಕೊಂಡಿದ್ದಾರೆ.

ರಜೆಯ ನೆಪ ಹೇಳುವಂತಿಲ್ಲ- ಟಿಎಚ್‌ಒ: ಪ್ರಕರಣದ ಬಗ್ಗೆ ಪುತ್ತೂರು ತಾಲ್ಲೂಕು ಆರೋಗ್ಯಾಧಿಕಾರಿ (ಟಿಎಚ್‌ಒ) ಪ್ರತಿಕ್ರಿಯಿಸಿ, 'ಲ್ಯಾಬ್ ಟೆಕ್ನಿಷಿಯನ್ ಅನಾರೋಗ್ಯದ ಕಾರಣ ನೀಡಿ ರಜೆ ಪಡೆದಿದ್ದಾರೆ. ಆರೋಗ್ಯ ಇಲಾಖೆಗೆ ಎರಡನೇ ಶನಿವಾರ, ನಾಲ್ಕನೇ ಶನಿವಾರ ಎಂದು ರಜೆ ಇರುವುದಿಲ್ಲ. ಹಬ್ಬದ ದಿನಗಳಲ್ಲಿ ಸರ್ಕಾರಿ ರಜೆ ಇದ್ದರೂ ಆರೋಗ್ಯ ಇಲಾಖೆ ಕಾರ್ಯನಿರ್ವಹಿಸುತ್ತದೆ. ಉಪ್ಪಿನಂಗಡಿ ಆಸ್ಪತ್ರೆಯಲ್ಲಿ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಕರ್ತವ್ಯದಲ್ಲಿದ್ದು, ಈ ಬಗ್ಗೆ ವಿಚಾರಣೆ ನಡೆಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಈ ರೀತಿ ಆಗದಂತೆ ಎಚ್ಚರ ವಹಿಸಲಾಗುವುದು' ಎಂದು ತಿಳಿಸಿದ್ದಾರೆ.



ಸುಭಾಷಿತ

ಇತರರು ನಿಮ್ಮನ್ನು ಅರ್ಥಮಾಡಿಕೊಳ್ಳದಿದ್ದರೆ ಚಿಂತಿಸಬೇಡಿ. ಬದಲಾಗಿ, ಇತರರನ್ನು ನೀವು ಅರ್ಥಮಾಡಿಕೊಳ್ಳದೇ ಇದ್ದರೆ ಆ ಬಗ್ಗೆ ಚಿಂತೆ ಮಾಡಿ.

–ಕನ್‌ಫ್ಯೂಷಿಯಸ್

ಅತಿಥಿ ಉಪನ್ಯಾಸಕರ ಮುಷ್ಕರ ನಿರ್ಲಕ್ಷ್ಯ ಸಲ್ಲ; ಪರಿಹಾರ ಅಗತ್ಯ

ಸೇವಾಭದ್ರತೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರ ಶೈಕ್ಷಣಿಕ ಬಿಕ್ಕಟ್ಟಿಗೆ ಕಾರಣವಾಗಿದೆ. ಮುಷ್ಕರ ಆರಂಭವಾಗಿ ತಿಂಗಳು ಕಳೆದಿದ್ದರೂ ಉಪನ್ಯಾಸಕರೊಂದಿಗೆ ತಾರ್ಕಿಕ ಒಪ್ಪಂದವೊಂದಕ್ಕೆ ಬರುವಲ್ಲಿ ಸರ್ಕಾರ ಯಶಸ್ವಿಯಾಗಿಲ್ಲ. ಸರ್ಕಾರಿ ಪದವಿ ಕಾಲೇಜುಗಳು ಬಹುಮಟ್ಟಿಗೆ ಅತಿಥಿ ಉಪನ್ಯಾಸಕರನ್ನೇ ಅವಲಂಬಿಸಿದ್ದು, ಅವರಲ್ಲಿ ಬಹುತೇಕರು ತರಗತಿಗಳನ್ನು ಬಹಿಷ್ಕರಿಸಿ ಹೋರಾಟದಲ್ಲಿ ತೊಡಗಿರುವುದರಿಂದಾಗಿ ಶೈಕ್ಷಣಿಕ ಚಟುವಟಿಕೆಗಳು ಸ್ಥಗಿತಗೊಂಡಿವೆ, ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಪರೀಕ್ಷೆಗಳು ಸನ್ನಿಹಿತವಾಗಿರುವ ಸಂದರ್ಭದಲ್ಲಿ ತರಗತಿಗಳು ಪೂರ್ಣ ಪ್ರಮಾಣದಲ್ಲಿ ನಡೆಯದೆ ವಿದ್ಯಾರ್ಥಿಗಳು ಒತ್ತಡ ಅನುಭವಿಸಬೇಕಾಗಿದೆ. ಪದವಿ ಹಂತದಲ್ಲಿ ಪ್ರತಿಯೊಂದು ದಿನವೂ ಅಮೂಲ್ಯವಾಗಿರುವಾಗ, ತಿಂಗಳಿಗೂ ಹೆಚ್ಚು ಕಾಲ ತರಗತಿಗಳು ನಡೆಯದಿರುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ವಿದ್ಯಾರ್ಥಿಗಳ ಕಲಿಕೆಗೆ ತೊಂದರೆ ಉಂಟಾಗಿರುವುದಕ್ಕೆ ಅತಿಥಿ ಉಪನ್ಯಾಸಕರನ್ನಷ್ಟೇ ಹೊಣೆ ಮಾಡುವುದರಲ್ಲಿ ಅರ್ಥವಿಲ್ಲ. ದೀರ್ಘ ಕಾಲದಿಂದ ಅವರ ಬೇಡಿಕೆಗಳು ನನೆಗುದಿಗೆ ಬಿದ್ದಿವೆ. ರಾಜ್ಯದಲ್ಲಿರುವ 430 ಸರ್ಕಾರಿ ಪದವಿ ಕಾಲೇಜುಗಳಲ್ಲಿ 10 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಇಂದಲ್ಲ ನಾಳೆ ಉದ್ಯೋಗ ಕಾಯಂ ಆಗಬಹುದೆನ್ನುವ ನಿರೀಕ್ಷೆಯಲ್ಲಿ 15–20 ವರ್ಷಗಳನ್ನು ಕಳೆದವರಿದ್ದಾರೆ; ಕನಿಷ್ಠ ಗೌರವಧನ ಪಡೆದು ಹತ್ತಾರು ವರ್ಷ ಕಾರ್ಯನಿರ್ವಹಿಸಿದ್ದಾರೆ. ಅವರ ನಿರೀಕ್ಷೆ ಈವರೆಗೆ ಮರೀಚಿಕೆಯಾಗಿಯೇ ಉಳಿದಿದೆ. ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಆಗಾಗ ಧರಣಿ, ಮುಷ್ಕರ ನಡೆಸಿದ್ದರಿಂದ ಸಣ್ಣಪುಟ್ಟ ಬೇಡಿಕೆಗಳು ಈಡೇರಿರುವುದು ಬಿಟ್ಟರೆ ಅತಿಥಿ ಉಪನ್ಯಾಸಕರ ಜೀವನ ಅತಂತ್ರವಾಗಿಯೇ ಮುಂದುವರಿದಿದೆ. ಅಧಿಕಾರಕ್ಕೆ ಬಂದರೆ ಅತಿಥಿ ಉಪನ್ಯಾಸಕರಿಗೆ ಸೇವಾಭದ್ರತೆ ಒದಗಿಸುವುದಾಗಿ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಭರವಸೆ ನೀಡಿತ್ತು. ಆ ಭರವಸೆಯನ್ನು ಈಡೇರಿಸಿ ಎಂದು ಅತಿಥಿ ಉಪನ್ಯಾಸಕರು ಈಗ ಒತ್ತಾಯಿಸುತ್ತಿರುವುದು ನ್ಯಾಯೋಚಿತವಾಗಿಯೇ ಇದೆ.



ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸುವ ಸಾಧ್ಯತೆಯನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸಬೇಕು. ವಿದ್ಯಾರ್ಥಿಗಳ ಹಿತರಕ್ಷಣೆಯನ್ನು ಆದ್ಯತೆಯ ವಿಷಯವಾಗಿ ಪರಿಗಣಿಸಬೇಕು

ಉಪನ್ಯಾಸಕ ವೃತ್ತಿ ಕಾಯಂ ಆಗುವುದೆನ್ನುವ ನಂಬಿಕೆಯಿಂದ ಪರ್ಯಾಯ ಉದ್ಯೋಗ ಮಾರ್ಗಗಳನ್ನು ಹುಡುಕಿಕೊಳ್ಳುವ ಗೋಜಿಗೆ ಹೋಗದ ಹಲವರ ಬದುಕು ಅತಂತ್ರ ಸ್ಥಿತಿಯಲ್ಲಿದೆ. ಹಲವು ಅಭ್ಯರ್ಥಿಗಳ ವಯೋಮಿತಿ ಮೀರಿದೆ. ವಯೋಮಿತಿಯನ್ನು ವಿಸ್ತರಿಸಿ ಉದ್ಯೋಗ ಕಾಯಂ ಮಾಡುವಂತೆ ಮುಷ್ಕರನಿರತರು ಆಗ್ರಹಿಸುತ್ತಿದ್ದಾರೆ. ರಾಜ್ಯದ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಬೋಧಕರಲ್ಲಿ ಶೇಕಡ 70ರಷ್ಟು ಅತಿಥಿ ಉಪನ್ಯಾಸಕರೇ ಇದ್ದಾರೆ. ಕಡಿಮೆ ಸಂಭಾವನೆ ಪಡೆದು ಒತ್ತಡದಲ್ಲಿ ಕಾರ್ಯನಿರ್ವಹಿಸುವ ಅನಿವಾರ್ಯ ಅವರದಾಗಿದೆ. ಉದ್ಯೋಗ ಭದ್ರತೆಯಿಲ್ಲದ ಪರಿಸ್ಥಿತಿಯಲ್ಲಿಯೇ ಅವರು ಕಾರ್ಯನಿರ್ವಹಿಸಬೇಕಾಗಿದೆ. ಪಿಎಚ್‌.ಡಿ. ಸೇರಿದಂತೆ ಸಮರ್ಪಕ ವಿದ್ಯಾರ್ಹತೆಯನ್ನು ಒಳಗೊಂಡಿದ್ದರೂ ದೀರ್ಘ ಕಾಲದ ಬೋಧನೆಯ ಅನುಭವ ಹೊಂದಿದ್ದರೂ ಅತಿಥಿ ಉಪನ್ಯಾಸಕರಿಗೆ ಸೇವಾಭದ್ರತೆ ಒದಗಿಸುವ ದಿಸೆಯಲ್ಲಿ ಸರ್ಕಾರದ ಕಡೆಯಿಂದ ಪ್ರಾಮಾಣಿಕ ಪ್ರಯತ್ನ ಆಗಿಲ್ಲ. ಪದವಿ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಕಾಯಂ ಬೋಧಕರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆ ಆಗುತ್ತಲೇ ಇದೆ. ಖಾಲಿಯಾದ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸರ್ಕಾರ ಮುಂದಾಗಿಲ್ಲ. ಅತಿಥಿ ಉಪನ್ಯಾಸಕರ ನೆರವಿನಿಂದಲೇ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪೂರೈಸಬೇಕಾದ ಸ್ಥಿತಿಯಿದೆ. ಹೊಸ ಹೊಸ ಕಾಲೇಜು ಮತ್ತು ಜಿಲ್ಲೆಗೊಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವಲ್ಲಿ ತೋರಿಸುವ ಉತ್ಸಾಹವನ್ನು ಉಪನ್ಯಾಸಕರ ನೇಮಕದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸರ್ಕಾರ ತೋರಿಲ್ಲ. ಇದರಿಂದಾಗಿ ಉನ್ನತ ಶಿಕ್ಷಣದ ಗುಣಮಟ್ಟ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ. ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ಬಗ್ಗೆ ಸರ್ಕಾರ ಇನ್ನಾದರೂ ತನ್ನ ನಿರ್ಲಕ್ಷ್ಯ ಧೋರಣೆಯಿಂದ ಹೊರಬರಬೇಕು. ಸೇವಾಭದ್ರತೆಯಿಲ್ಲದ ಸ್ಥಿತಿಯಲ್ಲಿ ಉಪನ್ಯಾಸಕರಿಂದ ಪರಿಣಾಮಕಾರಿ ಬೋಧನೆ ಸಾಧ್ಯವಿಲ್ಲ ಹಾಗೂ ಅದರ ಪರಿಣಾಮ ವಿದ್ಯಾರ್ಥಿಗಳ ಮೇಲೂ ಆಗುತ್ತದೆ ಎನ್ನುವುದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸುವ ಸಾಧ್ಯತೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕು. ವಿದ್ಯಾರ್ಥಿಗಳ ಹಿತರಕ್ಷಣೆಯನ್ನು ನಿರ್ಲಕ್ಷಿಸದೆ, ಆದ್ಯತೆಯ ವಿಷಯವಾಗಿ ಇದನ್ನು ಸರ್ಕಾರ ಪರಿಗಣಿಸಬೇಕು.

ದಿನದ ಟ್ವೀಟ್

ಇದನ್ನೂ ಬೋಧಿಸಿ



ನಿಮ್ಮ ಮಕ್ಕಳನ್ನು ಬರೀ ಯಶಸ್ಸಿನ ಪಯಣದತ್ತ ಮಾತ್ರವಲ್ಲ, ವೈಫಲ್ಯಗಳನ್ನು ಎದುರಿಸುವುದಕ್ಕೂ ಸಜ್ಜುಗೊಳಿಸಿ. ಸಾಧನೆಯನ್ನು ನಿರ್ವಹಿಸುವುದಷ್ಟೇ ಅಲ್ಲ, ಹಿನ್ನಡೆಗಳು, ವೈಫಲ್ಯಗಳನ್ನು ಎದುರಿಸುವುದು ಹೇಗೆ, ತಮ್ಮ ತಪ್ಪುಗಳಿಂದ ಅರ್ಥಪೂರ್ಣವಾದ ಪಾಠಗಳನ್ನು ಕಲಿಯುವುದು ಹೇಗೆ ಎಂಬುದನ್ನೂ ಬೋಧಿಸಿ.

ಹರ್ಷ್ ಗೋಯಂಕಾ, ಉದ್ಯಮಿ

ಕಿಡಿನುಡಿ



ಪಕ್ಷದ ಉಪಾಧ್ಯಕ್ಷ, ಕಾರ್ಯದರ್ಶಿಯಂತಹ ಕೆಲಸಕ್ಕೆ ಬಾರದ ಸ್ಥಾನಗಳನ್ನು ಉತ್ತರ ಕರ್ನಾಟಕಕ್ಕೆ ಕೊಟ್ಟು, ವಿಧಾನಸಭೆಯ ವಿರೋಧ ಪಕ್ಷದ ನಾಯಕ, ಅಧ್ಯಕ್ಷರಂತಹ ಒಳ್ಳೆಯ ಸ್ಥಾನಗಳನ್ನು ದಕ್ಷಿಣ ಕರ್ನಾಟಕಕ್ಕೆ ಕೊಟ್ಟಿದ್ದಾರೆ. ಒಂದು ರೀತಿಯಲ್ಲಿ ಇದು ಬಿ.ಎಸ್.ಯಡಿಯೂರಪ್ಪಗೆ ಬೆಣ್ಣೆ, ಉತ್ತರ ಕರ್ನಾಟಕಕ್ಕೆ ಮಜ್ಜಿಗೆ ಕೊಟ್ಟಂತೆ.

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಶುಕ್ರವಾರ, 25-12-1998

• ಮತ್ತೆ ನೌಕರರ ಮುಷ್ಕರ ಕಲ್ಲೆಸೆತ, ಲಾಠಿ ಪ್ರಹಾರ

ಬೆಂಗಳೂರು, ಡಿ. 24– ಕೇಂದ್ರ ಸರ್ಕಾರದ ಐದನೇ ವೇತನ ಆಯೋಗದ ಶಿಫಾರಸುಗಳನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿ ಇಂದು ರಾಜ್ಯ ಸರ್ಕಾರಿ ನೌಕರರು ಪುನಃ ಪ್ರಾರಂಭಿಸಿದ ಅನಿರ್ದಿಷ್ಟ ಕಾಲದ ಮುಷ್ಕರದಿಂದ, ವೈದ್ಯಕೀಯ ಸೇವೆ ಸೇರಿದಂತೆ ಸರ್ಕಾರದ ಆಡಳಿತ ಯಂತ್ರ ರಾಜ್ಯದಾದ್ಯಂತ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿತು.

ಶಾಲಾ ಕಾಲೇಜುಗಳು ಸೇರಿದಂತೆ ಸರ್ಕಾರದ ಎಲ್ಲ ನೌಕರರು ಕಚೇರಿಗಳಿಗೆ ಹಾಜರಾಗದೆ ಮುಷ್ಕರದಲ್ಲಿ ಪಾಲ್ಗೊಂಡಿದ್ದರಿಂದ ಜನಸಾಮಾನ್ಯರಿಗೆ ತೊಂದರೆ ಆಯಿತು. ಕೆಲವೆಡೆ ಕಲ್ಲು ತೂರಾಟದಂಥ ಸಣ್ಣಪುಟ್ಟ ಘಟನೆಗಳನ್ನು ಬಿಟ್ಟರೆ, ಮುಷ್ಕರ ಶಾಂತಿಯುತವಾಗಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

• ಡೀಸೆಲ್, ಎಲ್‌ಪಿಜಿ ಬೆಲೆ ಇಳಿಕೆ ಸಂಭವ

ನವದೆಹಲಿ, ಡಿ. 24 (ಪಿಟಿಐ)– ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಇಳಿಕೆಯಾಗಿರುವುದರಿಂದ ಡೀಸೆಲ್ ಮತ್ತು ಅಡುಗೆ ಅನಿಲದ ಬೆಲೆಯನ್ನು ವಾರದೊಳಗೆ ಇಳಿಸಲಾಗುವುದು ಹಾಗೂ ಸೀಮೆಎಣ್ಣೆ ಸಬ್ಸಿಡಿ ಖೋತಾ ಮಾಡುವುದಿಲ್ಲ ಎಂದು ಕೇಂದ್ರ ಸರ್ಕಾರ ಇಂದು ಪ್ರಕಟಿಸಿದೆ.

‘ಅಡುಗೆ ಅನಿಲ, ಸೀಮೆಎಣ್ಣೆಗೆ ನೀಡಲಾಗುವ 7,200 ಕೋಟಿ ರೂಪಾಯಿ ಸಬ್ಸಿಡಿ ಹೊರೆ ಸೇರಿ ಉಂಟಾಗಿರುವ 17,500 ಕೋಟಿ ರೂಪಾಯಿಗಳ ತೈಲ ನಿಧಿ ಖೋತಾವನ್ನು 1999ರ ಮಾರ್ಚ್ ವೇಳೆಗೆ ಹೋಗಲಾಡಿಸಲಾಗುವುದು’ ಎಂದು ಕೇಂದ್ರ ಪೆಟ್ರೋಲಿಯಂ ಖಾತೆ ಸಚಿವ ವಿ.ಕೆ. ರಾಮಮೂರ್ತಿ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 25-12-1973

• ವೀರಶೈವ ಅಧಿಕಾರಿಗಳ ಬಗ್ಗುಬಡಿಯುವ ಕುಯುಕ್ತಿ ವಿರುದ್ಧ ವೀರೇಂದ್ರ ಎಚ್ಚರಿಕೆ

ಬೆಂಗಳೂರು, ಡಿ. 24– ವೀರಶೈವ ಸಮಾಜಕ್ಕೆ ಸೇರಿದ ಅಧಿಕಾರಿಗಳನ್ನು ‘ಬಗ್ಗುಬಡಿಯುವ ಕುಯುಕ್ತಿ’ ನಡೆಯುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರು ಆಪಾದಿಸಿದ್ದಾರೆ.

ವೀರಶೈವ ಮಹಾಧಿವೇಶನ ಮುಗಿಯುವುದರೊಳಗೆ ಇದು ಜಾತಿ ಸಮ್ಮೇಳನ ಅಲ್ಲ ಎಂದು ಸ್ಪಷ್ಟಪಡಿಸಲು ಸಲಹೆ ನೀಡಿದರು.

ಮೊದಲಾಗಿ ಭಾರತೀಯ, ಎರಡನೆಯದಾಗಿ ಕನ್ನಡಿಗ, ಮೂರನೆಯದಾಗಿ ಲಿಂಗಾಯತ ಎಂಬ ಭಾವನೆ ಯುವಕರಲ್ಲಿರಬೇಕು. ಇಂದಿನ ಕಲುಷಿತ ವಾತಾವರಣದಲ್ಲಿ ಈ ಮಾತು ಹೇಳುವುದು ಅಗತ್ಯ ಎಂದ ಅವರು, ಪ್ರತಿಯೊಂದು ಮನೆಯೂ ಕೈಗಾರಿಕಾ ಕೇಂದ್ರವಾಗಿರುವ ಪಂಜಾಬಿನ ಸಿಖ್ಖರ ಉದ್ಯಮಶೀಲತೆಯನ್ನು ಪ್ರಸ್ತಾಪಿಸಿದರು.

• ವೀರಶೈವ: ಆದರ್ಶ ಸಿದ್ಧಾಂತ ಜಾತಿ ಆಗಿ ಪರಿಣಮಿಸಿದೆ: ಎಚ್.ಎಂ.ಸಿ ವಿಷಾದ

ಬೆಂಗಳೂರು, ಡಿ. 24– ನಾನಾ ಕಾರಣಗಳಿಂದಾಗಿ ವೀರಶೈವ ಎಂಬುದು ಇತ್ತೀಚೆಗೆ ಒಂದು ಜಾತಿ, ಒಂದು ಮತ ಎನ್ನುವ ಸ್ಥಿತಿಗೆ ಇಳಿದಿರುವುದು ‘ದುರ್ದೈವದ ಸಂಗತಿ’ ಎಂದು ಲೋಕೋಪಯೋಗಿ ಸಚಿವ ಎಚ್.ಎಂ. ಚನ್ನಬಸಪ್ಪ ವಿಷಾದಿಸಿದರು.

ವೀರಶೈವ ಎಂಬುದು ಒಂದು ಜಾತಿಯಲ್ಲ ಇದೊಂದು ಆದರ್ಶ, ಧಾರ್ಮಿಕ ಸಮಾಜ ಸಿದ್ಧಾಂತ ಎಂದು ಅವರು ಸ್ಪಷ್ಟಪಡಿಸಿದರು.

ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಅಖಿಲ ಭಾರತ ವೀರಶೈವ ಮಹಾಸಭೆಯ ಅಧಿವೇಶನದಲ್ಲಿ ಅವರು ಮಾತನಾಡಿದರು.

‘ಇಂಡಿಯಾ’ ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿ ಕುರಿತ ಪ್ರಶ್ನೆ ಕುತೂಹಲ ಹುಟ್ಟಿಸಿದೆ

ಮುಂಚೂಣಿಗೆ ಖರ್ಗೆ: ಲಾಭ ಯಾರಿಗೆ?



ವಿಶ್ಲೇಷಣೆ

ಬಿ.ಎಸ್.ಅರುಣ್

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ‘ಇಂಡಿಯಾ’ ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯನ್ನಾಗಿ ಘೋಷಣೆ ಮಾಡಬೇಕೆನ್ನುವ ವಿರೋಧ ಪಕ್ಷಗಳ ಈ ಕೂಟದ ಕೆಲವು ಸದಸ್ಯರ ಸಲಹೆ ಕುತೂಹಲಕಾರಿ ಆಗಿದೆ. ಇದನ್ನು ಯಾರೂ ನಿರೀಕ್ಷಿಸಿರಲಿಲ್ಲ. ಇತ್ತೀಚೆಗೆ ನಡೆದ ಮೈತ್ರಿಕೂಟದ ಸಭೆಯಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ನೀಡಿದ ಈ ಸಲಹೆಯನ್ನು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಮರ್ಥಿಸಿದ್ದಾರೆ. ಈ ಇಬ್ಬರು ಮುಖ್ಯಮಂತ್ರಿಗಳು ಖರ್ಗೆ ಅವರ ಬಗ್ಗೆ ಒಳ್ಳೆಯ ಭಾವನೆಯಿಂದಲೇ ಹಾಗೆ ಹೇಳಿರಬಹುದು. ಆದರೂ ಅವರು ಒಂದೇ ಕಲ್ಲಿನಿಂದ ಎರಡು ಹಕ್ಕಿಗಳನ್ನು ಹೊಡೆಯಲು ಹೊರಟಿದ್ದಾರೇನೋ ಎಂದು ಅನ್ನಿಸದೇ ಇರದು.

ಈ ಸಲಹೆಯ ಹಿಂದೆ, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅಥವಾ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ‘ಇಂಡಿಯಾ’ ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯನ್ನಾಗಿ ಘೋಷಿಸುವ ಸಾಧ್ಯತೆಯನ್ನು ತಡೆಯುವ ಹುನ್ನಾರವಿದೆಯೇ? ಏಕೆಂದರೆ, ಈ ಸಭೆಗೆ ಮುನ್ನಾದಿನ ದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ಮಮತಾ, ‘ಮೈತ್ರಿಕೂಟ ಅಧಿಕಾರಕ್ಕೆ ಬಂದ ನಂತರ, ಸಂಸದರೆಲ್ಲ ಸೇರಿ ಪ್ರಧಾನಿಯನ್ನು ಆಯ್ಕೆ ಮಾಡಲಿದ್ದಾರೆ’ ಎಂದಿದ್ದರು. ರಾಹುಲ್ ಪ್ರಧಾನಿ ಅಭ್ಯರ್ಥಿ ಆಗುವುದಕ್ಕೆ ಈ ಇಬ್ಬರೂ ಎಂದೂ ಸಹಮತ ವ್ಯಕ್ತಪಡಿಸಿದವರಲ್ಲ.

ನಿತೀಶ್ ಅವರನ್ನು ಈ ನಾಯಕರು ತಮ್ಮ ಸರಿಸಮಾನ ಎಂದೇ ಭಾವಿಸುತ್ತಾರೆ. ಕಾಂಗ್ರೆಸ್ಸನ್ನು ಪರೀಕ್ಷಿಸುವ ಉದ್ದೇಶ ಕೂಡ ಇವರ ನಡೆಯ ಹಿಂದೆ ಇರಬಹುದು– ಉತ್ತರದ ಮೂರು ರಾಜ್ಯಗಳಲ್ಲಿ ಸೋಲುಂಡಿರುವ ಕಾಂಗ್ರೆಸ್‌ಗೆ, ಚೌಕಾಸಿ ನಡೆಸುವ ಸಾಮರ್ಥ್ಯ ಬಹಳಷ್ಟು ಕಡಿಮೆಯಾಗಿದೆ. ಖರ್ಗೆ ಪರವಾದ ಈ ಹೇಳಿಕೆಯ ಬಗ್ಗೆ ಬಿಹಾರದ ನಾಯಕದ್ವಯರಾದ ನಿತೀಶ್ ಹಾಗೂ ಆರ್‌ಜೆಡಿ ನಾಯಕ ಲಾಲು ಪ್ರಸಾದ್ ಏನನ್ನುತ್ತಾರೆ? ವರದಿಗಳ ಪ್ರಕಾರ, ಈ ಇಬ್ಬರಿಗೂ ಖರ್ಗೆ ಅವರು ಪ್ರಧಾನಿ ಅಭ್ಯರ್ಥಿಯಾಗುವುದು ಇಷ್ಟವಿಲ್ಲ. ನಿತೀಶ್ ಅವರ ಪರವಾಗಿ ಇರುವ ಅಂಶಗಳೆಂದರೆ, ಬಿಜೆಪಿ ವಿರುದ್ಧ ಮೈತ್ರಿಕೂಟ ರಚಿಸುವ ದಿಸೆಯಲ್ಲಿ ಮೊದಲು ಕೆಲಸ ಪ್ರಾರಂಭಿಸಿದ್ದು ನಿತೀಶ್. ಅವರು ಸ್ವತಃ ಪ್ರಧಾನಿ ಅಭ್ಯರ್ಥಿಯಾಗಬೇಕೆಂದು ಬಯಸಿದ್ದಿರಲೂಬಹುದು. ಲಾಲು ಕೂಡ ನಿತೀಶ್ ದೆಹಲಿಗೆ ಹೋಗಲಿ ಎಂದು ಕಾಯುತ್ತಿದ್ದಾರೆ. ಏಕೆಂದರೆ, ಆಗ ತಮ್ಮ ಪುತ್ರ ತೇಜಸ್ವಿ ಯಾದವ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬಹುದು ಎನ್ನುವ ಅವರ ಪುತ್ರಪ್ರೇಮ ಇದರ ಹಿಂದೆ ಇದೆ.

ಇನ್ನು ಇತರ ನಾಯಕರ ಬಗ್ಗೆ ಹೇಳುವುದಾದರೆ, ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಇನ್ನೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಡಿಎಂಕೆ ನಾಯಕ ಹಾಗೂ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಎಂದಿಗೂ ಕಾಂಗ್ರೆಸ್‌ನವರೇ ಪ್ರಧಾನಿ ಅಭ್ಯರ್ಥಿ ಆಗಬೇಕೆಂದು ಬಯಸುವವರು. ‘ಇಂಡಿಯಾ’ ಸಭೆಯಲ್ಲಿ ಡಿಎಂಕೆ ಸದಸ್ಯರ ವಿರುದ್ಧ ನಿತೀಶ್ ಎಬ್ಬಿಸಿದ ಭಾಷಾ ವಿವಾದವನ್ನು, ಪ್ರಧಾನಿ ಅಭ್ಯರ್ಥಿಯನ್ನಾಗಿ ಖರ್ಗೆ ಅವರನ್ನು ಘೋಷಿಸಬೇಕೆಂಬ ಸಲಹೆಗೆ ಅವರ ಪರೋಕ್ಷ ಪ್ರತಿಕ್ರಿಯೆ ಎಂದೇ ನೋಡಲಾಗುತ್ತಿದೆ.

ವಿರೋಧ ಪಕ್ಷಗಳ ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗಿ ಹೊರಹೊಮ್ಮಲು ಒಂದು ಪ್ರಕ್ರಿಯೆ ಇದೆ. ಅದರ ಪ್ರಕಾರ, ಆ ಅಭ್ಯರ್ಥಿಯ ಹೆಸರನ್ನು ಅವರು ಪ್ರತಿನಿಧಿಸುವ ಪಕ್ಷವು ಮೊದಲು ಸೂಚಿಸಬೇಕು. ಅಂದರೆ, ಈಗ ಖರ್ಗೆ ಅವರ ಹೆಸರನ್ನು ಮೊದಲು ಕಾಂಗ್ರೆಸ್ ಸೂಚಿಸಬೇಕಾಗುತ್ತದೆ. ರಾಹುಲ್ ಗಾಂಧಿ ಈವರೆಗೆ ಪಕ್ಷದ ಅಧ್ಯಕ್ಷರಾಗಲು ಅಸಮ್ಮತಿ ವ್ಯಕ್ತಪಡಿಸಿದ್ದಾರೆಯೇ ವಿನಾ ಪ್ರಧಾನಿ ಹುದ್ದೆಯ ಪ್ರಸ್ತಾವಕ್ಕಲ್ಲ. ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶಶಿ ತರೂರ್ ಅವರನ್ನು ಖರ್ಗೆ ಮಣಿಸಿದರು. ಆಗ ಖರ್ಗೆ ಅವರಿಗೆ ಗಾಂಧಿ ಕುಟುಂಬದ ಬೆಂಬಲ ಇತ್ತು. ಆದರೆ ಈಗಿನ ಸಂದರ್ಭದಲ್ಲಿ, ಗಾಂಧಿ ಕುಟುಂಬವು ಖರ್ಗೆ ಅವರ ಹೆಸರನ್ನು ಮುಂಚೂಣಿಗೆ ತರುವುದೇ?

ಇದರ ಮುಂದಿನ ಪ್ರಕ್ರಿಯೆಯೆಂದರೆ, ‘ಇಂಡಿಯಾ’ ಕೂಟದ ನಾಯಕನ ಆಯ್ಕೆ. ಇಲ್ಲಿ ಒಮ್ಮತದ ನಿರ್ಧಾರ ಬಹುಮುಖ್ಯ. ಅಕಸ್ಮಾತ್, ಈ ಕೂಟವು ಕಾಂಗ್ರೆಸ್ ಪಕ್ಷ ನಿರ್ಧಾರ ಕೈಗೊಳ್ಳುವುದಕ್ಕೆ ಮುನ್ನ ಸ್ವತಃ ಖರ್ಗೆಯವರ ಪರವಾಗಿ ನಿರ್ಧಾರ ತೆಗೆದುಕೊಂಡರೆ, ಕಾಂಗ್ರೆಸ್‌ಗೆ ಅದನ್ನು ತಿರಸ್ಕರಿಸುವುದು ಕಷ್ಟವಾಗುತ್ತದೆ. ಮಮತಾ–ಕೇಜ್ರಿವಾಲ್ ಸಲಹೆಯ ನಂತರ, ರಾಜಕೀಯ ಮುತ್ಸದ್ದಿತನ ತೋರಿಸಿದ ಖರ್ಗೆ, ‘ನಾವು ಮೊದಲು ಗೆಲ್ಲೋಣ, ನಂತರ ಇಂತಹ ವಿಷಯಗಳ ಬಗ್ಗೆ ತೀರ್ಮಾನಿಸೋಣ’ ಎಂದರು. ತಮ್ಮ ಸ್ಥಾನ, ಅಧಿಕಾರವನ್ನು ನಿರ್ಧರಿಸುವವರು ಏನಿದ್ದರೂ ಗಾಂಧಿ ಪರಿವಾರದವರೇ ವಿನಾ ವಿರೋಧಿ ಕೂಟವಲ್ಲ ಎಂಬುದು ಖರ್ಗೆಯವರಿಗೂ ಚೆನ್ನಾಗಿ ಗೊತ್ತು. ಹೀಗಾಗಿ, ಗಾಂಧಿ ಕುಟುಂಬದ ಮೂಲಕ ಮಾತ್ರವೇ ತಮ್ಮ ಹೆಸರು ಮುನ್ನೆಲೆಗೆ ಬರಬೇಕೆಂದು ಖರ್ಗೆ ಇಚ್ಛಿಸುತ್ತಾರೆ.

ಖರ್ಗೆ ‘ಇಂಡಿಯಾ’ದ ಪ್ರಧಾನಿ ಅಭ್ಯರ್ಥಿ ಆಗುವುದರಿಂದ ಆಗುವ ಲಾಭ-ನಷ್ಟಗಳೇನು? ಒಂದು ಬಹುದೊಡ್ಡ ಪ್ಲಸ್ ಪಾಯಿಂಟ್ ಎಂದರೆ, ಅವರ ಸ್ವೀಕಾರಾರ್ಹತೆ. ತಮ್ಮ ಐದು ದಶಕಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಅವರು ಯಾವುದೇ ಕಳಂಕ ಅಂಟಿಸಿಕೊಳ್ಳದಿರುವುದು ಅಥವಾ ವಿವಾದದಲ್ಲಿ ಸಿಲುಕಿಕೊಳ್ಳದೇ ಇರುವುದು, ಈ ಮೂಲಕ ಅದು ವೈಯಕ್ತಿಕವಾಗಿ ಮಾತ್ರವಲ್ಲದೆ ಅವರು ನಿರ್ವಹಿಸಿದ ಹುದ್ದೆ ಹಾಗೂ ಪಕ್ಷದ ಘನತೆ, ಗೌರವವನ್ನೂ ಹೆಚ್ಚಿಸಿರುವುದು. ಖರ್ಗೆ ಉತ್ತರ ಭಾರತದಲ್ಲಿ ಹೆಚ್ಚು ಬಳಕೆಯಲ್ಲಿರುವ ಹಿಂದಿಯನ್ನು ಚೆನ್ನಾಗಿ ಬಲ್ಲರು. ದಲಿತ ನಾಯಕರೂ ಆಗಿರುವುದರಿಂದ, ಪ್ರಚಾರದ ಸಮಯದಲ್ಲಿ ಅವರನ್ನು ಟೀಕಿಸಲು ಬಿಜೆಪಿ ಎರಡೆರಡು ಬಾರಿ ಯೋಚಿಸಬೇಕಾಗುತ್ತದೆ.



ಹಿಂದೆ ಒಂದೆರಡು ಬಾರಿ ಪ್ರಧಾನಿ ನರೇಂದ್ರ ಮೋದಿ ಕೂಡ ಖರ್ಗೆಯವರನ್ನು ಕೊಂಡಾಡಿದ್ದುಂಟು. ಆದಾಗ್ಯೂ, ಮೋದಿಯವರಿಗೆ ವಿರುದ್ಧವಾಗಿ ಎದುರಾಳಿಯೊಬ್ಬರು ನಿಲ್ಲುವುದನ್ನು ಬಿಜೆಪಿ ಸ್ವಾಗತಿಸುತ್ತದೆ. ಏಕೆಂದರೆ, ಮೋದಿಯವರಂಥ ಭಾಷಣಕಾರ ಹಾಗೂ ವರ್ಚಸ್ವಿ ನಾಯಕ ವಿರೋಧ ಪಕ್ಷದಲ್ಲಿ ಇಲ್ಲ ಎಂಬುದು ಬಿಜೆಪಿಗೆ ಚೆನ್ನಾಗಿ ಗೊತ್ತು. ಮೋದಿಯವರಿಗೆ ಬಹುಶಃ ರಾಹುಲ್ ಅಥವಾ ಕಾಂಗ್ರೆಸ್‌ನ ಯಾವುದೇ ನಾಯಕ ತಮ್ಮ ಎದುರಾಳಿಯಾದರೆ ಒಳ್ಳೆಯದು. ಏಕೆಂದರೆ, ಆಗ ಕಾಂಗ್ರೆಸ್‌ನ ಕೌಟುಂಬಿಕ ರಾಜಕಾರಣವನ್ನು ಅಸ್ತ್ರವಾಗಿ ಬಳಸಿಕೊಳ್ಳುವುದು ಅವರಿಗೆ ಸುಲಭವಾಗುತ್ತದೆ.


ಇನ್ನು ಖರ್ಗೆಯವರ ಮೈನಸ್ ಪಾಯಿಂಟ್‌ಗಳನ್ನು ಗಮನಿಸಿದರೆ, ಇಂಡಿಯಾ ಮೈತ್ರಿಕೂಟಕ್ಕೆ ಅವರಿಂದ ಕೆಲವು ಅನನುಕೂಲಗಳು ಆಗಬಹುದು. ಮೊದಲನೆಯದಾಗಿ, ಖರ್ಗೆ ಇಡೀ ಭಾರತದಾದ್ಯಂತ ಮನೆಮಾತಾಗಿರುವ ನಾಯಕನಲ್ಲ. ಅವರು ದೇಶದಾದ್ಯಂತ ಮತಗಳನ್ನು ಸೆಳೆಯಬಲ್ಲ ನಾಯಕನೂ ಅಲ್ಲ. ಅವರಿಂದ ದಲಿತ ಮತಗಳ ಕ್ರೋಡೀಕರಣ ಆಗಲಿದೆಯೇ? ಬಹುಶಃ ಆಗಲಿಕ್ಕಿಲ್ಲ. ಏಕೆಂದರೆ, ಹಿಂದಿನ ಎರಡು ಚುನಾವಣೆಗಳಲ್ಲಿ ಬಿಜೆಪಿಯು ಪರಿಶಿಷ್ಟ ಜಾತಿಯ ಮೀಸಲು ಕ್ಷೇತ್ರಗಳಲ್ಲಿ ಹಿಡಿತ ಸಾಧಿಸಿದೆ. 2019ರಲ್ಲಿ, ದೇಶದಾದ್ಯಂತ ಇರುವ 84 ಪರಿಶಿಷ್ಟ ಮೀಸಲು ಕ್ಷೇತ್ರಗಳಲ್ಲಿ 46ರಲ್ಲಿ ಕೇಸರಿ ಪಕ್ಷ ಗೆಲುವು ದಾಖಲಿಸಿದೆ. ದೇಶದ ಶೇ 17ರಷ್ಟಿರುವ ದಲಿತರ ಮತಗಳನ್ನು ಕ್ರೋಡೀಕರಿಸಲು ಖರ್ಗೆಯವರ ಮೇಲೆ ಒತ್ತಡ ಬರುವುದಂತೂ ನಿಶ್ಚಿತ.

ಈ ಸಮರ್ಥ ನಾಯಕನಿಗೆ ಸಂಬಂಧಿಸಿದ ಮತ್ತೊಂದು ಅನನುಕೂಲ, ಅವರ ವಯಸ್ಸು. 81ರ ಹರೆಯದ ಖರ್ಗೆ ದೇಶದ ಶೇ 65ರಷ್ಟಿರುವ ಯುವಜನರ ಮತಗಳನ್ನು ಎಷ್ಟರಮಟ್ಟಿಗೆ ಸೆಳೆಯಬಲ್ಲರು? ಪ್ರಧಾನಿ ಅಭ್ಯರ್ಥಿಯಾದ ಮೇಲೆ ದೇಶದಾದ್ಯಂತ ತಿರುಗಾಡಬೇಕಾಗುತ್ತದೆ. ಕಾಲುನೋವಿನಿಂದ ಬಳಲುತ್ತಿರುವ ಅವರು ಈ ಇಳಿವಯಸ್ಸಿನಲ್ಲಿ ಇಂತಹ ಸವಾಲನ್ನು ಎದುರಿಸಬಲ್ಲರೇ? ಕೊನೆಯದಾಗಿ, ಖರ್ಗೆಯವರ ಮೇಲೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಒತ್ತಡ ಬರಬಹುದು. ಈಗಾಗಲೇ ರಾಜ್ಯಸಭಾ ಸದಸ್ಯರಾಗಿರುವ ಅವರು ನೇರ ಚುನಾವಣೆ ಎದುರಿಸುವ ಸಾಧ್ಯತೆ ಕಡಿಮೆ. 2019ರಲ್ಲಿ ಖರ್ಗೆ 95 ಸಾವಿರಕ್ಕೂ ಹೆಚ್ಚು ಮತಗಳಿಂದ ಸ್ವಕ್ಷೇತ್ರ ಕಲಬುರಗಿಯಲ್ಲಿ ಸೋತಿದ್ದರು.

ಖರ್ಗೆ ಅವರು ಉತ್ತರಪ್ರದೇಶದಿಂದ ಸ್ಪರ್ಧಿಸಬೇಕೆಂದು ಕೆಲವರು ಹೇಳುತ್ತಿದ್ದಾರೆ. ಆದರೆ ಅಲ್ಲಿ ಕಾಂಗ್ರೆಸ್‌ನ ಸ್ಥಿತಿ ನೋಡಿ: ಅಲ್ಲಿರುವ ಪರಿಶಿಷ್ಟ ಜಾತಿಯ 17 ಮೀಸಲು ಕ್ಷೇತ್ರಗಳಲ್ಲಿ ಕಾಂಗ್ರೆಸ್ 2014 ಹಾಗೂ 2019ರಲ್ಲಿ ಒಂದು ಕ್ಷೇತ್ರದಲ್ಲೂ ಗೆದ್ದಿಲ್ಲ. 2014ರಲ್ಲಿ ಬಿಜೆಪಿ ಎಲ್ಲ 17 ಹಾಗೂ 2019ರಲ್ಲಿ 15 ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. ಒಟ್ಟಿನಲ್ಲಿ, ವಿರೋಧಿ ಬಣದಿಂದ ಪ್ರಧಾನಿ ಅಭ್ಯರ್ಥಿ ಯಾರಾಗಬೇಕೆನ್ನುವ ಪ್ರಶ್ನೆ ಕುತೂಹಲಕಾರಿ ಘಟ್ಟ ತಲುಪಿದೆ.

ಲೇಖಕ: ಹಿರಿಯ ಪತ್ರಕರ್ತ

ಚುರುಮುರಿ



ಮಗಳ ಬೂಟು ಈಗೆಲ್ಲಿ?

• ಸುಮಂಗಲಾ

‘ಮಗಳನ್ನು ಉಳಿಸಿ, ಮಗಳನ್ನು ಬೆಳೆಸಿ, ಮಗಳ ಬೂಟು ಮಾತ್ರ ಮೇಜಿನ ಮ್ಯಾಗೆ’ ಬೆಕ್ಕಣ್ಣ ರಾಗವಾಗಿ ತುಸು ಖೇದದಿಂದ ಹಾಡುತ್ತಿತ್ತು.

‘ಏನಲೇ... ಹೊಸಾ ಹಾಡು ಹಾಡಾಕೆ ಹತ್ತಿ?’ ಎಂದೆ ಅಚ್ಚರಿಯಿಂದ.

‘ಅದೇ ನಮ್ಮ ಮೋದಿ ಮಾಮಾರು ಬೇಟಿ ಬಚಾವೋ, ಬೇಟಿ ಪಢಾವೋ ಅಂದಿದ್ದರಲ್ಲ... ಅದಕ್ಕೆ, ನಮ್ಮ ಕುಸ್ತಿಯಾಡೋ ಬೇಟಿಗಳ ಸ್ಥಿತಿ ನೋಡಿ ನಾನು ಎರಡನೇ ಸಾಲು ಸೇರಿಸಿದೆ’ ಎನ್ನುತ್ತ ಕುಸ್ತಿಪಟು ಸಾಕ್ಷಿ ತಮ್ಮ ಶೂಗಳನ್ನು ಮೇಜಿನ ಮೇಲಿಟ್ಟು ಗಳಗಳನೆ ಅತ್ತಿದ್ದನ್ನು ತೋರಿಸಿತು.

‘ಮತ್ತ ನಿಮ್ಮ ಮೋದಿ ಮಾಮಾರು ಅಷ್ಟೆಲ್ಲ ಬೇಟಿ ಅಂತ ಬಡಬಡಿಸೋರು ಹೀಂಗ ಆಕಿ ಬೂಟ್ ಕಳಚಿಟ್ಟದ್ದನ್ನು, ಕುರ್ಚಿ ಮ್ಯಾಗೆ ಆ ಸಂಸದನ ಆಪ್ತನನ್ನೇ ತಂದು ಕೂರಿಸಿದ್ದನ್ನು ನೋಡಿ ಎದಕ್ಕೆ ಸುಮ್ಮನೆ ಕುಂತಾರಲೇ?’

‘ಇದ್ರಾಗೆ ಮೋದಿಮಾಮನ ಎದಕ್ಕ ಎಳೆದು ತರ್ತೀ? ಪಾಪ... ಎಲ್ಲಾದಕ್ಕೆ ಅಂವಾ ಹೆಂಗೆ ಹೊಣೆಯಾಗತಾನ?’ ಬೆಕ್ಕಣ್ಣ ಮೋದಿಮಾಮನನ್ನು ಸುಲಭಕ್ಕೆ ಬಿಟ್ಟುಕೊಡುವುದುಂಟೇ?!

‘ಕುಸ್ತಿಪಟುಗಳು ಆವಾಗ ಧರಣಿ ಮಾಡೂ ಮುಂದ ನೀವೆಲ್ಲ ಹೆಣ್ಣುಮಕ್ಕಳು ಸುಮ್ಮನಿದ್ರಿ, ಉಳಿದ ಕ್ರೀಡಾಪಟುಗಳು ಸುಮ್ಮನಿದ್ದರು, ಕ್ರೀಡಾ ಪ್ರಾಧಿಕಾರಗಳು ಬಾಯಿಗೆ ಬೀಗ ಹಾಕ್ಕೊಂಡಿದ್ದವು. ಅದೇ ಆಕಿ ಒಲಿಂಪಿಕ್ ಕಂಚಿನ ಪದಕ ಗೆದ್ದಾಗ ಮಾತ್ರ ನೀವೇ ಗೆದ್ದೀರಿ ಅನ್ನೂಹಂಗ ಹೆಮ್ಮೆಯಿಂದ ಬೀಗಿದ್ರಿ’ ಎಂದು ನನ್ನ ಮೂತಿಗೆ ತಿವಿಯಿತು.

‘ಅದಕ್ಕೇ ನೋಡು... ಮಗಳನ್ನು ಉಳಿಸೂದು, ಓದಿಸೂದು, ಬೂಟು ತೊಡಿಸೂದು ಇಂಥಾ ಯಾವ ರಗಳೇನೇ ಬ್ಯಾಡ ಅಂತ ಮಂಡ್ಯಾದಾಗ ಹೆಣ್ಣು ಭ್ರೂಣಹತ್ಯೆಗೆ ಅಷ್ಟೆಲ್ಲ ಮಂದಿ ಟೊಂಕ ಕಟ್ಟಿ ನಿಂತಿದ್ರು’ ಎಂದೆ.

‘ನಿಮ್ಮ ಮನುಷ್ಯ ಪ್ರಾಣಿ ಜಾತಿವಳಗೆ ಗಂಡುಗಳು ಮಾಡೋ ಅಟಾಟೋಪ ನೋಡಿದ್ರೆ, ನೀವು ಹೆಣ್ಣುಮಕ್ಕಳು ಕಾಲಿಗೆ ಬೂಟು ಹಾಕದಿದ್ದರೂ ಪರವಾಗಿಲ್ಲ, ಕೈಯಾಗೆ ಸದಾ ಬೂಟು ಇಟ್ಟುಕೊಂಡಿರಬೇಕು ನೋಡು’ ಎನ್ನುತ್ತ ಬೆಕ್ಕಣ್ಣ ಮೂತಿ ತಿರುವುತ್ತಾ ಹೊರ ನಡೆಯಿತು.

ಸಂಗತ

ಪೂರ್ವಗ್ರಹ ಹತ್ತಿಕ್ಕುವ ಬಗೆ ಹೇಗೆ?

ತಾವು ನಂಬಿರುವುದೆಲ್ಲವೂ ನಿಜ ಅಂದುಕೊಳ್ಳುವಂತೆ ಮಾಡುವ ಭ್ರಮೆಗಳಿಗೆ ಡೀಪ್‌ಫೇಕ್ ಮಾಹಿತಿಗಳು ಮತ್ತಷ್ಟು ಬಲ ನೀಡುತ್ತವೆ

• ಡಾ. ಎ.ಶ್ರೀಧರ

ಕೆಲವು ಪ್ರಸಿದ್ಧ ವ್ಯಕ್ತಿಗಳ ಡೀಪ್‌ಫೇಕ್ ವಿಡಿಯೊಗಳು ಈಚೆಗೆ ಸಾಮಾಜಿಕ ಜಾಲತಾಣಗಳ ಮೂಲಕ ಹರಿದಾಡಿದ ಸಂಗತಿಯು ಕೃತಕ ಬುದ್ಧಿಸಾಮರ್ಥ್ಯ (ಎ.ಐ) ದುರ್ಬಳಕೆಗೆ ಸಂಬಂಧಿಸಿದ ಕಳವಳ ಹೆಚ್ಚುವಂತೆ ಮಾಡಿದೆ. ಡೀಪ್‌ಫೇಕ್ ವಿಡಿಯೊಗಳ ಮಾಹಿತಿಯು ಯುದ್ಧ, ಪರಸ್ಪರ ಸಂಘರ್ಷ, ಕೋಮು ವೈಷಮ್ಯ, ಕ್ರೌರ್ಯ, ಸಮೂಹ ಮನೋಚಂಚಲ ಮತ್ತು ಸಮೂಹಸನ್ನಿಗೂ ಪ್ರಬಲ ಪ್ರೇರಣೆಯಾಗುವ ಸಾಧ್ಯತೆ ಇದೆ. ಸಾರ್ವಜನಿಕ ಅಭಿಪ್ರಾಯ ರೂಪಿಸುವಲ್ಲಿಯೂ ತನ್ನದೇ ಕೊಡುಗೆ ನೀಡಬಲ್ಲದು.

ಈ ಬಗೆಯ ವಿಡಿಯೊಗಳನ್ನು ವೀಕ್ಷಿಸುತ್ತಿರುವಾಗ ಉದ್ರೇಕದ ಭಾವ ವ್ಯಕ್ತವಾಗುವುದರೊಂದಿಗೆ, ಆ ದೃಶ್ಯಾವಳಿಗಳೆಲ್ಲವೂ ಸತ್ಯ ಎನ್ನುವಂತಹ ನಂಬಿಕೆಯೂ ಗಟ್ಟಿಯಾಗಬಹುದು. ವ್ಯಕ್ತಿಯಲ್ಲಿ ಇಂತಹ ಮನಃಸ್ಥಿತಿ ಮೂಡಿಸುವುದಕ್ಕೆ ಕೃತಕ ಬುದ್ಧಿಸಾಮರ್ಥ್ಯದಿಂದ ಸೃಷ್ಟಿಯಾದಂತಹ ಸತ್ಯವಲ್ಲದ ಆಡಿಯೊ, ವಿಡಿಯೊಗಳು ಪ್ರಮುಖ ಕಾರಣ. ಇವು ಕಂಪ್ಯೂಟರ್, ಮೊಬೈಲ್ ಫೋನ್‌ಗಳ ಮೂಲಕ ವ್ಯಕ್ತಿಯ ಮನಸ್ಸಿನ ಮೇಲೆ ಹಿಡಿತ ಸಾಧಿಸಬಲ್ಲವು, ನಾಗರಿಕತೆಗೇ ಮಾರಕವಾಗಬಲ್ಲವು.

ಮಾನವೀಯ ಸಂವೇದನೆಗಳ ಕಾರಣದಿಂದಲೇ ಅತ್ಯಂತ ಪ್ರಭಾವಶಾಲಿ ಎನ್ನಿಸಿಕೊಂಡಿರುವ ಮನುಷ್ಯನಲ್ಲಿ ಇರುವ ಅಮಾನವೀಯ ಗುಣವನ್ನು ಕ್ಷಣ ಮಾತ್ರದಲ್ಲಿ ಹೊರಗೆಡವಬಲ್ಲ ತಂತ್ರಜ್ಞಾನವು ವ್ಯಕ್ತಿಯ ತಿಳಿವಳಿಕೆಗೆ ದೊಡ್ಡ ಸವಾಲಾಗಿದೆ. ನಾವು ವೀಕ್ಷಿಸುವ ವಿಕೃತ ದೃಶ್ಯಾವಳಿಗಳು, ಆಲಿಸುವ ಕಟು ಧ್ವನಿಗಳು ನೈಜವಲ್ಲ ಎನ್ನುವುದನ್ನು ಗುರುತಿಸಲು ಸಾಧ್ಯವಾಗದಂತಹ ಪರಿಸ್ಥಿತಿಯತ್ತ ವೇಗವಾಗಿ ಜಾರುತ್ತಿದ್ದೇವೆ. ಹೀಗಿದ್ದಾಗ ಮಾನವ ಸಂಬಂಧ, ವ್ಯವಹಾರಗಳಿಗೆ ಧಕ್ಕೆ ಉಂಟಾಗುವುದರಲ್ಲಿ ಯಾವ ಸಂದೇಹವೂ ಇರದು.

ಇಂತಹ ಆತಂಕಗಳ ನಡುವೆಯೇ ಸುಳ್ಳಿನ ಕಂತೆಗಳನ್ನು ಬಿಡಿಸಿ, ಸತ್ಯವನ್ನಷ್ಟೇ ಗುರುತಿಸಬಲ್ಲ ತಂತ್ರಾಂಶಗಳನ್ನು ರೂಪಿಸುವ ಪ್ರಯತ್ನಗಳೂ ಮುಂದುವರಿದಿವೆ. ಡೀಪ್‌ಫೇಕ್ ಮಾಹಿತಿಗಳನ್ನು ನಿಖರವಾಗಿ ವಿಂಗಡಿಸುವ ಪ್ರಯತ್ನಗಳು ಎಷ್ಟೇ ಪರಿಣಾಮಕಾರಿಯಾಗಿದ್ದರೂ ಮನುಷ್ಯ ಸ್ವಭಾವದಿಂದ ಮೂಡುವ ನಿರಂಕುಶ ಅಧಿಕಾರದ ಹಂಬಲ, ಅತಿ ದುರಾಸೆ, ದರ್ಪ ಧೋರಣೆ, ಹದಗೆಟ್ಟ ವ್ಯಕ್ತಿತ್ವದ ಪರಿಣಾಮ ಹೆಚ್ಚು ಅಪಾಯಕಾರಿ. ಆಗಿಂದಾಗ್ಗೆ ನೀಗಿಸದೇ ಬೆಳೆಸಿಕೊಂಡು ಬಂದಂತಹ ಮನುಷ್ಯ ದೌರ್ಬಲ್ಯಗಳಿವು. ತನ್ನ ಹಾಗೂ ಇತರರ ನೆಮ್ಮದಿಯ ಬದುಕನ್ನು ನಾಶ ಮಾಡುವ ಒಳಮನಸ್ಸಿನ ಉಗ್ರ ಬಯಕೆಯೇ ಅತಿದೊಡ್ಡ ಸಮಸ್ಯೆ.

ಕಂಪ್ಯೂಟರ್, ಮೊಬೈಲ್ ಫೋನ್ ಮೂಲಕ ಅಂತರ್ಜಾಲದಲ್ಲಿ ಸದಾ ವಿಹರಿಸುವವರು, ವ್ಯವಹರಿಸುವವರು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಡೀಪ್‌ಫೇಕ್ ವಿಡಿಯೊಗಳ ಸ್ವರೂಪ ಮತ್ತು ತಿರುಳನ್ನು ಗುರುತಿಸಬಲ್ಲರು. ತಾವು ನೋಡುತ್ತಿರುವ ವಿಡಿಯೊ, ಆಡಿಯೊಗಳಲ್ಲಿ ಹುಸಿತನ ಇರಬಹುದು ಎನ್ನುವ ಸಂದೇಹದ ಭಾವನೆಯೇ ವಿಚಾರ ಮಾಡುವಂತೆ ಅವರನ್ನು ಉತ್ತೇಜಿಸುವುದು. ಆದರೆ, ಈ ಅಭಿಪ್ರಾಯವನ್ನು ಬೆಂಬಲಿಸುವ ಮನೋವೈಜ್ಞಾನಿಕ ಅಧ್ಯಯನದ ಪ್ರಕಾರ, ಆನ್‌ಲೈನ್ ಸಂಪರ್ಕವನ್ನು ಅನುಭವ ಮತ್ತು ಅಗತ್ಯಕ್ಕಾಗಿ ಉಪಯೋಗಿಸುವವರಲ್ಲಿ ಅಂತರ್ಜಾಲದ ಮೂಲಕ ಹರಿದಾಡುವ ವಿಡಿಯೊಗಳನ್ನು ಶಂಕೆಯಿಂದ ನೋಡುವವರ ಸಂಖ್ಯೆ ಅಷ್ಟೇನೂ ಬೆಳೆಯುತ್ತಿಲ್ಲ. ಆದರೆ ತಮ್ಮ ಅಭಿಪ್ರಾಯ, ಬಯಕೆಗಳನ್ನು ಬೆಂಬಲಿಸುವ ವಿಡಿಯೊಗಳನ್ನು ನೋಡಬೇಕೆನಿಸುವವರನ್ನು ಕ್ಷಣಮಾತ್ರದಲ್ಲಿ ಗುರುತಿಸಿ ತಮ್ಮತ್ತ ಸೆಳೆಯಬಲ್ಲ ವಿಡಿಯೊಗಳ ಸಂಖ್ಯೆ ಅಂದಾಜಿಗೂ ಸಿಗದು. ಹೀಗಾಗಿ, ನೇರವಾಗಿ ವ್ಯಕ್ತಗೊಳ್ಳುವ ಪೂರ್ವಗ್ರಹಗಳು, ಸಾಮಾಜಿಕ ಸಭ್ಯತೆಯ ಕಾರಣದಿಂದ ಹೊರಬರಲು ಹಿಂಜರಿಯುವ ಪೂರ್ವಗ್ರಹಗಳು ಸಾಮಾಜಿಕ ಮಾಧ್ಯಮದ ವೈಯಕ್ತಿಕ ಖಾತೆಗಳ ಮೂಲಕ ಸಲೀಸಾಗಿ ಪ್ರಚುರಗೊಳ್ಳುತ್ತವೆ.



ಎಲ್ಲ ವಿಧದ ಪೂರ್ವಗ್ರಹಗಳೂ ಜನಮಾನಸದಲ್ಲಿ ಇಳಿಯುವ ಪ್ರಯತ್ನವನ್ನು ಮಾಡುತ್ತಲೇ ಇರುತ್ತವೆ. ಕೆಲವರಿಗಂತೂ ತಮ್ಮ ಮನೋಗೊಂದಲ, ತಮ್ಮಲ್ಲಿ ಹುದುಗಿರುವ ಅಸಹನೀಯ ಬಯಕೆಗಳಿಗೆ ಇಂತಹ ವಿಡಿಯೊಗಳೇ ಶಮನಕಾರಿ. ತಾವು ನಂಬಿರುವುದೆಲ್ಲವೂ ನಿಜ ಅಂದುಕೊಳ್ಳುವಂತೆ ಮಾಡುವ ಭ್ರಮೆಗಳಿಗೆ ಡೀಪ್‌ಫೇಕ್ ಮಾಹಿತಿಗಳು ಮತ್ತಷ್ಟು ಬಲ ನೀಡುತ್ತವೆ.

ಪೂರ್ವಗ್ರಹದಿಂದ ತುಂಬಿರುವ ನಮ್ಮ ನಂಬಿಕೆಗಳಿಗೂ ಭಾವುಕತನಕ್ಕೂ ಅತಿ ಹತ್ತಿರದ ನಂಟು. ಈ ನಮೂನೆಯ ಮಾನಸಿಕ ಸ್ಥಿತಿಯು ತಂತ್ರಜ್ಞಾನ ಆಧಾರಿತ ಕೃತಕಬುದ್ಧಿಸಾಮರ್ಥ್ಯವು ಸೃಷ್ಟಿಸುವ ಹುಸಿತನಕ್ಕಿಂತಲೂ ಹೆಚ್ಚು ಅಪಾಯಕಾರಿ. ಹೀಗಾಗಿ, ವಿಚಾರ ಮಾಡದೇ ಸಮ್ಮತಿಸುವ ಮನಸ್ಸು ಡೀಪ್‌ಫೇಕ್ ಮಾಹಿತಿಗಳನ್ನು ಸದಾ ಆದರದಿಂದ ಸ್ವಾಗತಿಸಲು ಹವಣಿಸುತ್ತಲೇ ಇರುತ್ತದೆ.

ಸಾಮಾಜಿಕ ಮಾಧ್ಯಮಗಳ ತಂತ್ರಜ್ಞಾನವು ಈ ವಾಸ್ತವವನ್ನು ಬಲು ಚೆನ್ನಾಗಿ ಅರ್ಥಮಾಡಿಕೊಂಡಿರುತ್ತದೆ. ಸುಲಭವಾಗಿ ಸಂಪರ್ಕಿಸಿ ಪ್ರತಿಕ್ರಿಯಿಸಬಹುದಾದ ಈ ಮಾಧ್ಯಮಗಳ ಅನುಯಾಯಿಗಳು ಯಾವಾಗಲೂ ಬೃಹತ್ ಸಂಖ್ಯೆಯಲ್ಲಿಯೇ ಇರುತ್ತಾರೆ, ಜನ ಮರುಳೋ ಜಾತ್ರೆ ಮರುಳೋ ಎನ್ನುವಂತೆ. ಆದ್ದರಿಂದಲೇ ಇಂದಿನ ಪೀಳಿಗೆಯ ಮನಸ್ಸಿನಲ್ಲಿ ಪೂರ್ವಗ್ರಹದ ಛಾಯೆ ಹೆಚ್ಚು ಪ್ರಾಬಲ್ಯ ಪಡೆಯದಂತೆ ಎಚ್ಚರ ವಹಿಸಬೇಕಾಗಿದೆ. ಈ ಕೆಲಸವನ್ನು ಯಾರು ಮಾಡಬಲ್ಲರು? ಇಂದಿನ ವಾತಾವರಣದಲ್ಲಿ ಶಾಲಾ ಪಠ್ಯದ ಮೂಲಕವಂತೂ ಸಾಧ್ಯ ಆಗದು. ಹಾಗಿದ್ದರೆ ಯಾರಿಂದ? ಬಹುಶಃ ಮನೆಯ ವಾತಾವರಣ ಮತ್ತು ಪೂರ್ವಗ್ರಹದಿಂದಾಗುವ ತೊಂದರೆಗಳ ಬಗ್ಗೆ ತಿಳಿಯಲು ಉತ್ಸುಕರಾಗಿರುವ ವಯಸ್ಕರು ಮತ್ತು ಪೋಷಕರಿಂದ ಸಾಧ್ಯವಾಗಬಹುದೇನೊ. ಸಾಚಾತನದ ಮುಖವಾಡವಿರುವ ಇವುಗಳನ್ನು ತಡೆಹಿಡಿಯಬಲ್ಲ ಯಶಸ್ವಿ ಪ್ರಯತ್ನಗಳಲ್ಲಿ ಮಾಧ್ಯಮಗಳ ಪಾತ್ರ ಮಹತ್ವದ್ದೇ ಆಗಿರುತ್ತದೆ.

ಲೇಖಕ: ಮನೋವಿಜ್ಞಾನಿ

ವಾಚಕರ ವಾಣಿ

ಭ್ರಷ್ಟಾಚಾರರಹಿತ ಮಾರ್ಗ ಇಲ್ಲವೇ?

ಹೊಟ್ಟೆ ಹಸಿದಿದ್ದ ಒಬ್ಬ ವ್ಯಕ್ತಿಗೆ ಹೇಗೋ ತಟ್ಟೆ ತುಂಬಾ ಆಹಾರ ಸಿಕ್ಕಿತಂತೆ. ಅದನ್ನು ತುಂಬಾ ಖುಷಿಯಿಂದ ತಿಂದ ಅವನು, ತಟ್ಟೆ ಖಾಲಿಯಾದ ಮೇಲೆ, ಊಟ ಒಂದು ಚೂರೂ ಸರಿ ಇರಲಿಲ್ಲ ಎಂದು ಹೇಳಿ ಎದ್ದು ಹೋದನಂತೆ. ಹೀಗಿದೆ, ಚಿತ್ರದುರ್ಗದ ಸಂಸದ ಹಾಗೂ ಕೇಂದ್ರ ಸಚಿವ ಎ.ನಾರಾಯಣ ಸ್ವಾಮಿ ಅವರ ನಡೆ! ಹೌದು, ನಾರಾಯಣ ಸ್ವಾಮಿ ಅವರು ‘ಭ್ರಷ್ಟಾಚಾರದಿಂದ ಬೇಸತ್ತು ರಾಜಕೀಯದಿಂದ ದೂರ ಉಳಿಯುವ ಬಗ್ಗೆ ಆಲೋಚಿಸಿದ್ದೇನೆ’ ಎಂದು ಹೇಳಿದ್ದಾರೆ. ಅವರು ರಾಜಕೀಯಕ್ಕೆ ಬರುವುದಕ್ಕಿಂತ ಮುಂಚಿನಿಂದಲೂ ರಾಜಕೀಯದಲ್ಲಿ ಭ್ರಷ್ಟಾಚಾರ ಹಾಸುಹೊಕ್ಕಾಗಿತ್ತು. ಹೀಗಾಗಿ, ರಾಜಕೀಯಕ್ಕೆ ಪದಾರ್ಪಣೆ ಮಾಡುವ ಮುನ್ನವೇ ಸಚಿವರು ಇಂತಹ ಆಲೋಚನೆಯನ್ನು ಮಾಡಿದ್ದರೆ ಅವರ ಮಾತಿಗೊಂದು ತೂಕ ಬರುತ್ತಿತ್ತು.

ರಾಜಕೀಯದಲ್ಲಿ ಅಪಾರ ಅನುಭವವಿರುವ ನಾರಾಯಣ ಸ್ವಾಮಿ, ಈವರೆಗೆ ಎಲ್ಲ ಸವಲತ್ತುಗಳನ್ನೂ ಅನುಭವಿಸಿ, ಈಗ ರಾಜಕೀಯದಲ್ಲಿ ಭ್ರಷ್ಟಾಚಾರವಿದೆ ಎಂದು ಹೇಗೆ ಹೇಳುತ್ತಾರೆ? ಇದರಲ್ಲಿ ಏನಾದರೂ ಒಂದು ತರ್ಕ ಇರಬಹುದಲ್ಲವೇ? ಬಹುಶಃ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ತಮಗೆ ಟಿಕೆಟ್ ಸಿಗುವುದಿಲ್ಲ ಎಂಬ ಮಾಹಿತಿ ಅವರಿಗೆ ಸಿಕ್ಕಿರಬಹುದೇ? ಹಾಗೇನಾದರೂ ಆಗಿದ್ದರೆ ಅವರು ಗೌರವಪೂರ್ವಕವಾಗಿ ರಾಜಕೀಯ ನಿವೃತ್ತಿ ಪಡೆಯಬಹುದಿತ್ತು. ಸಚಿವರ ಹೇಳಿಕೆಯ ಪ್ರಕಾರ, ಇನ್ನು ಮುಂದೆ ರಾಜಕೀಯ ಮಾಡುವವರೆಲ್ಲ ‘ಭ್ರಷ್ಟರು’ ಎಂದಂತೆ ಆಗುವುದಿಲ್ಲವೇ? ಸಚಿವರ ಹಿಂದೆ ಒಂದು ದೊಡ್ಡ ಬಣವೇ ಇದೆ. ಅವರು ಭ್ರಷ್ಟಾಚಾರರಹಿತ ರಾಜಕೀಯ ಮಾರ್ಗವನ್ನು ಅನುಸರಿಸಬಹುದಿತ್ತು. ಅದುಬಿಟ್ಟು, ರಾಜಕೀಯವೆಲ್ಲ ಭ್ರಷ್ಟಾಚಾರ ಎಂದರೆ, ಸಜ್ಜನ ರಾಜಕಾರಣಿಗಳೆಲ್ಲ ನಿವೃತ್ತಿ ಪಡೆಯಬೇಕಾಗುತ್ತದೆ. ರಾಜಕೀಯದಲ್ಲೂ ಭ್ರಷ್ಟಾಚಾರರಹಿತ ಆಡಳಿತ ಮಾಡುವವರು ಈಗಲೂ ಇದ್ದಾರೆ. ಅಂತಹವರನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದರೆ ಸಚಿವರಿಂದ ಇಂತಹ ಮಾತು ಬರುತ್ತಿರಲಿಲ್ಲವೇನೊ.

ರಾಜು ಬಿ. ಲಕ್ಕಂಪುರ, ಜಗಳೂರು

ಹಿಂದಿಯಲ್ಲಿ ಹಿಂದುಳಿಯುವುದೇಕೆ?

ಹಿಂದಿ ಭಾಷೆಯು ರಾಷ್ಟ್ರಭಾಷೆಯಲ್ಲ ಎಂದು ಜಿ.ನಾಗೇಂದ್ರ ಕಾವೂರು ಹೇಳಿದ್ದಾರೆ (ವಾ.ವಾ., ಡಿ. 22). ಹಿಂದಿಯು ರಾಷ್ಟ್ರಭಾಷೆ ಹೌದೋ ಅಲ್ಲವೋ ಎಂಬ ವಾದಗಳ ನಡುವೆ, ಹಿಂದಿ ಭಾಷೆಯನ್ನು ಕಲಿಯುವುದರಿಂದ ಆಗುವ ಅನುಕೂಲಗಳ ಬಗ್ಗೆ ನಾವು ಕುರುಡಾಗಿದ್ದೇವೆ. ವ್ಯಾಪಾರ, ನಿರ್ಮಾಣ ಕೆಲಸ, ಪ್ರವಾಸದಂತಹ ಕಾರ್ಯಗಳಿಗಾಗಿ ನಾವು ಅನ್ಯ ರಾಜ್ಯಕ್ಕೆ ಹೋದಾಗ ಅಥವಾ ಅವರು ನಮ್ಮ ರಾಜ್ಯಕ್ಕೆ ಬಂದಾಗ, ಹಿಂದಿ ಭಾಷೆ ಬರುವುದರಿಂದ ಆಗುವ ಅನುಕೂಲ ಅಪಾರ. ಅಂತಹ ಕಡೆಗಳಲ್ಲಿ ಸ್ಥಳೀಯ ಭಾಷೆ ಹಾಗೂ ಇಂಗ್ಲಿಷ್ ಗೊತ್ತಿಲ್ಲದವರಿಗೆ ಹಿಂದಿ ಆಪದ್ಬಾಂಧವ. ಡಿಎಂಕೆ ದಶಕಗಳಿಂದಲೂ ಹಿಂದಿ ವಿರೋಧಿ ಭಾವನೆಯನ್ನು ಹೊಂದಿದೆ. ಇದು ಒಂದು ರೀತಿ ಭಾಷೆ ಗೊತ್ತಿದ್ದರೂ ಮಾತನಾಡದ ಅಂಧಾಭಿಮಾನ ಅಥವಾ ಅಹಂ.

ರಾಷ್ಟ್ರ ರಾಜಕಾರಣದಲ್ಲಿ ದಕ್ಷಿಣ ಭಾರತೀಯರು ಹಿಂದಿಯಲ್ಲಿ ಹಿಂದುಳಿದು ಹಿನ್ನಡೆ ಕಾಣುತ್ತಿರುವುದು ಕಹಿಯಾದರೂ ಸತ್ಯ. ಹಿಂದಿ ಬಲ್ಲ ಮಾಜಿ ಪ್ರಧಾನಿ ನರಸಿಂಹ ರಾವ್ ಮತ್ತು ಮಲ್ಲಿಕಾರ್ಜುನ ಖರ್ಗೆ ಇದಕ್ಕೆ ಅಪವಾದವಾಗಿದ್ದಾರೆ ಎಂಬುದನ್ನು ಗಮನಿಸಬೇಕಾಗಿದೆ.

ಗುರು ಜಗಳೂರು, ಹರಿಹರ

ಕಡಿಮೆ ದಾಖಲಾತಿ: ಶಿಕ್ಷಕರ ಕೊರತೆ ಕಾರಣ

ರಾಜ್ಯದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗಿ ನೂರಾರು ಸರ್ಕಾರಿ ಶಾಲೆಗಳನ್ನು ಮುಚ್ಚಿರುವ ಕುರಿತ ವಿಶೇಷ ವರದಿ (ಒಳನೋಟ, ಪ್ರ.ವಾ., ಡಿ. 24) ವಸ್ತುನಿಷ್ಠವಾಗಿದೆ. ಸರ್ಕಾರಿ ಶಾಲೆಗಳ ಇಂತಹ ದುಃಸ್ಥಿತಿ ಕುರಿತು ಎಲ್ಲರೂ ಚಿಂತಿಸುವಂತಾಗಿದೆ. ದಾಖಲಾತಿ ಕಡಿಮೆಯಾಗಲು ಶಿಕ್ಷಕರ ಕೊರತೆಯೂ ಒಂದು ಕಾರಣ. 1ರಿಂದ 7ನೇ ತರಗತಿವರೆಗೆ ಇರುವ ಒಂದು ಶಾಲೆಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 50 ಇದ್ದರೆ, ಶಿಕ್ಷಣ ಇಲಾಖೆ ನಿಯಮದ ಪ್ರಕಾರ ಅಲ್ಲಿಗೆ ಹೆಚ್ಚೆಂದರೆ ಮೂವರು ಶಿಕ್ಷಕರನ್ನು ನೀಡಬಹುದು. ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆಗೆ ಹೋಲಿಸಿದರೆ ಶಿಕ್ಷಕರ ಸಂಖ್ಯೆ ಸರಿಯಿದೆಯೆಂದು ಯಾರಿಗಾದರೂ ಅನ್ನಿಸಬಹುದು. ಆದರೆ 1ರಿಂದ 7ನೇ ತರಗತಿಯವರೆಗೆ ಆ ಮೂವರು ಶಿಕ್ಷಕರು ಪ್ರತಿದಿನ ತಲಾ 11 ವಿಷಯಗಳನ್ನು ಬೋಧಿಸಬೇಕಾಗುತ್ತದೆ. ಆ ಮೂವರಲ್ಲಿ ಒಬ್ಬರು ಮುಖ್ಯ ಉಪಾಧ್ಯಾಯರಾಗಿ ಜವಾಬ್ದಾರಿ ವಹಿಸಿಕೊಳ್ಳಬೇಕು. ಪ್ರತಿದಿನ ಇಲಾಖೆ ಕೇಳುವ ಅನೇಕ ಮಾಹಿತಿಗಳನ್ನು ಸಿದ್ಧಗೊಳಿಸಿ ಕಳಿಸಬೇಕಾದ, ಆನ್‌ಲೈನ್‌ನಲ್ಲಿ ಅನೇಕ ಮಾಹಿತಿಗಳನ್ನು ಅಪ್‌ಡೇಟ್ ಮಾಡಬೇಕಾದ ಕೆಲಸಗಳೂ ಇರುತ್ತವೆ. ಅಲ್ಲದೆ ಬಿಸಿಯೂಟ ನಿರ್ವಹಿಸುವ ಕೆಲಸ ಸಹ ಇರುತ್ತದೆ. ಪಠ್ಯಪುಸ್ತಕ, ಸಮವಸ್ತ್ರಗಳನ್ನು ತಾಲ್ಲೂಕು ಕೇಂದ್ರದಿಂದ ತಂದು ಮಕ್ಕಳಿಗೆ ವಿತರಿಸುವ ಜವಾಬ್ದಾರಿ ಇರುತ್ತದೆ. ಇವಲ್ಲದೆ ಇನ್ನೂ ಅನೇಕ ಕೆಲಸಗಳನ್ನು ಈ ಶಿಕ್ಷಕರೇ ನಿಭಾಯಿಸಬೇಕು.

ಇವೆಲ್ಲಕ್ಕೂ ಪರಿಹಾರವೆಂದರೆ, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರನ್ನು ನೀಡುವ ಬದಲು ಬೋಧನಾ ವಿಷಯಗಳಿಗೆ ಅನುಗುಣವಾಗಿ ಶಿಕ್ಷಕರನ್ನು ನೀಡುವುದು ಸೂಕ್ತ. ಪ್ರತಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಒಂದು ಬೋಧಕೇತರ ವಿಶೇಷ ಹುದ್ದೆ ಸೃಷ್ಟಿಸಿ, ಅವರಿಗೆ ಕಚೇರಿ ಕೆಲಸ, ಬಿಸಿಯೂಟ ನಿರ್ವಹಣೆ, ಶೌಚಾಲಯ-ಶುಚಿತ್ವ ನಿರ್ವಹಣೆ, ಸಮುದಾಯದ ನಿರ್ವಹಣೆಯಂತಹ ಬೋಧಕೇತರ ಕೆಲಸಗಳನ್ನು ವಹಿಸಿದರೆ, ಶಿಕ್ಷಕರು ಬೋಧನೆಯಲ್ಲಿ ಮಾತ್ರ ತೊಡಗಿ ವಿದ್ಯಾರ್ಥಿಗಳಿಗೆ ಕಲಿಸುವಲ್ಲಿ ಆಸಕ್ತಿ ವಹಿಸುತ್ತಾರೆ. ಆಗ ಪೋಷಕರು ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಇಷ್ಟಪಡುತ್ತಾರೆ.

ಸುರಹೊನ್ನೆ ಅರವಿಂದ, ಸುರಹೊನ್ನೆ, ನ್ಯಾಮತಿ

ಬೆಳಕಿನ ಆಶಾಕಿರಣ ಮೂಡಲಿ

ಕಣ್ಣೀರು ಹಾಕುತ್ತಲೇ ಕುಸ್ತಿಗೆ ವಿದಾಯ ಹೇಳಿದ ಸಾಕ್ಷಿ ಮಲಿಕ್, ಅವಮಾನದ ನಡುವೆ ಸಮ್ಮಾನ ಬೇಡವೆಂದು ಪದ್ಮ ಪ್ರಶಸ್ತಿ ವಾಪಸಿಗೆ ನಿರ್ಧಾರ ಮಾಡಿದ ಕೆಲವು ಕುಸ್ತಿಪಟುಗಳು, ಮಹಿಳೆಯನ್ನು ವಿವಸ್ತ್ರಗೊಳಿಸಿ ಹಲ್ಲೆ, ಮಕ್ಕಳನ್ನು ಮಲದ ಗುಂಡಿಗೆ ಇಳಿಸಿದ ಪ್ರಕರಣ, ಸರಕು ಹಡಗಿನ ಮೇಲೆ ಡ್ರೋನ್ ದಾಳಿ, ಮಾನವ ಕಳ್ಳಸಾಗಣೆ ಶಂಕೆ, ಅಮೆರಿಕದಲ್ಲಿ ದೇವಾಲಯ ವಿರೂಪ, ರಷ್ಯಾ– ಉಕ್ರೇನ್ ಯುದ್ಧ, ಗಾಜಾ ಮೇಲೆ ಇಸ್ರೇಲ್ ದಾಳಿಯಂತಹ ವರದಿಗಳು ಮಾಧ್ಯಮಗಳಲ್ಲಿ ರಾರಾಜಿಸುತ್ತಿರುತ್ತವೆ. ಇವನ್ನೆಲ್ಲ ನೋಡುತ್ತಿದ್ದರೆ, ಕೆ.ಎಸ್.ನಿಸಾರ್ ಅಹಮದ್ ಅವರ ‘ಶಿಲುಬೆ ಏರಿದ್ದಾನೆ’ ಕವಿತೆಯ ‘...ಕಾಲರಾಯನ ಗುಜರಿ ಸೇರಿಲ್ಲ, ವೇಷ ಮರೆಸಿವೆ ಅಷ್ಟೆ, ಈ ಎಲ್ಲ ಕೇಡುಗಳು...’ ಎಂಬ ಸಾಲುಗಳು ನೆನಪಾಗುತ್ತವೆ. ಕ್ರೌರ್ಯ ಎಂಬುದು ಕಾಲಾತೀತವಾಗಿ ದೇಶಾತೀತವಾಗಿ ಎಗ್ಗಿಲ್ಲದೆ ನಡೆದು ಬರುತ್ತಿರುವ ಈ ಹೊತ್ತಿನಲ್ಲಿ, ಈ ವರ್ಷದ ಕ್ರಿಸ್ಮಸ್ ಮತ್ತು ಹೊಸ ವರ್ಷವು ಸಕಲ ಜೀವಾತ್ಮಗಳ ಉಳಿವಿಗೆ ಬೆಳಕಿನ ಆಶಾಕಿರಣವನ್ನು ಹೊತ್ತು ತರಲೆಂದು ಆಶಿಸೋಣ.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕ್ರೀಡಾಂಗಣ

ಬೆಳಗಿದ ಭಾರತ

ಇನ್ನೇನು 2023 ತೆರೆಮರೆಗೆ ಸರಿಯುತ್ತಿದೆ. ಈ ವರ್ಷದಲ್ಲಿ ಕ್ರೀಡಾಕ್ಷೇತ್ರದಲ್ಲಿ ಹಲವು ಮಹತ್ವದ ಸಾಧನೆಗಳು, ವಿವಾದಗಳು ಮತ್ತು ದಾಖಲೆಗಳು ಆಗಿವೆ. ಭಾರತದ ಕ್ರೀಡಾಪಟುಗಳು ಹತ್ತಾರು ಸಾಧನೆಗಳ ಸಿಹಿ ಉಣಬಡಿಸಿದ್ದಾರೆ. ಕೆಲವು ವೈಫಲ್ಯಗಳ ಕಹಿಯನ್ನೂ ಅನುಭವಿಸಿದ್ದಾರೆ

• ಪ್ರದೀಶ್ ಎಚ್. ಮರೋಡಿ

ಏಷ್ಯನ್ ಕ್ರೀಡಾಕೂಟದಲ್ಲಿ ಭಾರತಕ್ಕೆ ದಾಖಲೆ ಪದಕ: ಚೀನಾದ ಹಾಂಗ್‌ಝೌನಲ್ಲಿ ಸೆಪ್ಟೆಂಬರ್– ಅಕ್ಟೋಬರ್‌ನಲ್ಲಿ ನಡೆದ ಹತ್ತೊಂಬತ್ತನೇ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಕ್ರೀಡಾಪಟುಗಳು ಒಟ್ಟು 107 ಪದಕಗಳನ್ನು ಗೆದ್ದು ದಾಖಲೆ ನಿರ್ಮಿಸಿದರು. ಇದರಲ್ಲಿ 28 ಚಿನ್ನ, 38 ಬೆಳ್ಳಿ ಹಾಗೂ 41 ಕಂಚಿನ ಪದಕಗಳು ಸೇರಿವೆ. ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನವನ್ನು ಪಡೆಯಿತು. ಈ ಬಾರಿ ಭಾರತ ತಂಡದಲ್ಲಿ ದಾಖಲೆಯ 655 ಅಥ್ಲೀಟ್‌ಗಳು ಭಾಗವಹಿಸಿದ್ದರು. ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳಲ್ಲಿ 6 ಚಿನ್ನ ಸೇರಿದಂತೆ 29 ಪದಕಗಳು ದೊರಕಿವೆ.

ಫಿಫಾ ಮಹಿಳಾ ವಿಶ್ವಕಪ್– ಸ್ಪೇನ್‌ಗೆ ಕಿರೀಟ: ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನಲ್ಲಿ ಆಗಸ್ಟ್‌ನಲ್ಲಿ ನಡೆದ ಫಿಫಾ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ನಾಯಿಕೆ ಓಲ್ಗಾ ಕರ್ಮೋನಾ ನಾಯಕತ್ವದ ಸ್ಪೇನ್ ಚೊಚ್ಚಲ ಪ್ರಶಸ್ತಿ ಗೆದ್ದು ಸಂಭ್ರಮಿಸಿತು. ಫೈನಲ್‌ನಲ್ಲಿ ಇಂಗ್ಲೆಂಡ್ ತಂಡವನ್ನು 1–0ಯಿಂದ ಮಣಿಸಿ ಚಾಂಪಿಯನ್ ಆಯಿತು.

ಆಟಗಾರ್ತಿಯ ತುಟಿ ಚುಂಬನ ವಿವಾದ: ಫಿಫಾ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಪ್ರಶಸ್ತಿ ಪ್ರದಾನ ಸಮಾರಂಭದ ವೇಳೆ ಸ್ಪೇನ್ ತಂಡದ ಆಟಗಾರ್ತಿ ಜೆನಿ ಹರ್ಮೊಸೊ ತುಟಿಗೆ ಸ್ಪೇನ್ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಲೂಯಿಸ್ ರುಬೆಲ್ಸ್ ಚುಂಬಿಸಿದ್ದು, ಭಾರಿ ವಿವಾದಕ್ಕೆ ಕಾರಣವಾಯಿತು. ನಂತರ ಅವರನ್ನು ಹುದ್ದೆಯಿಂದಲೇ ಪದಚ್ಯುತಗೊಳಿಸಲಾಯಿತು.

ಬ್ಯಾಡ್ಮಿಂಟನ್ ತಾರೆಯರ ಸಾಧನೆ: ಬ್ಯಾಡ್ಮಿಂಟನ್ ಪುರುಷರ ಡಬಲ್ಸ್‌ನ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ವಿಶ್ವದ ನಂ.1 ಸ್ಥಾನವನ್ನು ತಲುಪಿದ ಭಾರತದ ಮೊದಲ ಜೋಡಿ ಎಂಬ ಹೆಗ್ಗಳಿಕೆಗೆ ಅಕ್ಟೋಬರ್‌ನಲ್ಲಿ ಪಾತ್ರವಾದರು. ಈ ಜೋಡಿಯು ಏಷ್ಯಾ ಚಾಂಪಿಯನ್‌ಷಿಪ್, ಸ್ವಿಸ್ ಓಪನ್, ಇಂಡೊನೇಷ್ಯಾ ಓಪನ್, ಕೊರಿಯಾ ಓಪನ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಜತೆಗೆ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ, ಚೀನಾ ಮಾಸ್ಟರ್ಸ್‌ನಲ್ಲಿ ರನ್ನರ್ ಅಪ್ ಸ್ಥಾನ ಪಡೆದು ಅಮೋಘ ಸಾಧನೆ ಮೆರೆಯಿತು. ಈ ಸಾಧನೆಗಾಗಿ 2023ರ ಸಾಲಿನ ಖೇಲ್ ರತ್ನ ಪ್ರಶಸ್ತಿಗೆ ಚಿರಾಗ್– ಸಾತ್ವಿಕ್ ಅವರನ್ನು ಆಯ್ಕೆ ಮಾಡಲಾಗಿದೆ.


ಸಾತ್ವಿಕ್‌ರಾಜ್ ರಣಕಿರೆಡ್ಡಿ, ಚಿರಾಗ್ ಶೆಟ್ಟಿ

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಎಚ್.ಎಸ್. ಪ್ರಣಯ್ ಆಗಸ್ಟ್‌ನಲ್ಲಿ ನಡೆದ ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದರು. ಈ ಮೂಲಕ ವಿಶ್ವದಲ್ಲಿ 6ನೇ ರ್‍ಯಾಂಕ್ ಪಡೆದು ವೈಯಕ್ತಿಕ ಶ್ರೇಷ್ಠ ಸಾಧನೆ ಮೆರೆದರು. ಮಲೇಷ್ಯಾ ಮಾಸ್ಟರ್‌ನಲ್ಲಿ ಚಾಂಪಿಯನ್ ಆಗುವ ಜತೆಗೆ ಆಸ್ಟ್ರೇಲಿಯಾ ಓಪನ್‌ನಲ್ಲಿ ರನ್ನರ್ ಅಪ್ ಸ್ಥಾನ ಪಡೆದರು. ಏಷ್ಯನ್ ಕ್ರೀಡಾಕೂಟದಲ್ಲೂ ಐತಿಹಾಸಿಕ ಕಂಚು ಗೆದ್ದರು. ಆದರೆ, ಮಹಿಳೆಯರ ಬ್ಯಾಡ್ಮಿಂಟನ್‌ನಲ್ಲಿ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಈ ವರ್ಷ ನಿರಾಸೆ ಅನುಭವಿಸಿದರು.


ಎಚ್.ಎಸ್. ಪ್ರಣಯ್

ಚೆಸ್ ವಿಶ್ವಕಪ್‌ನಲ್ಲಿ ರನ್ನರ್‌ಅಪ್ ಆದ ಪ್ರಜ್ಞಾನಂದ: ಅಜರ್‌ಬೈಜಾನ್‌ನ ಬಾಕುವಿನಲ್ಲಿ ಆಗಸ್ಟ್‌ನಲ್ಲಿ ನಡೆದ ಫಿಡೆ ಚೆಸ್ ವಿಶ್ವಕಪ್‌ನಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ರನ್ನರ್ ಅಪ್ ಆಗಿ ಇತಿಹಾಸ ನಿರ್ಮಿಸಿದರು. ರೋಚಕ ಪೈಪೋಟಿಗೆ ಸಾಕ್ಷಿಯಾದ ಫೈನಲ್ ಪಂದ್ಯಗಳಲ್ಲಿ ವಿಶ್ವದ ನಂಬರ್ 1 ಚೆಸ್ ತಾರೆ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಎಲ್ಲಾ ರೀತಿಯಲ್ಲೂ ಪೈಪೋಟಿ ನೀಡುವಲ್ಲಿ 18 ವರ್ಷದ ಪ್ರಜ್ಞಾನಂದ ಯಶಸ್ವಿಯಾಗಿದ್ದರು. ಚೆನ್ನೈನ ಆಟಗಾರ ಫೈನಲ್‌ನಲ್ಲಿ ಸೋತರೂ ಕೋಟ್ಯಂತರ ಅಭಿಮಾನಿಗಳ ಹೃದಯ ಗೆದ್ದರು.


ಅಕ್ಕ–ತಮ್ಮ ಗ್ರ್ಯಾಂಡ್‌ಮಾಸ್ಟರ್: ಆರ್. ಪ್ರಜ್ಞಾನಂದ ಅವರ ಸಹೋದರಿ ಆರ್.ವೈಶಾಲಿ ಅವರು ಡಿಸೆಂಬರ್‌ನಲ್ಲಿ 'ಗ್ರ್ಯಾಂಡ್ ಮಾಸ್ಟರ್' ಪಟ್ಟ ಪಡೆದ ಭಾರತದ ಮೂರನೇ ಆಟಗಾರ್ತಿ ಎನಿಸಿದರು. ಮತ್ತು, ಗ್ರ್ಯಾಂಡ್ ಮಾಸ್ಟರ್ ಆದ ವಿಶ್ವದ ಮೊದಲ ಸೋದರ–ಸೋದರಿ ಜೋಡಿ ಎನಿಸಿದರು. ವೈಶಾಲಿ, ಭಾರತದ 84ನೇ ಗ್ರ್ಯಾಂಡ್‌ಮಾಸ್ಟರ್ ಆಗಿದ್ದಾರೆ.

ಗುಕೇಶ್ ಸಾಧನೆ: ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರ 37 ವರ್ಷಗಳ ದೀರ್ಘ ಕಾಲದ ಆಧಿಪತ್ಯ ಅಂತ್ಯಗೊಳಿಸಿ ಹದಿಹರೆಯದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಸೆಪ್ಟೆಂಬರ್‌ನಲ್ಲಿ ಭಾರತದ ಅಗ್ರಮಾನ್ಯ ಚೆಸ್ ಆಟಗಾರ ಎನಿಸಿದರು. 1986ರ ಜುಲೈ 1ರಿಂದ ಆನಂದ್ ಅವರು ದೇಶದ ನಂಬರ್ ವನ್ ಆಟಗಾರರಾಗಿದ್ದರು. ಚೆನ್ನೈನ ಗುಕೇಶ್ ಅವರು ಬಾಕುವಿನಲ್ಲಿ (ಅಜರ್‌ಬೈಜಾನ್) ನಡೆದ ವಿಶ್ವಕಪ್ ಚೆಸ್ ಟೂರ್ನಿಯ ವೇಳೆ ರೇಟಿಂಗ್‌ನಲ್ಲಿ ಆನಂದ್ ಅವರನ್ನು ಹಿಂದೆ ಹಾಕಿದ್ದರು.


ಆರ್.ವೈಶಾಲಿ, ಆರ್.ಪ್ರಜ್ಞಾನಂದ

2023 ಮರೆಯುವ ಮುನ್ನ...

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚೋಪ್ರಾ ಚಿನ್ನದ ಸಾಧನೆ: ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಚೋಪ್ರಾ ಅವರು ಬುಡಾಪೆಸ್ಟ್‌ನಲ್ಲಿ ಆಗಸ್ಟ್‌ನಲ್ಲಿ ನಡೆದ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆಲ್ಲುವ ಮೂಲಕ ಭಾರತದ ಕ್ರೀಡಾ ಇತಿಹಾಸದಲ್ಲಿ ಹೊಸ ಚರಿತ್ರೆ ಸೃಷ್ಟಿಸಿದರು. ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ದೊರೆತ ಮೊಟ್ಟಮೊದಲ ಚಿನ್ನ ಇದಾಗಿದೆ. ಅವರು ವಿಶ್ವ ಚಾಂಪಿಯನ್‌ಷಿಪ್ ಹೊರತುಪಡಿಸಿ ಇತರ ಎಲ್ಲ ಪ್ರಮುಖ ಕೂಟಗಳಲ್ಲಿ ಚಿನ್ನ ಗೆದ್ದಿದ್ದರು. ಪ್ರಸಕ್ತ ವರ್ಷ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ, ಡೈಮಂಡ್ ಲೀಗ್ ಫೈನಲ್‌ನಲ್ಲಿ ಬೆಳ್ಳಿಯ ಸಾಧನೆ ಮೆರೆದಿದ್ದಾರೆ.


ನೀರಜ್ ಚೋಪ್ರಾ

ಗಾಯದ ಕಾರಣ ಕೆಲ ತಿಂಗಳು ವಿಶ್ರಾಂತಿ ಪಡೆದು ಮರಳಿದ್ದ ಸಿಂಧು, ಸ್ಪೇನ್ ಮಾಸ್ಟರ್‌ನಲ್ಲಿ ಫೈನಲ್ ತಲುಪಿದ್ದೇ ವರ್ಷದ ಶ್ರೇಷ್ಠ ಸಾಧನೆಯಾಗಿದೆ.

ನೊವಾಕ್ ಜೊಕೊವಿಚ್‌ಗೆ 24ನೇ ಗ್ರ್ಯಾನ್‌ಸ್ಲಾಮ್: ಸರ್ಬಿಯಾದ 36 ವರ್ಷದ ಆಟಗಾರ ನೊವಾಕ್ ಜೊಕೊವಿಚ್ ಸೆಪ್ಟೆಂಬರ್‌ನಲ್ಲಿ ಅಮೆರಿಕಾ ಓಪನ್ ಕಿರೀಟ ಮುಡಿಗೇರಿಸಿಕೊಳ್ಳುವ ಮೂಲಕ 24ನೇ ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದು ದಾಖಲೆ ನಿರ್ಮಿಸಿದರು. ಈ ವರ್ಷ ಆಸ್ಟ್ರೇಲಿಯನ್ ಮತ್ತು ಫ್ರೆಂಚ್ ಓಪನ್ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡಿದ್ದ ಜೊಕೊ ಅವರಿಗೆ ಕೈತಪ್ಪಿದ್ದು ವಿಂಬಲ್ಡನ್ ಪ್ರಶಸ್ತಿ ಮಾತ್ರ. ಅಲ್ಲೂ ಫೈನಲ್ ತಲುಪಿದರೂ ಕಾರ್ಲೋಸ್ ಅಲ್ಕರಾಜ್ ಎದುರು ಸೋಲನುಭವಿಸಿದ್ದರು.


ನೊವಾಕ್ ಜೊಕೊವಿಚ್

ಹಾಕಿ ಸಾಧನೆ: ಭಾರತ ಹಾಕಿ ತಂಡ ಚೆನ್ನೈನ ಮೇಯರ್ ರಾಧಾಕೃಷ್ಣನ್ ಕ್ರೀಡಾಂಗಣದಲ್ಲಿ ಆಗಸ್ಟ್ 12ರಂದು ನಡೆದ ಫೈನಲ್‌ನಲ್ಲಿ ಮಲೇಷ್ಯಾ ತಂಡವನ್ನು 4–3 ಗೋಲುಗಳಿಂದ ಸೋಲಿಸಿ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಕಿರೀಟ ಧರಿಸಿಕೊಂಡಿತು. ಭಾರತ ನಾಲ್ಕನೇ ಬಾರಿ ಚಾಂಪಿಯನ್ ಆಯಿತು. ವಿರಾಮದ ವೇಳೆ ಭಾರತ 1–3 ರಿಂದ ಹಿಂದಿತ್ತು. ಏಷ್ಯನ್ ಗೇಮ್ಸ್‌ನಲ್ಲೂ ಅಮೋಘ ಸಾಧನೆಯೊಡನೆ ಚಿನ್ನದ ಪದಕ ಗೆದ್ದುಕೊಂಡಿತು.

ಆದರೆ ವರ್ಷದ ಆರಂಭದಲ್ಲಿ ಒಡಿಶಾದ ರೂರ್ಕೆಲಾದಲ್ಲಿ (ಬಿರ್ಸಾ ಮುಂಡಾ ಕ್ರೀಡಾಂಗಣ) ನಡೆದ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಭಾರತ ಉತ್ತಮ ಸಾಧನೆ ತೋರಲು ವಿಫಲವಾಗಿ 9ನೇ ಸ್ಥಾನ ಪಡೆಯಿತು. ಜರ್ಮನಿ, ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ತಂಡಗಳು ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದವು. ❖

ಪ್ಯಾರಾ ಏಷ್ಯನ್ ಗೇಮ್ಸ್ ಸಾಧನೆ: ಚೀನಾದ ಹಾಂಗ್‌ಝೌನಲ್ಲಿ ನಡೆದ ಪ್ಯಾರಾ ಏಷ್ಯನ್ ಕೂಟದಲ್ಲೂ ಭಾರತದ ಕ್ರೀಡಾಪಟುಗಳು ದಾಖಲೆಯ 111 ಪದಕಗಳನ್ನು ಗೆದ್ದುಕೊಂಡರು. ಪದಕ ಪಟ್ಟಿಯಲ್ಲಿ 5ನೇಸ್ಥಾನ ಪಡೆದಿರುವುದು ಪ್ಯಾರಾ ಏಷ್ಯನ್ ಕೂಟದಲ್ಲಿ ಭಾರತದ ಅತ್ಯುತ್ತಮ ಸಾಧನೆ ಎನಿಸಿಕೊಂಡಿತು. ಬ್ಯಾಡ್ಮಿಂಟನ್‌ನಲ್ಲಿ 4 ಚಿನ್ನ ಒಳಗೊಂಡಂತೆ 21 ಪದಕಗಳನ್ನು ಗೆದ್ದಿದೆ. ಚೆಸ್ ಮತ್ತು ಆರ್ಚರಿಯಲ್ಲಿ ಕ್ರಮವಾಗಿ ಎಂಟು ಹಾಗೂ ಏಳು ಪದಕಗಳನ್ನು ಭಾರತ ಜಯಿಸಿದೆ. ಜಾವೆಲಿನ್ ಥ್ರೋನಲ್ಲಿ ಸುಮಿತ್ ಅಂತಿಲ್ ವಿಶ್ವದಾಖಲೆ ನಿರ್ಮಿಸಿದರು.



ಸುಮಿತ್ ಅಂತಿಲ್

ಕ್ರಿಕೆಟ್ ಅಂಗಳದ ಸಿಹಿ–ಕಹಿ


ವಿರಾಟ್ ಕೊಹ್ಲಿ

• ಗಿರೀಶ ದೊಡ್ಡಮನಿ

2023ರ ಆರಂಭದಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಆಯೋಜನೆ ಮತ್ತು ಆತಿಥೇಯ ಭಾರತ ತಂಡದ ಪೂರ್ವಸಿದ್ಧತೆಗಳ ಕುರಿತ ಮಾತುಕತೆಗಳೊಂದಿಗೆ ಆಗಿತ್ತು. ನವೆಂಬರ್ 19ರವರೆಗೂ ಭಾರತದ ರೋಹಿತ್ ಶರ್ಮಾ ಬಳಗವು ಪ್ರಶಸ್ತಿ ಗೆಲುವಿನ ನೆಚ್ಚಿನ ತಂಡವೂ ಆಗಿತ್ತು. ಆದರೆ, ಕಿರೀಟ ಆಸ್ಟ್ರೇಲಿಯಾ ತಂಡದ ಮುಡಿಗೇರಿತು. ಭಾರತದ ಕೋಟ್ಯಂತರ ಕ್ರಿಕೆಟ್ ಅಭಿಮಾನಿಗಳ ಕನಸು ಅಹಮದಾಬಾದಿನ ಮೊಟೇರಾದಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನುಚ್ಚುನೂರಾಯಿತು.

ಅಕ್ಟೋಬರ್ 5ರಂದು ಆರಂಭವಾದ ಟೂರ್ನಿಯ ಲೀಗ್ ಹಂತದ ಎಂಟು, ಕ್ವಾರ್ಟರ್‌ಫೈನಲ್ ಮತ್ತು ಸೆಮಿಫೈನಲ್ ಸೇರಿದಂತೆ ಎಲ್ಲ ಹತ್ತು ಪಂದ್ಯಗಳನ್ನು ರೋಹಿತ್ ಬಳಗ ಜಯಿಸಿತ್ತು. ಆದರೆ, ಫೈನಲ್‌ನಲ್ಲಿ ಎಡವಿತು. ಇದರೊಂದಿಗೆ ಕಳೆದ ಹತ್ತು ವರ್ಷಗಳಿಂದ ಭಾರತ ತಂಡವು ಅನುಭವಿಸುತ್ತಿರುವ ಐಸಿಸಿ ಟ್ರೋಫಿಗಳ ಬರ ಮುಂದುವರಿಯಿತು. ಈ ಸೋಲು ತಂದ ಆಘಾತ ತಂಡವು ನಿರಾಶೆಯ ನೀರವ ಮೌನದ ಆಚೆಯೂ ಕೆಲವು ಅಭೂತಪೂರ್ವ ಸಾಧನೆಗಳು ಮನಸ್ಸಿಗೆ ಮುದ ನೀಡಿದವು. ರೋಹಿತ್ ನಾಯಕತ್ವ, ರಾಹುಲ್ ದ್ರಾವಿಡ್ ಅವರು ಮುಖ್ಯ ಕೋಚ್ ಸ್ಥಾನವನ್ನು ಯಶಸ್ವಿಯಾಗಿ ನಿರ್ವಹಿಸಿದ ರೀತಿ, ಗಾಯದಿಂದ ಚೇತರಿಸಿಕೊಂಡ ಕೆಲವೇ ದಿನಗಳ ನಂತರ ಕೆ.ಎಲ್. ರಾಹುಲ್ ವಿಕೆಟ್‌ಕೀಪಿಂಗ್ ಮತ್ತು ಬ್ಯಾಟಿಂಗ್‌ನಲ್ಲಿ ಮಿಂಚಿದ್ದು ಮೆಚ್ಚುಗೆಗೆ ಪಾತ್ರವಾದವು. 2019ರ ಚಾಂಪಿಯನ್ ಇಂಗ್ಲೆಂಡ್ ನಾಕೌಟ್ ಹಂತಕ್ಕೆ ಅರ್ಹತೆಯನ್ನೂ ಗಳಿಸಲಿಲ್ಲ.

ವಿರಾಟ್ ಶತಕಗಳ ಅರ್ಧಶತಕ: ಭಾರತ ತಂಡದ 'ರನ್ ಯಂತ್ರ' ವಿರಾಟ್ ಕೊಹ್ಲಿಗೆ ದಾಖಲೆಗಳ ವರ್ಷ ಇದು. ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ 'ಶತಕಗಳ ಶತಕ' ದಾಖಲೆಯನ್ನು ಮೀರಿ ನಿಲ್ಲುವ ಭರವಸೆಯನ್ನು ವಿರಾಟ್ ಮತ್ತಷ್ಟು ಗಟ್ಟಿಗೊಳಿಸಿದರು.

ಅವರು ಏಕದಿನ ಕ್ರಿಕೆಟ್ ಮಾದರಿಯಲ್ಲಿ 50ನೇ ಶತಕ ಗಳಿಸುವ ಮೂಲಕ ವಿಶ್ವದಾಖಲೆ ಬರೆದರು. ಸಚಿನ್ (49) ದಾಖಲೆಯನ್ನು ಮೀರಿ ನಿಂತರು. ಮುಂಬೈನಲ್ಲಿ ನಡೆದ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ಎದುರು ವಿರಾಟ್ ಆ ಶತಕ ಹೊಡೆದರು. ಇದಲ್ಲದೇ ಟೂರ್ನಿಯಲ್ಲಿ ಅವರು ಅತಿ ಹೆಚ್ಚು ರನ್ ಗಳಿಸಿದ (765) ಬ್ಯಾಟರ್ ಕೂಡ ಆದರು. ಅದರಲ್ಲಿ ಒಟ್ಟು ಮೂರು ಶತಕ, ಆರು ಅರ್ಧಶತಕಗಳು ಸೇರಿವೆ. 35 ವರ್ಷದ ವಿರಾಟ್ ಏಕದಿನ ಕ್ರಿಕೆಟ್‌ನಲ್ಲಿ 13 ಸಾವಿರ ರನ್‌ಗಳ ಗಡಿ ದಾಟಿದರು. ಅತಿ ವೇಗವಾಗಿ ಈ ಸಾಧನೆ ಮಾಡಿದ ಆಟಗಾರನಾದರು.



ಶಮಿ ಮ್ಯಾಜಿಕ್: ಈ ಟೂರ್ನಿಯಲ್ಲಿ ಅತ್ಯಂತ ಹೆಚ್ಚು ಗಮನ ಸೆಳೆದ ಬೌಲರ್ ಭಾರತದ ಮೊಹಮ್ಮದ್ ಶಮಿ. ಒಟ್ಟು ಏಳು ಪಂದ್ಯಗಳನ್ನು ಆಡಿದ ಅವರು 24 ವಿಕೆಟ್‌ಗಳನ್ನು ಗಳಿಸಿದರು. ಟೂರ್ನಿಯಲ್ಲಿ ಅವರು ಮೊದಲ ನಾಲ್ಕು ಪಂದ್ಯಗಳಲ್ಲಿ ಆಡಿರಲಿಲ್ಲ. ಹಾರ್ದಿಕ್ ಪಾಂಡ್ಯ ಗಾಯಗೊಂಡು ಹೊರಬಿದ್ದ ನಂತರ ಅವರಿಗೆ ಸ್ಥಾನ ಲಭಿಸಿತ್ತು. ಶಮಿ ಮೂರು ಬಾರಿ 5 ವಿಕೆಟ್ ಗೊಂಚಲು ಗಳಿಸಿದರು.

ಮ್ಯಾಕ್ಸ್‌ವೆಲ್ ದಾಖಲೆ: ಈ ಬಾರಿಯ ವಿಶ್ವಕಪ್‌ನಲ್ಲಿ ನೋಡುಗರ ಮನದಲ್ಲಿ ಅಚ್ಚಳಿಯದೇ ಉಳಿದಿದ್ದು ಆಸ್ಟ್ರೇಲಿಯಾದ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ದ್ವಿಶತಕದ ಇನಿಂಗ್ಸ್.

ಅಫ್ಗಾನಿಸ್ತಾನದ ಎದುರಿನ ಲೀಗ್ ಪಂದ್ಯದಲ್ಲಿ ಸೋಲಿನ ದವಡೆಯಲ್ಲಿ ಸಿಲುಕಿದ್ದ ಆಸ್ಟ್ರೇಲಿಯಾ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದ್ದರು ಮ್ಯಾಕ್ಸ್‌ವೆಲ್. ಸ್ನಾಯುಸೆಳೆತ ಮತ್ತು ಬೆನ್ನುನೋವಿನಲ್ಲಿಯೂ ಏಕಾಂಗಿಯಾಗಿ ಹೋರಾಡಿ ಬ್ಯಾಟಿಂಗ್ ಮೂಲಕ ದ್ವಿಶತಕ ಗಳಿಸಿದ್ದರು. ಈ ಟೂರ್ನಿಯಲ್ಲಿ ಅಫ್ಗಾನಿಸ್ತಾನ ತಂಡವು ಇಂಗ್ಲೆಂಡ್, ಪಾಕಿಸ್ತಾನ ಮತ್ತು ಶ್ರೀಲಂಕಾದಂತಹ ಅನುಭವಿ ತಂಡಗಳಿಗೆ ಸೋಲಿನ ರುಚಿ ತೋರಿಸಿತು. ಒಂದೊಮ್ಮೆ ಆಸ್ಟ್ರೇಲಿಯಾ ಎದುರು ಗೆದ್ದಿದ್ದರೆ ಅಫ್ಗನ್ ತಂಡಕ್ಕೆ ಸೆಮಿಫೈನಲ್ ಹಾದಿ ಸುಗಮವಾಗುತ್ತಿತ್ತು.

ಮ್ಯಾಥ್ಯೂಸ್ 'ಟೈಮ್ಡ್ ಔಟ್': ಕ್ರಿಕೆಟ್ ಇತಿಹಾಸದಲ್ಲಿ ಮೊಟ್ಟಮೊದಲ ಟೈಮ್ಡ್ ಔಟ್ ವಿಕೆಟ್ ದಾಖಲಾಗಿದ್ದು ಈ ವಿಶ್ವಕಪ್‌ನಲ್ಲಿ. ಬಾಂಗ್ಲಾದೇಶ ಎದುರಿನ ಪಂದ್ಯದಲ್ಲಿ ಶ್ರೀಲಂಕಾದ ಏಂಜೆಲೊ ಮ್ಯಾಥ್ಯೂಸ್ ಅವರು ಕ್ರೀಸ್‌ಗೆ ಬಂದು ಬ್ಯಾಟಿಂಗ್ ಆರಂಭಿಸಲು ವಿಳಂಬ ಮಾಡಿದರು. ಇದನ್ನು ಬಾಂಗ್ಲಾದ ಆಟಗಾರ ಶಕೀಬ್ ಮಾಡಿದ ಅಪೀಲ್ ಮಾನ್ಯ ಮಾಡಿದ ಅಂಪೈರ್‌ಗಳು ಔಟ್ ನೀಡಿದರು. ಈ ಪ್ರಕರಣ ಬಹಳಷ್ಟು ಚರ್ಚೆಗೆ ಗ್ರಾಸವಾಯಿತು.

***

ವಿಶ್ವಕಪ್ ಟೂರ್ನಿಗೆ ಮುನ್ನ ಭಾರತ ತಂಡವು ಏಷ್ಯಾ ಕಪ್ ಜಯಿಸಿದ್ದು ಈ ವರ್ಷದ ಪ್ರಮುಖ ಸಾಧನೆ. ದೇಶದ ಯುವ ಕ್ರಿಕೆಟ್ ತಂಡವು ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಜಯಿಸಿತು. ಆದರೆ ಭಾರತ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಮತ್ತೆ ಮುಗ್ಗರಿಸಿತು. ಐಪಿಎಲ್‌ನಲ್ಲಿ ಈಬಾರಿಯೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಪ್ರಶಸ್ತಿ ಗೆಲ್ಲಲಿಲ್ಲ. ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ಚಾಂಪಿಯನ್ ಆಯಿತು.


ಮಹೇಂದ್ರಸಿಂಗ್ ಧೋನಿ

ಖ್ಯಾತನಾಮರ ನಿವೃತ್ತಿ

ಇಂಗ್ಲೆಂಡ್ ತಂಡದ ವೇಗಿ ಸ್ಟುವರ್ಟ್ ಬ್ರಾಡ್, ದಕ್ಷಿಣ ಆಫ್ರಿಕಾದ ಹಾಶೀಂ ಆಮ್ಲಾ, ಡ್ವೇನ್ ಪ್ರಿಟೋರಿಯಸ್, ಆಸ್ಟ್ರೇಲಿಯಾದ ಆ್ಯರನ್ ಫಿಂಚ್, ಭಾರತದ ಮುರಳಿ ವಿಜಯ್, ಅಂಬಟಿ ರಾಯುಡು, ಮನೋಜ್ ತಿವಾರಿ ಅವರು ಕ್ರಿಕೆಟ್‌ಗೆ ವಿದಾಯ ಹೇಳಿದರು.

ವನಿತೆಯರ ಚಾರಿತ್ರಿಕ ಸಾಧನೆ

ಮಹಿಳೆಯರ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ತಂಡವು ಐತಿಹಾಸಿಕ ಸಾಧನೆ ಮಾಡಿತು. ತವರಿನಲ್ಲಿ ನಡೆದ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ಗಳಲ್ಲಿ ಜಯಿಸಿತು. ಇಂಗ್ಲೆಂಡ್ ಎದುರು ಅತ್ಯಂತ ದೊಡ್ಡ ಅಂತರದ ಗೆಲುವಿನ ದಾಖಲೆ ಬರೆಯಿತು. ಆಸ್ಟ್ರೇಲಿಯಾ ಎದುರು ಚೊಚ್ಚಲ ಜಯ ಸಾಧಿಸಿತು. ಮಹಿಳಾ ತಂಡವು ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿತು.

ಅಗಲಿದ ಬಿಷನ್ ಸಿಂಗ್ ಬೇಡಿ



ವಿಶ್ವದ ಶ್ರೇಷ್ಠ ಸ್ಪಿನ್ನರ್‌ಗಳಲ್ಲಿ ಒಬ್ಬರಾದ ಬಿಷನ್ ಸಿಂಗ್ ಬೇಡಿ ನಿಧನರಾದರು. ಬೌಲರ್, ನಾಯಕ ಹಾಗೂ ಕೋಚ್ ಆಗಿ ಭಾರತದ ಕ್ರಿಕೆಟ್‌ಗೆ ಅವರು ನೀಡಿದ್ದ ಕಾಣಿಕೆಗಳು ಅವಿಸ್ಮರಣೀಯವಾದವು. ತಮ್ಮ ನೇರ, ನಿಷ್ಠುರ ನುಡಿಗಳಿಂದ ಬಿಸಿಸಿಐಗೆ ಚಾಟಿ ಬೀಸುತ್ತಿದ್ದ ಅವರು ಕ್ರಿಕೆಟ್ ಮತ್ತು ಕ್ರಿಕೆಟಿಗರ ಹಿತಕ್ಕಾಗಿ ಸದಾ ಹೋರಾಡಿದ್ದರು. ಭಾರತ ತಂಡವನ್ನು ಪ್ರತಿನಿಧಿಸಿದ್ದ ಸಲೀಂ ದುರಾನಿ ಕೂಡ ಇದೇ ವರ್ಷ ಅಗಲಿದರು.

ಜಿಂಬಾಬ್ವೆಯ ಆಲ್‌ರೌಂಡರ್ ಹೀತ್ ಸ್ಟ್ರೀಕ್ (49 ವರ್ಷ) ಮತ್ತು ಪಾಕಿಸ್ತಾನ ಇಜಾಜ್ ಭಟ್ ಕೂಡ ನಿಧನರಾದರು.

2024ರ ಐಪಿಎಲ್‌ಗಾಗಿ ನಡೆದ ಆಟಗಾರರ ಮಿನಿ ಹರಾಜು ಪ್ರಕ್ರಿಯೆಯಲ್ಲಿ ಆಸ್ಟ್ರೇಲಿಯಾದ ವೇಗಿ ಮಿಚೆಲ್ ಸ್ಟಾರ್ಕ್ (₹24.75 ಕೋಟಿ) ಟೂರ್ನಿಯ ಇತಿಹಾಸದಲ್ಲಿಯೇ ಅತಿ ಹೆಚ್ಚು ಮೌಲ್ಯ ಪಡೆದ ದಾಖಲೆ ಬರೆದರು. ಪ್ಯಾಟ್ ಕಮಿನ್ಸ್ ₹ 20.50 ಕೋಟಿ ಗಳಿಸಿದರು.

ಇದಕ್ಕೂ ಮುನ್ನ ನಡೆದ ಟ್ರೇಡ್‌ನಲ್ಲಿ ಗುಜರಾತ್ ಟೈಟನ್ಸ್ ನಾಯಕ ಹಾರ್ದಿಕ್ ಪಾಂಡ್ಯ ಮುಂಬೈ ಇಂಡಿಯನ್ಸ್‌ಗೆ ಸೇರ್ಪಡೆಯಾದರು. ರೋಹಿತ್ ಶರ್ಮಾ ಅವರಿಗೆ ನಾಯಕತ್ವದಿಂದ ವಿಶ್ರಾಂತಿ ನೀಡಿದ ಮುಂಬೈ ತಂಡವು ಪಾಂಡ್ಯಗೆ ಪಟ್ಟ ಕಟ್ಟಿತು. ಗುಜರಾತ್ ತಂಡಕ್ಕೆ ಶುಭಮನ್ ಗಿಲ್ ನಾಯಕರಾಗಿದ್ದಾರೆ. ದೇಶಿ ಕ್ರಿಕೆಟ್‌ನಲ್ಲಿ ಕರ್ನಾಟಕ ತಂಡವು ರಣಜಿ, ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಮತ್ತು ವಿಜಯ್ ಹಜಾರೆ ಟೂರ್ನಿಗಳಲ್ಲಿ ಪ್ರಶಸ್ತಿ ಗೆಲ್ಲಲಿಲ್ಲ. ❖


ಐಸಿಸಿ ಪುರುಷರ ವಿಶ್ವಕಪ್ ಗೆದ್ದ ಆಸ್ಟ್ರೇಲಿಯಾ ತಂಡ

ಕುಸ್ತಿಪಟುಗಳ ಪ್ರತಿಭಟನೆ, ಡಬ್ಲ್ಯುಎಫ್‌ಐ ವಿವಾದ

ಮಹಿಳಾ ಕುಸ್ತಿಪಟುಗಳ ಮೇಲೆ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆಂಬ ಆರೋಪ, ಪ್ರತಿಭಟನೆ, ಡಬ್ಲ್ಯುಎಫ್‌ಐ ಚುನಾವಣೆ ವರ್ಷವಿಡೀ ಸದ್ದು ಮಾಡಿದವು. ಪ್ರತಿಭಟನೆನಿರತ ಕುಸ್ತಿಪಟುಗಳು ಹೊಸ ಸಂಸತ್ ಭವನ ಉದ್ಘಾಟನೆಯಂದು ಒಳನುಗ್ಗಲು ನಡೆಸಿದ ಯತ್ನ ಭಾರೀ ಸುದ್ದಿಯಾಯಿತು.

ಈ ಮಧ್ಯೆ, ಭಾರತ ಕುಸ್ತಿ ಫೆಡರೇಷನ್ ಚುನಾವಣೆ ಹಲವು ಬಾರಿ ಮುಂದೂಡಲಾಯಿತು. ಹೀಗಾಗಿ, ನಿಗದಿಪಡಿಸಿದ ಗಡುವಿನೊಂದಿಗೆ ಚುನಾವಣೆ ನಡೆಸಲು ವಿಫಲವಾದ ಕಾರಣ ಜಾಗತಿಕ ಕುಸ್ತಿ ಸಂಸ್ಥೆಯು ಡಬ್ಲ್ಯುಎಫ್‌ಐಯನ್ನು ಅಮಾನತು ಮಾಡಿತು. ಡಿಸೆಂಬರ್‌ನಲ್ಲಿ ಕೊನೆಗೂ ಚುನಾವಣೆ ನಡೆದು, ಬ್ರಿಜ್ ಭೂಷಣ್ ಆಪ್ತ ಸಂಜಯ್ ಸಿಂಗ್ ಡಬ್ಲ್ಯುಎಫ್‌ಐ ನೂತನ ಅಧ್ಯಕ್ಷರಾಗಿ ಆಯ್ಕೆಯಾದರು. ಅವರ ಆಯ್ಕೆಯನ್ನು ವಿರೋಧಿಸಿ, ಹೋರಾಟದ ಮುಂಚೂಣಿಯಲ್ಲಿದ್ದ ರಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಕುಸ್ತಿಪಟು ಸಾಕ್ಷಿ ಮಲಿಕ್ ಡಿಸೆಂಬರ್ 21ರಂದು ಕುಸ್ತಿ ಕ್ರೀಡೆಗೆ ಕಣ್ಣೀರ ವಿದಾಯ ಘೋಷಿಸಿದರು. ಕುಸ್ತಿಪಟು ಬಜರಂಗ್ ಪೂನಿಯಾ 'ಪದ್ಮಶ್ರೀ' ಪ್ರಶಸ್ತಿಯನ್ನು ಸರ್ಕಾರಕ್ಕೆ ಹಿಂತಿರುಗಿಸಿದರು. ನಿಯಮ ಉಲ್ಲಂಘಿಸಿದ ಕಾರಣಕ್ಕೆ ಡಬ್ಲ್ಯುಎಫ್‌ಐ ಆಡಳಿತ ಸಮಿತಿಯನ್ನು ಕ್ರೀಡಾ ಸಚಿವಾಲಯ ಅಮಾನತು ಮಾಡಿತು.


ಡಬ್ಲ್ಯುಎಫ್‌ಐ ಅಧ್ಯಕ್ಷರಾಗಿ ಆಯ್ಕೆಯಾದ ಬ್ರಿಜ್‌ಭೂಷಣ್ ಆಪ್ತ ಸಂಜಯ್ ಸಿಂಗ್ (ಬಲ)


ಸಾಕ್ಷಿ ಮಲಿಕ್

ಮಾಹಿತಿ: ಪಿಟಿಐ, ಎಎಫ್‌ಪಿ ಮತ್ತು ವಿವಿಧ ವೆಬ್‌ಸೈಟ್, ಚಿತ್ರಗಳು: ಪಿಟಿಐ, ಎಎಫ್‌ಪಿ ಮತ್ತು ಪ್ರಜಾವಾಣಿ ಸಂಗ್ರಹ

ಗುಂಡಣ್ಣ



ಸದಾ ಇರಲಿ ಸಹಾನುಭೂತಿ


ನುಡಿ ಬೆಳಗು

ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಒಮ್ಮೆ ಒಬ್ಬ ಪುಟ್ಟ ಬಾಲಕ ನಾಯಿಮರಿಯನ್ನು ಕೊಂಡುಕೊಳ್ಳಬೇಕೆಂದು ಸಾಕು ಪ್ರಾಣಿಗಳನ್ನು ಮಾರುವ ಅಂಗಡಿಗೆ ಹೋದ. ಅವನ ಜೇಬಿನಲ್ಲಿ ಐದು ಸಾವಿರ ರೂಪಾಯಿಗಳಿದ್ದವು. ಎಲ್ಲಾ ಉತ್ತಮ ತಳಿಯ ನಾಯಿ ಮರಿಗಳಿದ್ದ ಆ ಅಂಗಡಿಯಲ್ಲಿ ಒಂದು ಮರಿಯ ಕನಿಷ್ಠ ಬೆಲೆಯೇ ಹತ್ತು ಸಾವಿರವಾಗಿತ್ತು. ಅಷ್ಟು ಹಣವಿರದ ಬಾಲಕ, ನಿರಾಶೆ ಕಂಗಳಿಂದ ಅಂಗಡಿಯಿಂದ ಹೊರ ಹೊರಟ. ಹಾಗೆ ಹೋಗುವಾಗ ಒಂದು ಕಾಲು ಕುಂಟಾಗಿದ್ದ ಮುದ್ದಾದ ನಾಯಿ ಮರಿ ಕಣ್ಣಿಗೆ ಬಿತ್ತು.

ತಕ್ಷಣ ಬಾಲಕ ಅಂಗಡಿ ಮಾಲೀಕನ ಬಳಿ ಹೋಗಿ 'ಅಂಕಲ್, ದಯವಿಟ್ಟು ನನಗೆ ಈ ನಾಯಿ ಮರಿಯನ್ನು ಕೊಡುತ್ತೀರಾ? ನನ್ನ ಬಳಿ ಐದು ಸಾವಿರ ರೂಪಾಯಿಗಳಿವೆ. ಅದನ್ನೀಗ ಕೊಡುತ್ತೇನೆ. ಬಾಕಿ ಹಣವನ್ನು ಕಂತಿನಲ್ಲಿ ತೀರಿಸುತ್ತೇನೆ' ಎಂದ. ಆಗ ಅಂಗಡಿ ಮಾಲೀಕ, 'ಪುಟ್ಟಾ, ಈ ಮರಿಯ ಕಾಲು ಕುಂಟಾಗಿದೆ. ಅದನ್ನು ಸಾಕೋದು ನಿನಗೆ ಕಷ್ಟವಾಗಬಹುದು. ಸರಿಯಾದ ಮರಿಯನ್ನೇ ಕೊಡುತ್ತೇನೆ, ನೀನು ಹೇಳಿದಂತೆ ಐದು ಸಾವಿರ ಈಗ ಕೊಡು ಉಳಿದ ಹಣವನ್ನು ನಂತರ ತೀರಿಸುವಂತೆ' ಎಂದ.

ಆಗ ಬಾಲಕ, 'ಇಲ್ಲ ಅಂಕಲ್, ನನಗೆ ಈ ಮರಿಯೇ ಬೇಕು' ಎಂದ. ಅಂಗಡಿಯವನಿಗೆ ಆಶ್ಚರ್ಯವಾಯಿತು. 'ಸರಿಯಪ್ಪ, ಒಂದು ಕೆಲಸ ಮಾಡು. ನಿನ್ನ ಬಳಿ ಇರುವ ಹಣ ಕೊಟ್ಟು ಈ ಮರಿಯನ್ನು ತೆಗೆದುಕೊಂಡು ಹೋಗು, ಬೇರೆ ಏನು ಕೊಡಬೇಕಾಗಿಲ್ಲ' ಎಂದ. ಆಗ ಬಾಲಕ, 'ಇಲ್ಲ ಅಂಕಲ್, ಬೇರೆ ಮರಿಗಳಿಗೆ ಇರುವಷ್ಟೇ ಬೆಲೆ ಇದಕ್ಕೂ ಇದೆ. ಹಾಗಾಗಿ ಐದು ಸಾವಿರ ಈಗ ಕೊಡುತ್ತೇನೆ. ಉಳಿದ ಬಾಕಿ ಹಣವನ್ನು ಆಮೇಲೆ ತೀರಿಸುತ್ತೇನೆ' ಎಂದು ನುಡಿದ.

'ಅಲ್ಲ ಪುಟ್ಟಾ, ಇಷ್ಟು ಹಟ ಮಾಡುತ್ತಿದ್ದೀಯಲ್ಲ, ಇದರ ಕಾಲು ಕುಂಟಾಗಿದೆ. ಇದನ್ನು ಸಾಕುವುದು ಕಷ್ಟವಾಗುವುದಿಲ್ಲವೇ' ಎಂದು ಪ್ರಶ್ನಿಸಿದ. ಆಗ ಆ ಬಾಲಕ ನಿಧಾನವಾಗಿ ತಾನು ತೊಟ್ಟಿದ್ದ ಪ್ಯಾಂಟನ್ನು ಮೇಲಕ್ಕೆ ಮಡಿಸಿ ತೋರಿಸಿದ. ಆ ಬಾಲಕನ ಒಂದು ಕಾಲು ಸಹ ಕುಂಟಾಗಿತ್ತು. 'ಅಂಕಲ್ ಒಂದು ಕಾಲಿಲ್ಲದ ನನಗೆ, ಖಂಡಿತವಾಗಿಯೂ ಈ ಕುಂಟ ಮರಿಯ ಕಷ್ಟ ಏನೆಂದು ಅರ್ಥವಾಗುತ್ತದೆ. ಅದನ್ನು ನಾನು ಚೆನ್ನಾಗಿ ಸಾಕಬಲ್ಲೆ' ಎಂದ ಆ ಬಾಲಕ.

ಈ ಬಗೆಯ ಭಾವನೆಯನ್ನು 'ಎಂಪಥಿ' ಎಂದು ಕರೆಯುತ್ತಾರೆ. ಕನ್ನಡದಲ್ಲಿ ಇದಕ್ಕೆ 'ಸಹಾನುಭೂತಿ' ಎನ್ನಬಹುದು. ಅಂದರೆ ಇನ್ನೊಬ್ಬರ ಜಾಗದಲ್ಲಿ ನಿಂತು ಅವರ ಕಷ್ಟವನ್ನು ಅರ್ಥ ಮಾಡಿಕೊಳ್ಳುವ ಮನಃಸ್ಥಿತಿ. ತುಟಿ ಮೇಲಿನ ಅನುಕಂಪ ಅಥವಾ 'ಸಿಂಪಥಿ'ಯನ್ನು ಎಲ್ಲರೂ ವ್ಯಕ್ತಪಡಿಸುತ್ತಾರೆ. 'ಅಯ್ಯೋ ನಿಮಗೆ ಹೀಗಾಗಬಾರದಿತ್ತು' ಎಂದು ಹೇಳುವಾಗ 'ಒಳಗಿಂದಲೇ ಇವರಿಗೆ ಸರಿಯಾಗಿಯೇ ಆಗಿದೆ. ಇದನ್ನೇ ನಾನು ಕಾಯುತ್ತಿದ್ದೆ' ಎಂದು ಖುಷಿ ಪಡುವ ಮನಸ್ಸು ಕೆಲವರದ್ದು. ಈ ರೀತಿಯ ತುಟಿ ಮೇಲಿನ ಅನುಕಂಪ ನೊಂದವರ ನೋವಿಗೆ ಹೆಗಲುಕೊಟ್ಟು ನಿಲ್ಲುವುದಿಲ್ಲ, ಅದಕ್ಕೆ ಇನ್ನಷ್ಟು ತುಪ್ಪ ಸುರಿಯುತ್ತದಷ್ಟೇ. ಬದಲಿಗೆ ಇನ್ನೊಬ್ಬರ ಜಾಗದಲ್ಲಿ ನಿಂತು ಅವರ ಸಂಕಷ್ಟವನ್ನು ಅರ್ಥ ಮಾಡಿಕೊಳ್ಳುವ ಸೂಕ್ಷ್ಮವಾದ ಸಂವೇದನೆ ಅತ್ಯಗತ್ಯ. ಇದನ್ನು ಮಕ್ಕಳಲ್ಲಿ ಬಾಲ್ಯದಿಂದಲೇ ಬಿತ್ತುವ ಪ್ರಯತ್ನವನ್ನು ನಿರಂತರವಾಗಿ ಮಾಡಬೇಕು. ಆಗ ಮಾತ್ರ ಅವರನ್ನು ಸಮಾಜಮುಖಿಯಾಗಿ, ಇನ್ನೊಬ್ಬರ ಕಷ್ಟಕ್ಕೆ ತುಡಿಯುವ ಸಂವೇದನಾಶೀಲ ಪ್ರಜೆಗಳಾಗಿ ರೂಪುಗೊಳಿಸಲು ಸಾಧ್ಯ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಡಿಸೆಂಬರ್ 25, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಚತುರ್ದಶಿ ಗಂ. 29-47 ನಕ್ಷತ್ರ: ರೋಹಿಣಿ ಗಂ. 21-39 ಯೋಗ: ಶುಭ ಗಂ 28-22 ಕರಣ: ಗರ ಗಂ. 17-49, ಧನು ಮಾಸದ 09 ನೇ ದಿನ, ಮಳೆನಕ್ಷತ್ರ: ಮೂಲಾ 3.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-54 ಸೂರ್ಯಾಸ್ತ : 06-07
ಮುಸ್ಲಿಂ ದಿನಾಂಕ : 11 ಜುಮಾದುಸ್ಸಾನಿ ದಿನ
ವಿಶೇಷ : ಕ್ರಿಸ್ಮಸ್ ಅದೃಷ್ಟ ಸಂಖ್ಯೆ : 11, 7

ಮೇಷ: ನಿಮ್ಮ ಹೋರಾಟದ ಬದುಕಿನಲ್ಲಿ ಇಂದು ಹೊಸ ಜವಾಬ್ದಾರಿ ವಹಿಸಿಕೊಳ್ಳಬೇಕಾಗುವುದು. ನಿರುದ್ಯೋಗಿಗಳಿಗೆ ಸುಲಭವಾಗಿ ಉದ್ಯೋಗ ದೊರೆಯಲಿದೆ. ಕಾಗದದ ಉದ್ಯಮದವರಿಗೆ ಅಧಿಕ ಲಾಭ ಉಂಟಾಗಲಿದೆ.

ವೃಷಭ: ಮನೆಯಲ್ಲಿ ನಡೆಯಬೇಕಿರುವ ಮಂಗಳ ಕಾರ್ಯಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಸುದಿನ. ಆಹಾರ ಸೇವಿಸಲು ಸಂಕೋಚ ಬೇಡ. ವ್ಯವಸಾಯಗಾರರಿಗೆ ಹೆಚ್ಚಿನ ಕೆಲಸ ಇರಲಿದೆ.

ಮಿಥುನ: ಪ್ರಯಾಣ ಮತ್ತು ಹೊಸಬರ ಪರಿಚಯ ನಿಮ್ಮ ಮುಂದಿನ ಯೋಜನೆಗಳಿಗೆ ಅನುಕೂಲವಾಗಲಿದೆ. ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ಹುಡುಕುವ ಪ್ರಯತ್ನ ಮಾಡಿ. ಅಂದುಕೊಂಡ ಕೆಲಸ ವಿಳಂಬವಾಗಲಿದೆ.

ಕರ್ಕಾಟಕ: ಮನದಲ್ಲಿ ಸಲ್ಲದ ವಿಚಾರಗಳನ್ನು ತುಂಬಿಕೊಳ್ಳದೆ, ಸಂತೋಷವಾಗಿ ಇರಲು ಯತ್ನಿಸಿ. ಉಸಿರಾಟದ ಸಮಸ್ಯೆ ಎದುರಾಗಬಹುದು, ನಿರ್ಲಕ್ಷಿಸಬೇಡಿ. ವಿದ್ಯುತ್ ಉಪಕರಣಗಳ ಮಾರಾಟಗಾರರಿಗೆ ಶುಭಕಾಲ.

ಸಿಂಹ: ನವ ಉದ್ಯಮಿಗಳಿಗೆ ಹಿರಿಯರಿಂದ ತಿಳಿವಳಿಕೆ ಮಾತುಗಳು, ಆಶೀರ್ವಾದ ಸಿಗಲಿದೆ. ಧಾರ್ಮಿಕ ಕಾರ್ಯದಿಂದ ದೊರಕುವ ಸತ್ಫಲಗಳು ಅನುಭವಕ್ಕೆ ಬರಲಿವೆ. ತರಕಾರಿ ವ್ಯಾಪಾರಿಗಳಿಗೆ ಲಾಭವಾಗಲಿದೆ.

ಕನ್ಯಾ: ಷೇರುಗಳನ್ನು ಖರೀದಿಸುವಲ್ಲಿ ನಿಮ್ಮ ಲೆಕ್ಕಾಚಾರ ವ್ಯತ್ಯಾಸವಾಗಲಿರುವ ಬಗ್ಗೆ ಗಮನವಿರಲಿ. ನಿಮ್ಮ ಶ್ರಮಕ್ಕೆ ಅನುಗುಣವಾಗಿ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಳ್ಳಲಿವೆ. ಬಾಕಿ ಇದ್ದ ಯೋಜನೆ ಪೂರ್ಣಗೊಳಿಸಿ.

ತುಲಾ: ಗಣ್ಯ ವ್ಯಕ್ತಿಗಳ ಪರಿಚಯ ನಿಮ್ಮ ಸ್ವಂತ ಕೆಲಸಕ್ಕೆ ಸಹಾಯವಾಗಲಿದೆ. ವಾಹನ ಚಾಲನೆಯಲ್ಲಿ ಅಥವಾ ವಾಹನದಲ್ಲಿ ಪ್ರಯಾಣಿಸುವಾಗ ಜಾಗ್ರತೆ ವಹಿಸಿ. ಕೇಸರಿ ಬಣ್ಣ ಶುಭ ಉಂಟುಮಾಡಲಿದೆ.

ವೃಶ್ಚಿಕ: ನೂತನ ಸಂಬಂಧ ಬೆಳೆಸುವ ವಿಚಾರವಾಗಿ ಮನಸ್ಸಿನಲ್ಲಿ ಯಾವುದೇ ಗೊಂದಲಗಳಿರುವುದಿಲ್ಲ. ಎಲೆಕ್ಟ್ರಿಕಲ್ ವಸ್ತುಗಳ ವ್ಯಾಪಾರ ಆರಂಭಿಸುವ ಬಗ್ಗೆ ಯೋಚಿಸಬಹುದು. ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ದಿನಗಳು.

ಧನು: ಸ್ಪರ್ಧಾತ್ಮಕ ವಿಚಾರಗಳಲ್ಲಿ ಪ್ರಬಲರಾದ ಮತ್ತು ಚಾಣಾಕ್ಷರಾದ ಪ್ರತಿ|-ಸ್ಪರ್ಧಿಗಳು ಎದುರಾಗಲಿದ್ದಾರೆ. ಈ ದಿನದ ಕೆಲ ಅಂಶಗಳ ಬಗ್ಗೆ ಗಂಭೀರವಾದ ನಿಲುವು ತಾಳ ಬೇಕಾಗುವುದು. ನೂತನ ವಸ್ತ್ರ ಖರೀದಿಯ ಯೋಗವಿದೆ.

ಮಕರ: ನಿಮಗೆ ಎದುರಾಗುವ ಎಲ್ಲ ಸವಾಲುಗಳನ್ನು ಬುದ್ಧಿವಂತಿಕೆಯಿಂದ ಎದುರಿಸಿ, ಇನ್ನಷ್ಟು ಮನೋಬಲ ಹೆಚ್ಚಿಸಿಕೊಳ್ಳುವ ಪ್ರಯತ್ನದಲ್ಲಿರಿ. ಚರ್ಮಕ್ಕೆ ಸಂಬಂಧ ಪಟ್ಟಂತೆ ಅನಾರೋಗ್ಯ ಎದುರಾಗಬಹುದು.


ಕುಂಭ: ಗೊಂದಲದ ಸಮಯದಲ್ಲಿ ಯಾವ ಹಾದಿ ಆಯ್ದುಕೊಳ್ಳಬೇಕು ಎಂಬ ಖಚಿತತೆ ಇಲ್ಲದಿದ್ದರೂ ನೀವು ಮತ್ತೊಂದು ಅವಕಾಶವನ್ನು ಸದಾ ಪರ್ಯಾಯವಾಗಿಟ್ಟುಕೊಳ್ಳುವ ಜಾಣ್ಮೆ ಪ್ರದರ್ಶಿಸಿ. ಸಂತಾನ ಸುದ್ದಿ ಕೇಳಿ ಬರುವುದು.

ಮೀನ: ಗುತ್ತಿಗೆ ಆಧಾರಿತ ಉದ್ಯೋಗ ನಡೆಸುವವರಿಗೆ ಜನಬಲದ ಸಮಸ್ಯೆ ಎದುರಾಗಬಹುದು. ಛಾಯಾಗ್ರಾಹಕರಿಗೆ ಪ್ರಶಸ್ತಿ ಪಡೆಯುವಂತಹ ಹೆಚ್ಚಿನ ಅವಕಾಶಗಳು ಸಿಗಲಿವೆ. ವಿಮರ್ಶಕರಿಗೆ ವೃತ್ತಿಯಲ್ಲಿ ಏಳಿಗೆ ಇರುವುದು.

ಪದಬಂಧ 5540 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಅಟ್ಟದ ಮೇಲಿದ್ದಾತನದು ಗಟ್ಟಿಯಾದ ನಗು (4)
4. ಮಧುರವಾಗಿರುವ ತುಟಿ (3)
5. ಮಹಲನ್ನು ಕಟ್ಟಿಸಿದವ ಗೌರವಕ್ಕೆ ಪಾತ್ರನಾದವನು (4)
6. ಗಾಣದಿಂದ ಎಣ್ಣೆ ತೆಗೆಯುವವ (3)
8. ನಯವಾಗಿ ಮಾತನಾಡುವವನದ್ದು ಮಧ್ಯವಯಸ್ಸು (4)
9. ನೇರವಲ್ಲದ ಗಮನ (4)
11. ನಸುಕಿನಲ್ಲಿ ಬಿದ್ದಿರುವ ಸ್ವಪ್ನ (3)
14. ಉಚಿತವಾಗಿ ಪಡೆದರೂ ಯೋಗ್ಯವಲ್ಲದ್ದು (4)
16. ನರನಿರುವ ಷಹರು (3)
17. ಮರದಲ್ಲಿ ಮಾಡಿದ ಹೆಬ್ಬಾಗಿಲು (4)

ಮೇಲಿಂದ ಕೆಳಕ್ಕೆ
1. ತರಳೆ ಹಿಡಿದಿರುವ ಹತ್ತಿ (3)
2. ಇದು ಅಸಮವಲ್ಲ! (2)
3. ಕುಡಿಯಲು ಯೋಗ್ಯವಾದುದು (3)
4. ಅವನ ಅಂತ್ಯ (4)
6. ಈತ ಹಾಡುಗಾರ (3)
7. ಕತ್ತಿಯನ್ನಿಡುವ ಕೋಶ (3)
10. ನಮಸ್ಕಾರ ಹೇಳಿದರೂ ಕಡೆಗಣಿಸುವಿಕೆ! (4)
12. ಅನುಜನ ಹತ್ತಿರಕ್ಕೆ ಬಂದಿರುವ ಅಸುರ (3)
13. ವಾರದಲ್ಲೇ ಕಾಣಿಸಿದ ಕಪಿ (3)
15. ಮತ ಹಾಕಿದಾಗ ಆವರಿಸಿದ ಕತ್ತಲು (2)



5539ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಗುಪ್ತದ್ವಾರ 3.ಗುಟುಕು
5.ಮರುಕ 7.ಉಯಿಲು
8.ಕಾಲಹರಣ 11.ಸಾರಣೆ
12.ಒನಕೆ 15.ಸದರ
16.ಅನ್ವೇಷಕ

ಮೇಲಿಂದ ಕೆಳಕ್ಕೆ
1.ಗುಲಾಮ 2.ರಥ
3.ಗುಲಾಲು 4.ಕುಲಾವಿ
6.ಕಯಾಕಾ 7.ಉದಾಹರಣೆ
9. ಣಡ್ಯಾಬಿ 10.ಪ್ರವಾಸ
11.ಸಾಕ್ಷರ 13.ಕೆಡುಕ
14.ತ್ರೈಅ

ಸುಡೊಕು 5925

		5		8		4		
			7		5		1	9
7		1		6		2		
							3	2
3	6		5		7	8		
		8					4	7
		7		5		1		3
5			9		8			
2		3				9	8	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5924 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ದೇಶದ ಕಚ್ಚಾ ಉಕ್ಕು ಉತ್ಪಾದನೆ ಶೇ 11ರಷ್ಟು ಏರಿಕೆ

ನವದೆಹಲಿ (ಪಿಟಿಐ): ಭಾರತವು ಈ ವರ್ಷದ ನವೆಂಬರ್‌ನಲ್ಲಿ ತನ್ನ ಕಚ್ಚಾ ಉಕ್ಕು ಉತ್ಪಾದನೆಯಲ್ಲಿ ಶೇ 11.4ರಷ್ಟು ಹೆಚ್ಚಳವನ್ನು ದಾಖಲಿಸಿ, 1.17 ಕೋಟಿ ಟನ್‌ಗೆ ತಲುಪಿದೆ ಎಂದು ಜಾಗತಿಕ ಉಕ್ಕು ಸಂಘಟನೆ (ವರ್ಲ್ಡ್ ಸ್ಟೀಲ್) ತಿಳಿಸಿದೆ.

ಜನವರಿ-ನವೆಂಬರ್ ಅವಧಿಯಲ್ಲಿ, ದೇಶದ ಉತ್ಪಾದನೆಯು ಶೇ 12.1ರಷ್ಟು ಏರಿಕೆಯಾಗಿ 12.82 ಕೋಟಿ ಟನ್‌ಗೆ ಮುಟ್ಟಿದೆ ಎಂದು ಜಾಗತಿಕ ಸಂಸ್ಥೆ ತನ್ನ ಇತ್ತೀಚಿನ ವರದಿಯಲ್ಲಿ ತಿಳಿಸಿದೆ.

ಜಾಗತಿಕ ಉಕ್ಕು ಉತ್ಪಾದನೆಯು ನವೆಂಬರ್‌ನಲ್ಲಿ 14.55 ಕೋಟಿ ಟನ್ ಇತ್ತು. 2022ರ ಇದೇ ತಿಂಗಳಿಗಿಂತ ಶೇ 3.3ರಷ್ಟು ಹೆಚ್ಚಾಗಿದೆ. 2023ರ ಜನವರಿ–ನವೆಂಬರ್‌ನಲ್ಲಿ ಜಾಗತಿಕ ಉತ್ಪಾದನೆ ಶೇ 0.5ರಷ್ಟು ಏರಿಕೆಯಾಗಿ 171.5 ಕೋಟಿ ಟನ್‌ಗೆ ತಲುಪಿದೆ ಎಂದು ವರ್ಲ್ಡ್ ಸ್ಟೀಲ್ ಅಸೋಸಿಯೇಷನ್ ತಿಳಿಸಿದೆ.

ಪ್ರಸ್ತುತ ವರ್ಷದ ನವೆಂಬರ್‌ನಲ್ಲಿ ಚೀನಾವು 7.61 ಕೋಟಿ ಟನ್, ಅಮೆರಿಕ 66 ಲಕ್ಷ ಟನ್, ರಷ್ಯಾ 64 ಲಕ್ಷ ಟನ್, ದಕ್ಷಿಣ ಕೊರಿಯಾ 54 ಲಕ್ಷ ಟನ್, ಜರ್ಮನಿ 27 ಲಕ್ಷ ಟನ್, ಟರ್ಕಿ 30 ಲಕ್ಷ ಟನ್ ಮತ್ತು ಬ್ರೆಜಿಲ್ 27 ಲಕ್ಷ ಟನ್ ಉಕ್ಕು ಉತ್ಪಾದಿಸಿವೆ. ಆದರೆ ಜಪಾನ್‌ನ ಉತ್ಪಾದನೆಯು ಶೇ 0.9ರಷ್ಟು ಇಳಿಕೆಯಾಗಿ 71 ಲಕ್ಷ ಟನ್‌ಗೆ ತಲುಪಿದೆ ಎಂದು ವರ್ಲ್ಡ್ ಸ್ಟೀಲ್ ತಿಳಿಸಿದೆ.

ದೇಶದಲ್ಲಿ ಕಚೇರಿ ಸ್ಥಳ: ಬೇಡಿಕೆ ಶೇ 92ರಷ್ಟು ಏರಿಕೆ

ನವದೆಹಲಿ (ಪಿಟಿಐ): ಬೆಂಗಳೂರು ಸೇರಿದಂತೆ ದೇಶದ ಆರು ಪ್ರಮುಖ ನಗರಗಳಲ್ಲಿ ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ಕಚೇರಿ ಸ್ಥಳಾವಕಾಶದ ಬೇಡಿಕೆಯು ಶೇ 92ರಷ್ಟು ಏರಿಕೆಯಾಗಿದೆ ಎಂದು 'ಕೊಲಿಯರ್ಸ್ ಇಂಡಿಯಾ' ತಿಳಿಸಿದೆ.

ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆ ಕೊಲಿಯರ್ಸ್ ಇಂಡಿಯಾ ವರದಿಯು, ಪ್ರಸಕ್ತ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಒಟ್ಟು ಕಚೇರಿ ಸ್ಥಳದ 2.02 ಕೋಟಿ ಚದರ ಅಡಿಗಳಷ್ಟು ಆಗಿದ್ದರೆ, ಹಿಂದಿನ ವರ್ಷದ ಇದೇ ಅವಧಿಯಲ್ಲಿ 1.05 ಕೋಟಿ ಚದರ ಅಡಿ ಆಗಿತ್ತು ಎಂದು ತಿಳಿಸಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಉತ್ತಮ ಬೇಡಿಕೆಯಿಂದಾಗಿ ಕಚೇರಿ ಸ್ಥಳ ಒಟ್ಟು ಗುತ್ತಿಗೆ ಶೇ 16ರಷ್ಟು ಏರಿಕೆಯಾಗಿ 5.82 ಕೋಟಿ ಚದರ ಅಡಿಗೆ ತಲುಪಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಇದು 5.3 ಕೋಟಿ ಚದರ ಅಡಿ ಇತ್ತು.

ಬೆಂಗಳೂರು, ಚೆನ್ನೈ, ದೆಹಲಿ–ಎನ್‌ಸಿಆರ್, ಹೈದರಾಬಾದ್, ಮುಂಬೈ ಮತ್ತು ಪುಣೆ ನಗರಗಳಲ್ಲಿ ಕಚೇರಿ ಸ್ಥಳಕ್ಕೆ ಇರುವ ಬೇಡಿಕೆ ಮತ್ತು ಪೂರೈಕೆಯ ಮೇಲೆ ಕೊಲಿಯರ್ಸ್ ಇಂಡಿಯಾ ನಿಗಾ ಇರಿಸಿದೆ.

ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ಬೆಂಗಳೂರಲ್ಲಿ ಕಚೇರಿ ಸ್ಥಳ ಗುತ್ತಿಗೆಯು, 55 ಲಕ್ಷ ಚದರ ಅಡಿಗೆ ತಲುಪಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಇದು 35 ಲಕ್ಷ ಚದರ ಅಡಿ ಇತ್ತು ಎಂದು ಕೊಲಿಯರ್ಸ್ ತಿಳಿಸಿದೆ.

ಇಂಡೊನೇಷ್ಯಾ ನಿಕೆಲ್ ಸ್ಥಾವರದಲ್ಲಿ ಸ್ಫೋಟ: 13 ಸಾವು

ಜಕಾರ್ತ (ಇಂಡೊನೇಷ್ಯಾ) (ಎಪಿ): ಸುಲಾವೇಸಿ ದ್ವೀಪದಲ್ಲಿರುವ ಚೀನಾ ಒಡೆತನದ ನಿಕೆಲ್ ಉತ್ಪಾದನಾ ಸ್ಥಾವರದಲ್ಲಿ ಭಾನುವಾರ ಸಂಭವಿಸಿದ ಸ್ಫೋಟದಲ್ಲಿ ಕನಿಷ್ಠ 13 ಕಾರ್ಮಿಕರು ಮೃತಪಟ್ಟು, 46ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಸುಲಾವೇಸಿ ಮಧ್ಯ ಪ್ರಾಂತ್ಯದ ಮೊರೊವಾಲಿ ಇಂಡಸ್ಟ್ರಿಯಲ್ ಪಾರ್ಕ್‌ನಲ್ಲಿರುವ ಪಿಟಿ ಇಂಡೊನೇಷ್ಯಾ ಟಿಂಗ್‌ಶಾನ್ ಸ್ಟೇನ್‌ಲೆಸ್ ಸ್ಟೀಲ್ (ಐಟಿಎಸ್‌ಎಸ್) ಒಡೆತನದ ಸ್ಥಾವರದಲ್ಲಿ ಸ್ಥಳೀಯ ಕಾಲಮಾನ ಬೆಳಿಗ್ಗೆ 5.30ಕ್ಕೆ ಈ ದುರ್ಘಟನೆ ಸಂಭವಿಸಿದೆ ಎಂದು ವಕ್ತಾರರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರಾಮನಗರ ರೇಷ್ಮೆಗೂಡು ಧಾರಣೆ		ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಮಿಶ್ರತಳಿ (ಸಿ.ಬಿ)	₹245-465	ಬೆಂಗಳೂರು	
		100 ಮೊಟ್ಟೆಗೆ	₹625
ದ್ವಿತಳಿ (ಬಿ.ವಿ)	₹311-580	12 ಮೊಟ್ಟೆಗೆ	₹82
		ಮೈಸೂರು	
		100 ಮೊಟ್ಟೆಗೆ	₹625



ಇಪಿಎಫ್ ಜತೆ ವಿಪಿಎಫ್ ಹೂಡಿಕೆ ಮಾಡಿ



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಭಾರತದಲ್ಲಿ ಇರುವ ಶೇ 90ರಷ್ಟು ಮಂದಿಯ ವಾರ್ಷಿಕ ಆದಾಯ ₹4 ಲಕ್ಷಕ್ಕಿಂತ ಕಡಿಮೆ. ಮನೆ ಬಾಡಿಗೆ, ಮಕ್ಕಳ ಶಾಲಾ ಶುಲ್ಕ, ದಿನಸಿ ವೆಚ್ಚ ಹೀಗೆ ಎಷ್ಟೊಂದು ಖರ್ಚುಗಳಿರುವ ಕಾರಣ ಭವಿಷ್ಯಕ್ಕಾಗಿ ಹಣ ಉಳಿತಾಯ ಮಾಡಿ ಹೂಡಿಕೆ ಮಾಡೋದು ಕಷ್ಟಸಾಧ್ಯ. ಇದೆಲ್ಲದರ ನಡುವೆ ಅಷ್ಟೋ ಇಷ್ಟೋ ಕಷ್ಟಪಟ್ಟು ಉಳಿಸಿದರೂ ಹೆಚ್ಚು ಲಾಭ ಕೊಡುವ, ಕಡಿಮೆ ರಿಸ್ಕ್ ಇರುವ ಹೂಡಿಕೆಗಳನ್ನು ಹುಡುಕಿ ತೊಡಗಿಸೋದು ಮತ್ತೊಂದು ಸವಾಲು.

ನಿಮಗೆ ಗೊತ್ತಾ, ನಿಶ್ಚಿತ ಠೇವಣಿ (ಎಫ್.ಡಿ) ಮತ್ತು ಸಾರ್ವಜನಿಕ ಭವಿಷ್ಯ ನಿಧಿಗಿಂತ (ಪಿಪಿಎಫ್) ಹೆಚ್ಚಿನ ಬಡ್ಡಿ ಲಾಭ ಕೊಡುವ ಹೂಡಿಕೆಯೊಂದಿದೆ. ಅದೇ ವಿಪಿಎಫ್ ಅಥವಾ ವಾಲೆಂಟರಿ ಪ್ರಾವಿಡೆಂಟ್ ಫಂಡ್. ಏನೀ ವಾಲೆಂಟರಿ ಪ್ರಾವಿಡೆಂಟ್ ಫಂಡ್? ಅದರಲ್ಲಿ ಹೂಡಿಕೆ ಹೇಗೆ? ಬನ್ನಿ ವಿವರವಾಗಿ ತಿಳಿಯೋಣ.

ಏನಿದು ವಿಪಿಎಫ್ ಹೂಡಿಕೆ?: ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್) ಬಗ್ಗೆ ಎಲ್ಲರಿಗೂ ಗೊತ್ತೇ ಇದೆ. ಆದರೆ, ಇಪಿಎಫ್‌ನ ಭಾಗವೇ ಆಗಿರುವ ಸ್ವಯಂಪ್ರೇರಿತ ಭವಿಷ್ಯ ನಿಧಿ (ವಾಲೆಂಟರಿ ಪ್ರಾವಿಡೆಂಟ್ ಫಂಡ್) ಬಗ್ಗೆ ಅನೇಕರಿಗೆ ಸರಿಯಾದ ಮಾಹಿತಿ ಇಲ್ಲ. ಕಾರ್ಮಿಕರ ಭವಿಷ್ಯ ನಿಧಿ ಖಾತೆಗೆ ಸ್ವಯಂಪ್ರೇರಿತವಾಗಿ ಹೆಚ್ಚುವರಿ ಕೊಡುಗೆ ನೀಡುವುದನ್ನು ವಿಪಿಎಫ್ ಎನ್ನಲಾಗುತ್ತದೆ.

ನಿಮ್ಮ ಮೂಲ ವೇತನ ಮತ್ತು ತುಟ್ಟಿ ಭತ್ಯೆಯ ಶೇ 100ರಷ್ಟು ಪಾಲನ್ನು ಮಾಸಿಕವಾಗಿ ವಿಪಿಎಫ್‌ಗೆ ಕೊಡುಗೆಯಾಗಿ ನೀಡಬಹುದು. ವಿಪಿಎಫ್ ಅನ್ನು ವಾಲೆಂಟರಿ ರಿಟೈರ್ ಫಂಡ್ ಸ್ಕೀಂ ಅಂತಲೂ ಕರೆಯುತ್ತಾರೆ. ಇಪಿಎಫ್ ಉಳಿತಾಯಕ್ಕೆ ನೀಡುವ ಬಡ್ಡಿಯನ್ನೇ ವಿಪಿಎಫ್‌ಗೂ ನೀಡಲಾಗುತ್ತದೆ. ಮಾಸಿಕ ವೇತನ ಪಡೆಯುತ್ತಿದ್ದು, ಇಪಿಎಫ್ ಅಕೌಂಟ್ ಇರುವ ಎಲ್ಲ ನೌಕರರು ವಿಪಿಎಫ್‌ನಲ್ಲಿ ಹೂಡಿಕೆ ಮಾಡಬಹುದು.

ವಿಪಿಎಫ್ ಅನುಕೂಲಗಳು: ವಿಪಿಎಫ್ ಯೋಜನೆಯ ಪ್ರಮುಖ ಅನುಕೂಲ ಅಂದರೆ ಬಡ್ಡಿದರ. ವಿಪಿಎಫ್‌ನಲ್ಲಿ ಹೂಡಿಕೆ ಮಾಡಿದಾಗ ಇಪಿಎಫ್‌ಗೆ ಸಿಗುವ ಬಡ್ಡಿದರವೇ ವಿಪಿಎಫ್‌ಗೂ ಸಿಗುತ್ತದೆ. ಪ್ರಸ್ತುತ ಇಪಿಎಫ್‌ನ ಬಡ್ಡಿದರ ಶೇ 8.15ರಷ್ಟಿದೆ. ಅದೇ ಬಡ್ಡಿದರ ವಿಪಿಎಫ್‌ಗೂ ಸಿಗುತ್ತದೆ.

ವಿಪಿಎಫ್ ಹೂಡಿಕೆ ವೇಳೆ ಆದಾಯ ತೆರಿಗೆಯ ಸೆಕ್ಷನ್ 80ಸಿ ಅಡಿಯಲ್ಲಿ ತೆರಿಗೆ ವಿನಾಯಿತಿ ಸಿಗುತ್ತದೆ. ಹೂಡಿಕೆ ಮೇಲಿನ ಬಡ್ಡಿ ಗಳಿಕೆಗೂ ತೆರಿಗೆ ವಿನಾಯಿತಿ ಲಭಿಸುತ್ತದೆ. ಅಷ್ಟೇ ಅಲ್ಲ 5 ವರ್ಷಗಳ ಬಳಿಕ ನಗದೀಕರಣ (ವಿತ್ ಡ್ರಾ) ಮಾಡಿದಾಗ ಅದಕ್ಕೂ ತೆರಿಗೆ ಇರುವುದಿಲ್ಲ. ಇದೊಂದು ಸುರಕ್ಷಿತ ಹೂಡಿಕೆಯಾಗಿದ್ದು ಒಂದು ಕಂಪನಿಯಿಂದ ಮತ್ತೊಂದು ಕಂಪನಿಗೆ ಕೆಲಸ ಬದಲಾವಣೆ ಮಾಡಿದಾಗಲೂ ಸುಲಭವಾಗಿ ವರ್ಗಾವಣೆ ಮಾಡಿಕೊಳ್ಳಬಹುದಾಗಿದೆ.

ವರ್ಷದ ಯಾವುದೇ ತಿಂಗಳಲ್ಲಿ ವಿಪಿಎಫ್ ಖಾತೆ ಆರಂಭಿಸಬಹುದು. ಆದರೆ, ಹೂಡಿಕೆಯನ್ನು 5 ವರ್ಷಗಳವರೆಗೆ ನಿಲ್ಲಿಸುವಂತಿಲ್ಲ. ಸಾಲದ ರೂಪದಲ್ಲಿ ವಿಪಿಎಫ್‌ನಲ್ಲಿ ಭಾಗಶಃ ಹಣ ಪಡೆಯಬಹುದು. ಆದರೆ, ಮೆಚ್ಯೂರಿಟಿ ಅವಧಿಗಿಂತ ಮೊದಲೇ ಹಣ ಹಿಂಪಡೆದರೆ ತೆರಿಗೆ ಅನ್ವಯಿಸುತ್ತದೆ. ವೈದ್ಯಕೀಯ ತುರ್ತು, ಉನ್ನತ ಶಿಕ್ಷಣದ ಉದ್ದೇಶ, ಮದುವೆ, ಮನೆ ನಿರ್ಮಾಣ, ಖರೀದಿಯಂತಹ ಸಂದರ್ಭದಲ್ಲಿ ಅವಧಿಪೂರ್ವ ವಿಪಿಎಫ್ ಹಿಂಪಡೆತಕ್ಕೆ ವಿನಾಯಿತಿ ಇದೆ.

ಯಾವಾಗ ವಿಪಿಎಫ್ ಹೂಡಿಕೆ ಮಾಡಬೇಕು?: ನಿಮ್ಮ ವಾರ್ಷಿಕ ಇಪಿಎಫ್ ಹೂಡಿಕೆಯ ಮೊತ್ತ ₹2.5 ಲಕ್ಷದ ಒಳಗಿದೆ ಅಂತಾದರೆ ಆಗ ವಿಪಿಎಫ್ ಹೂಡಿಕೆಯನ್ನು ಪರಿಗಣಿಸುವುದು ಸೂಕ್ತ. ಯಾಕಂದ್ರೆ ₹2.5 ಲಕ್ಷಕ್ಕಿಂತ ಹೆಚ್ಚಿನ ಹೂಡಿಕೆಯನ್ನು ಇಪಿಎಫ್ ಅಥವಾ ವಿಪಿಎಫ್‌ನಲ್ಲಿ ಮಾಡಿದರೆ ಆದಾಯ ತೆರಿಗೆ ಸ್ಲ್ಯಾಬ್‌ಗೆ ಅನುಗುಣವಾಗಿ ತೆರಿಗೆ ಪಾವತಿಸಬೇಕಾಗುತ್ತದೆ.

ಉದಾಹರಣೆಗೆ ತಿಂಗಳಿಗೆ ₹12,500ರಂತೆ ವಾರ್ಷಿಕವಾಗಿ ₹1.5 ಲಕ್ಷವನ್ನು ಇಪಿಎಫ್‌ನಲ್ಲಿ ಹೂಡಿಕೆ ಮಾಡುತ್ತಿದ್ದೀರಿ ಎಂದುಕೊಳ್ಳಿ. ಆಗ ವಿಪಿಎಫ್‌ನಲ್ಲಿ ತಿಂಗಳಿಗೆ ₹8,333 ಹೂಡಿಕೆ ಮಾಡಿದರೆ ವಾರ್ಷಿಕವಾಗಿ ವಿಪಿಎಫ್ ಹೂಡಿಕೆ ಮೊತ್ತ ₹1 ಲಕ್ಷ ಆಗುತ್ತದೆ. ವಿಪಿಎಫ್ ಮತ್ತು ಇಪಿಎಫ್ ಮೊತ್ತ ಸೇರಿ ಒಟ್ಟು ಹೂಡಿಕೆ ಮೊತ್ತ ₹2.5 ಲಕ್ಷ ಆಗುತ್ತದೆ. ಈ ರೀತಿ ಇಪಿಎಫ್ ಮತ್ತು ವಿಪಿಎಫ್ ಹೂಡಿಕೆಯಲ್ಲಿ ಸಮತೋಲನ ಕಾಯ್ದು-ಕೊಳ್ಳುವುದು ಬಹಳ ಮುಖ್ಯ.

ಯಾವ ದಾಖಲೆಗಳು ಬೇಕು? : ವಿಪಿಎಫ್ ಖಾತೆ ಆರಂಭಿಸಲು ನೀವು ಕೆಲಸ ಮಾಡುತ್ತಿರುವ ಕಂಪನಿಯ ನೋಂದಣಿ ಪ್ರಮಾಣ ಪತ್ರ, ಫಾರಂ 24, ಫಾರಂ 49, ಕಂಪನಿ ಬಗ್ಗೆ ಮಾಹಿತಿ ಪತ್ರ, ಉದ್ದಿಮೆ ಪ್ರಮಾಣ ಪತ್ರ ಹಾಗೂ ಇನ್ನು ಕೆಲವು ದಾಖಲೆಗಳು ಅಗತ್ಯ. ಈ ಬಗ್ಗೆ ಹೆಚ್ಚಿನ ಸ್ಪಷ್ಟತೆಗಾಗಿ ನಿಮ್ಮ ಕಂಪನಿಯ ಮಾನವ ಸಂಪನ್ಮೂಲ ಮತ್ತು ಹಣಕಾಸು ವಿಭಾಗವನ್ನು ಸಂಪರ್ಕಿಸಬಹುದು. ವಿಪಿಎಫ್ ಖಾತೆ ನೋಂದಣಿ ಫಾರಂ ಭರ್ತಿ ಮಾಡಿ ಅಗತ್ಯ ದಾಖಲೆಗಳನ್ನು ಒದಗಿಸಿದ ಬಳಿಕ ನಿಮ್ಮ ಇಪಿಎಫ್ ಖಾತೆಯಲ್ಲೇ ಪ್ರತ್ಯೇಕವಾಗಿ ಒಂದು ವಿಪಿಎಫ್ ಖಾತೆಯೂ ಚಾಲ್ತಿಗೆ ಬರಲಿದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಷೇರುಪೇಟೆ

ಸೆನ್ಸೆಕ್ಸ್, ನಿಫ್ಟಿ ಸೂಚ್ಯಂಕಗಳ ಗೂಳಿ ಓಟಕ್ಕೆ ಬ್ರೇಕ್

ಸತತ ಏಳು ವಾರಗಳಿಂದ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಡಿಸೆಂಬರ್ 22ಕ್ಕೆ ಕೊನೆಗೊಂಡ ವಾರದಲ್ಲಿ ಕುಸಿತ ಕಂಡಿವೆ. 71,106ರಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.52ರಷ್ಟು ಕುಸಿತ ಕಂಡಿದೆ.

21,349ರಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 0.49ರಷ್ಟು ಇಳಿಕೆಯಾಗಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಮಿಶ್ರ ಪ್ರತಿಕ್ರಿಯೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಮಾರಾಟದ ಒತ್ತಡ, ಕೋವಿಡ್ ಪ್ರಕರಣಗಳ ಹೆಚ್ಚಳ ಸೇರಿ ಹಲವು ಅಂಶಗಳು ಷೇರುಪೇಟೆ ಓಟಕ್ಕೆ ತಡೆ ಒಡ್ಡಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 3, ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 2, ನಿಫ್ಟಿ ಆಟೊ ಸೂಚ್ಯಂಕ ಶೇ 1.4 ಮತ್ತು ನಿಫ್ಟಿ ಮೆಟಲ್ ಸೂಚ್ಯಂಕ ಶೇ 1ರಷ್ಟು ಕುಸಿದಿವೆ. ಮತ್ತೊಂದೆಡೆ ನಿಫ್ಟಿ ಎಫ್‌ಎಂಸಿಜಿ ಮತ್ತು ಫಾರ್ಮಾ ಸೂಚ್ಯಂಕಗಳು ತಲಾ ಶೇ 1ರಷ್ಟು ಗಳಿಸಿಕೊಂಡಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹6,422.24 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹9,093.99 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ –ಇಳಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ವರುಣ್ ಬಿವರೇಜಸ್, ಎಚ್‌ಡಿಎಫ್‌ಸಿ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ, ಪೇಟಿಎಂ, ಜೈಡಸ್ ಲೈಫ್ ಸೈನ್ಸಸ್ ಗಳಿಸಿಕೊಂಡಿವೆ. ಬಂಧನ್ ಬ್ಯಾಂಕ್, ಅದಾನಿ ಎಂಟರ್ ಪ್ರೈಸಸ್, ಇಂಡಸ್ ಟವರ್ಸ್, ಮಹೀಂದ್ರಾ ಆ್ಯಂಡ್ ಮಹೀಂದ್ರಾ ಮತ್ತು ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿ ಇಳಿಕೆ ಕಂಡಿವೆ.

ಮುನ್ನೋಟ: ಕ್ರಿಸ್‌ಮಸ್ ಪ್ರಯುಕ್ತ ಇಂದು ಷೇರು ಮಾರುಕಟ್ಟೆಗೆ ರಜೆ. ಇನ್ನು ಸದ್ಯದಲ್ಲೇ ಕಂಪನಿಗಳ ಮೂರನೇ ತ್ರೈಮಾಸಿಕ ಅವಧಿ ಶುರುವಾಗಲಿದ್ದು, ಅದರ ಮೇಲೆ ಹೂಡಿಕೆದಾರರ ದೃಷ್ಟಿ ನೆಟ್ಟಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಕಚ್ಚಾ ತೈಲ ಖರೀದಿಗೆ ಭಾರತದ ಕರೆನ್ಸಿಯಲ್ಲಿ ಪಾವತಿ: ಪ್ರಯತ್ನಕ್ಕೆ ದೊರೆಯದ ಸ್ಪಂದನೆ

ತೈಲ ಆಮದು: ರೂಪಾಯಿಗಿಲ್ಲ ಮನ್ನಣೆ

ನವದೆಹಲಿ (ಪಿಟಿಐ): ಆಮದು ಮಾಡಿಕೊಳ್ಳುವ ಕಚ್ಚಾ ತೈಲಕ್ಕೆ ರೂಪಾಯಿಯಲ್ಲೇ ಹಣ ಪಡೆದುಕೊಳ್ಳಬೇಕು ಎಂಬ ಭಾರತದ ಒತ್ತಾಸೆಗೆ ತೈಲ ಪೂರೈಕೆದಾರರಿಂದ ನಿರೀಕ್ಷಿತ ಸ್ಪಂದನೆ ದೊರೆತಿಲ್ಲ. ಕೇಂದ್ರ ತೈಲ ಸಚಿವಾಲಯವು ಸಂಸತ್ತಿನ ಸ್ಥಾಯಿ ಸಮಿತಿಗೆ ಈ ವಿಷಯ ತಿಳಿಸಿದೆ.

ಮುಖ್ಯಾಂಶಗಳು
- ಕರೆನ್ಸಿ ಪರಿವರ್ತಿಸುವ ಪ್ರಕ್ರಿಯೆ ಕ್ಲಿಷ್ಟಕರ
- ಅಧಿಕ ವಹಿವಾಟು ವೆಚ್ಚ ಭರಿಸಬೇಕಾದ ಅನಿವಾರ್ಯ
- 2022ರ ಜುಲೈನಲ್ಲಿ ಅನುಮತಿ ನೀಡಿದ್ದ ಆರ್‌ಬಿಐ

ಭಾರತದ ರೂಪಾಯಿಯನ್ನು ಬೇರೆ ದೇಶಗಳ ಕರೆನ್ಸಿಗೆ ಪರಿವರ್ತಿಸುವ ಪ್ರಕ್ರಿಯೆ ಕ್ಲಿಷ್ಟಕರ ಮತ್ತು ಅಧಿಕ ವಹಿವಾಟು ವೆಚ್ಚ ಭರಿಸಬೇಕಿರುವುದು ತೈಲ ಪೂರೈಕೆದಾರರು ಹಿಂದೇಟು ಹಾಕಿರುವುದಕ್ಕೆ ಮುಖ್ಯ ಕಾರಣ.

ತೈಲ ಆಮದು ಸೇರಿದಂತೆ ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಬಹುತೇಕ ವಹಿವಾಟು ಡಾಲರ್‌ನಲ್ಲೇ ನಡೆಯುತ್ತದೆ. ಆದರೆ ಭಾರತದ ಕರೆನ್ಸಿಯನ್ನು ಜಾಗತೀಕರಣಗೊಳಿಸುವ ಪ್ರಯತ್ನದ ಭಾಗವಾಗಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ), ಆಮದು ಮತ್ತು ರಫ್ತು ವಹಿವಾಟು ರೂಪಾಯಿಯಲ್ಲಿ ನಡೆಸಲು 2022ರ ಜುಲೈ 11ರಂದು ಅನುಮತಿ ನೀಡಿತ್ತು.

ಆರ್‌ಬಿಐನ ಈ ಉಪಕ್ರಮಕ್ಕೆ ತೈಲ ಹೊರತುಪಡಿಸಿ ಇತರ ಕೆಲವು ವ್ಯಾಪಾರಗಳಲ್ಲಿ ತಕ್ಕಮಟ್ಟಿನ ಯಶಸ್ಸು ದೊರೆತಿದೆಯಾದರೂ, ತೈಲ ಪೂರೈಕೆದಾರರು ಮಾತ್ರ ಭಾರತದ ಕರೆನ್ಸಿಯಲ್ಲಿ ವಹಿವಾಟು ನಡೆಸಲು ಒಪ್ಪುತ್ತಿಲ್ಲ.

15.26 ಕೋಟಿ ಟನ್ ತೈಲ ಆಮದು

ಪ್ರಸಕ್ತ ಹಣಕಾಸು ವರ್ಷದ ಎಂಟು ತಿಂಗಳುಗಳಲ್ಲಿ (2023ರ ಏಪ್ರಿಲ್‌ನಿಂದ ನವೆಂಬರ್) ಭಾರತ ಒಟ್ಟು 15.26 ಕೋಟಿ ಟನ್ ಕಚ್ಚಾ ತೈಲ ಆಮದು ಮಾಡಿಕೊಂಡಿದೆ. ಕಳೆದ ಹಣಕಾಸು ವರ್ಷದಲ್ಲಿ (2022ರ ಏಪ್ರಿಲ್‌ನಿಂದ 2023ರ ಮಾರ್ಚ್‌ವರೆಗೆ) 23.27 ಕೋಟಿ ಟನ್ ಆಮದು ಮಾಡಿಕೊಂಡಿತ್ತು ಎಂದು ಸಚಿವಾಲಯ ಮಾಹಿತಿ ನೀಡಿದೆ.

ಭಾರತದಲ್ಲಿ ತೈಲ ಬಳಕೆಯ ಪ್ರಮಾಣ ದಿನಕ್ಕೆ 55 ಲಕ್ಷದಿಂದ 56 ಲಕ್ಷ ಬ್ಯಾರಲ್ ನಷ್ಟಿದೆ. ಅದರಲ್ಲಿ ನಾವು ದಿನಕ್ಕೆ ಸುಮಾರು 46 ಲಕ್ಷ ಬ್ಯಾರಲ್‌ಗಳನ್ನು ಆಮದು ಮಾಡಿಕೊಳ್ಳುತ್ತೇವೆ. ಇದು ವಿಶ್ವದ ಒಟ್ಟು ತೈಲ ವ್ಯಾಪಾರದ ಶೇ 10ರಷ್ಟಿದೆ ಎಂದು ಹೇಳಿದೆ. ಇರಾಕ್, ಸೌದಿ ಅರೇಬಿಯಾ, ಯುಎಇ ಮತ್ತು ರಷ್ಯಾವು ಭಾರತಕ್ಕೆ ತೈಲ ಪೂರೈಸುವ ಪ್ರಮುಖ ರಾಷ್ಟ್ರಗಳಾಗಿವೆ.

'2022–23ರ ಹಣಕಾಸು ವರ್ಷದಲ್ಲಿ ಭಾರತದ ಸರ್ಕಾರಿ ಸ್ವಾಮ್ಯದ ಯಾವ ಕಂಪನಿಯೂ ಆಮದು ಮಾಡಿದ ಕಚ್ಚಾ ತೈಲಕ್ಕೆ ರೂಪಾಯಿಯಲ್ಲಿ ಹಣ ಪಾವತಿಸಿಲ್ಲ. ಯುಎಇಯ ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ (ಎಡಿಎನ್‌ಒಸಿ) ಸೇರಿದಂತೆ ಕಚ್ಚಾ ತೈಲ ಪೂರೈಕೆದಾರರು ಭಾರತದ ಕರೆನ್ಸಿ ಸ್ವೀಕರಿಸಲು ಹಿಂದೇಟು ಹಾಕಿದ್ದಾರೆ. ರೂಪಾಯಿಯನ್ನು ಸ್ವದೇಶದ ಕರೆನ್ಸಿಗೆ ಪರಿವರ್ತಿಸುವಾಗ ಅಧಿಕ ವೆಚ್ಚವಾಗುತ್ತದೆ ಎಂಬ ಕಾರಣ ಮುಂದಿಟ್ಟಿದ್ದಾರೆ. ಅದೇ ರೀತಿ, ರೂಪಾಯಿ ಮೌಲ್ಯ ಏರಿಳಿತವಾಗುವುದರ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ' ಎಂದು ತೈಲ ಸಚಿವಾಲಯ ಹೇಳಿದೆ.

'ಆಮದು ಮಾಡಿದ ಕಚ್ಚಾತೈಲದ ಪಾವತಿಯನ್ನು ರೂಪಾಯಿಯಲ್ಲಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ತೈಲ ಪೂರೈಕೆದಾರರು ಇದಕ್ಕೆ ಸಂಬಂಧಿಸಿದ ಮಾನದಂಡಗಳನ್ನು ಒಪ್ಪಿಕೊಳ್ಳುವುದು ಅಗತ್ಯ' ಎಂದು ಸಚಿವಾಲಯ ವಿವರಿಸಿದೆ.

'ಸದ್ಯ, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮತ್ತು ಇತರ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಭಾರತದ ಕರೆನ್ಸಿಯಲ್ಲಿ ಕಚ್ಚಾ ತೈಲ ಆಮದು ಮಾಡಿಕೊಳ್ಳುವ ಸಂಬಂಧ ಯಾವುದೇ ತೈಲ ಪೂರೈಕೆದಾರರ ಜತೆಯೂ ಒಪ್ಪಂದ ಮಾಡಿಕೊಂಡಿಲ್ಲ' ಎಂದು ಮಾಹಿತಿ ನೀಡಿದೆ.

ಇನ್ಫೊಸಿಸ್ ಜತೆ ಒಪ್ಪಂದ ಕೊನೆಗೊಳಿಸಿದ ಜಾಗತಿಕ ಕಂಪನಿ

ನವದೆಹಲಿ (ಪಿಟಿಐ): ಜಾಗತಿಕ ಕಂಪನಿಯೊಂದು ತನ್ನೊಂದಿಗೆ ₹12 ಸಾವಿರ ಕೋಟಿಗೂ ಹೆಚ್ಚು ಮೊತ್ತದ ಬಹು ವರ್ಷಗಳ ಒಪ್ಪಂದವನ್ನು ಕೊನೆಗೊಳಿಸಲು ನಿರ್ಧರಿಸಿದೆ ಎಂದು ಇನ್ಫೊಸಿಸ್ ಹೇಳಿದೆ.

ಡಿಜಿಟಲ್ ಸೇವೆಗಳು, ಆಧುನೀಕರಣ ಮತ್ತು ವ್ಯಾಪಾರ ಕಾರ್ಯಾಚರಣೆ ಸೇವೆಗಳನ್ನು ಒದಗಿಸಲು ಜಾಗತಿಕ ಕಂಪನಿಯೊಂದರ ಜೊತೆಗೆ ಒಪ್ಪಂದ ಮಾಡಿಕೊಂಡಿರುವುದಾಗಿ ಇನ್ಫೊಸಿಸ್ 2023ರ ಸೆಪ್ಟೆಂಬರ್ 14ರಂದು ಇನ್ಫೊಸಿಸ್ ಘೋಷಿಸಿತ್ತು.

ಜಾಗತಿಕ ಕಂಪನಿಯು ಈಗ, ಈ ಒಪ್ಪಂದವನ್ನು ಕೊನೆಗೊಳಿಸಲು ನಿರ್ಧರಿಸಿದೆ ಎಂದು ಷೇರುಪೇಟೆಗೆ ಇನ್ಫೊಸಿಸ್ ತಿಳಿಸಿದೆ. 15 ವರ್ಷಗಳ ಒಪ್ಪಂದ ಇದಾಗಿದ್ದು, ಇದರ ಮೌಲ್ಯ ₹12,475 ಕೋಟಿ ಎಂದು ಅಂದಾಜಿಸಲಾಗಿತ್ತು ಎಂದು ಅದು ಹೇಳಿದೆ.

ಚಾವಣಿ ಕುಸಿತ: ಒಂದೇ ಕುಟುಂಬದ 9 ಮಂದಿ ಸಾವು

ಪೇಶಾವರ (ಪಿಟಿಐ): ಶಾರ್ಟ್ ಸರ್ಕೀಟ್‌ನಿಂದಾಗಿ ಬೆಂಕಿ ಅವಘಡ ಸಂಭವಿಸಿ ಮನೆಯ ಚಾವಣಿ ಕುಸಿದ ಪರಿಣಾಮ ಮಹಿಳೆ ಮತ್ತು 8 ಮಕ್ಕಳು ಮೃತಪಟ್ಟ ಘಟನೆ ಪಾಕಿಸ್ತಾನದ ಖೈಬರ್ ಪಂಖ್ತುಂಖ್ವ ಪ್ರಾಂತ್ಯದಲ್ಲಿ ನಡೆದಿದೆ.

'ಪಖ್ತುಂಖ್ವ ಪ್ರಾಂತ್ಯದ ಅಬೋಟಾಬಾದ್ ಜಿಲ್ಲೆಯ ತಹರಿ ಗ್ರಾಮದಲ್ಲಿ ದುರ್ಘಟನೆ ಸಂಭವಿಸಿದ್ದು, ನಾಲ್ವರು ಹೆಣ್ಣುಮಕ್ಕಳು ಸೇರಿದಂತೆ ಒಂದೇ ಕುಟುಂಬದ 9 ಮಂದಿ ಮೃತಪಟ್ಟಿದ್ದಾರೆ. ಅವಶೇಷಗಳಡಿ ಸಿಲುಕಿದ್ದ ಶವಗಳನ್ನು ಸ್ಥಳೀಯರು ಹೊರತೆಗೆದಿದ್ದಾರೆ' ಎಂದು ರಕ್ಷಣಾ ಸಿಬ್ಬಂದಿ ತಿಳಿಸಿದ್ದಾರೆ.

ಬಾಂಗ್ಲಾದೇಶ: ವಿಪಕ್ಷಗಳಿಂದ ರಸ್ತೆ, ರೈಲು ತಡೆ

ಢಾಕಾ (ಪಿಟಿಐ): ಪ್ರಧಾನಿ ಶೇಖ್ ಹಸೀನಾ ಅವರು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ವಿರೋಧ ಪಕ್ಷ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಹಾಗೂ ಮಿತ್ರಪಕ್ಷಗಳು ಭಾನುವಾರ ರಸ್ತೆ ಮತ್ತು ರೈಲು ತಡೆ ನಡೆಸಿದ ಕಾರಣ, ದೇಶದಾದ್ಯಂತ ಭದ್ರತೆಗಾಗಿ ಬಾರ್ಡರ್ ಗಾರ್ಡ್ ಬಾಂಗ್ಲಾದೇಶದ (ಬಿಜಿಬಿ) 147 ತುಕಡಿಗಳನ್ನು ನಿಯೋಜಿಸಲಾಗಿತ್ತು.

ದೇಶದ ಸಂವಿಧಾನವನ್ನು ತಿದ್ದುಪಡಿ ಮಾಡಿ, ಪಕ್ಷೇತರ ಹಂಗಾಮಿ ಸರ್ಕಾರ ರಚಿಸಬೇಕು ಮತ್ತು ಅದರ ಮೇಲ್ವಿ-ಚಾರಣೆಯಲ್ಲಿ ನ್ಯಾಯಸಮ್ಮತವಾದ ಚುನಾವಣೆ ನಡೆಸಬೇಕು ಎಂದು ವಿರೋಧ ಪಕ್ಷ ಆಗ್ರಹಿಸಿದೆ. ಜನವರಿ 7ರಂದು ಬಾಂಗ್ಲಾದೇಶದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆ.

ರಾಜಧಾನಿ ಢಾಕಾದಲ್ಲಿ ಬಿಎನ್‌ಪಿ ಮತ್ತು ಅದರ ಮಿತ್ರ ಪಕ್ಷಗಳು ಪ್ರತ್ಯೇಕವಾಗಿ ಪ್ರತಿಭಟನಾ ಮೆರವಣಿಗೆ-ಗಳನ್ನು ನಡೆಸಿವೆ.

ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನ-ಕಾರರು, ವಶಕ್ಕೆ ಪಡೆದಿರುವ ವಿರೋಧ ಪಕ್ಷದ ನಾಯಕರು ಮತ್ತು ಹೋರಾಟಗಾರರನ್ನು ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.



ಇಸ್ರೇಲ್ ಮತ್ತು ಪ್ಯಾಲೆಸ್ಟೀನ್‌ನ ಹಮಾಸ್ ಬಂಡುಕೋರರ ನಡುವೆ ನಡೆಯುತ್ತಿರುವ ಯುದ್ಧದ ಕಾರಣ ಇಸ್ರೇಲ್ ಯುದ್ಧ ನೌಕೆಗಳು ದಕ್ಷಿಣ ಗಾಜಾ ಪಟ್ಟಿಯಲ್ಲಿರುವ ರಫಾ ಬಳಿ ಮೆಡಿಟರೇನಿಯನ್ ಸಮುದ್ರದಲ್ಲಿ ಭಾನುವಾರ ಗಸ್ತು ನಿರತವಾಗಿದ್ದವು
– ಎಎಫ್‌ಪಿ ಚಿತ್ರ

ಇಸ್ರೇಲ್‌ನ 14 ಯೋಧರ ಸಾವು

ಟೆಲ್‌ಅವೀವ್(ಎಪಿ): ಗಾಜಾಪಟ್ಟಿಯಲ್ಲಿ ಶುಕ್ರವಾರ ಮತ್ತು ಶನಿವಾರ ಇಸ್ರೇಲ್ ಸೇನೆಯ 14 ಯೋಧರನ್ನು ಹಮಾಸ್ ಬಂಡುಕೋರರು ಹತ್ಯೆ ಮಾಡಿದ್ದಾರೆ ಎಂದು ಇಸ್ರೇಲ್ ಭಾನುವಾರ ಆರೋಪಿಸಿದೆ.

ಯೋಧರು ಇದ್ದ ವಾಹನದ ಮೇಲೆ ನಡೆದ ಕ್ಷಿಪಣಿ ದಾಳಿಯಲ್ಲಿ ನಾಲ್ವರು ಯೋಧರು ಸತ್ತಿದ್ದಾಖಎ. ಉಳಿದ 10 ಯೋಧರು ಪ್ರತ್ಯೇಕ ದಾಳಿಗಳಲ್ಲಿ ಹುತಾ-ತ್ಮರಾಗಿದ್ದಾರೆ. ಈ ಮೂಲಕ ಇಸ್ರೇಲ್–ಹಮಾಸ್ ಬಂಡುಕೋರರ ನಡುವಿನ ಯುದ್ಧದಲ್ಲಿ ಈವರೆಗೆ 153 ಸೈನಿಕರು ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಗಾಜಾದ ಎರಡನೇ ಅತಿದೊಡ್ಡ ನಗರವಾಗಿರುವ ಖಾನ್ ಯೂನಿಸ್ ಪ್ರದೇಶದಲ್ಲಿ ಹಮಾಸ್ ನಾಯಕರು ಅಡಗಿದ್ದಾರೆ ಎಂಬ ಕಾರಣಕ್ಕೆ ಗಾಜಾದ ದಕ್ಷಿಣ ಮತ್ತು ಉತ್ತರ ಭಾಗದಲ್ಲಿ ದಾಳಿ ಮುಂದುವರಿಸಲಾಗಿದೆ ಎಂದು ಇಸ್ರೇಲ್ ಸೇನೆಯ ವಕ್ತಾರ ತಿಳಿಸಿದ್ದಾರೆ.

ಈ ನಡುವೆ, ಭಾನುವಾರ ಸಚಿವ ಸಂಪುಟದ ಸಭೆ ನಡೆಸಿದ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು, 'ಈ ಯುದ್ಧಕ್ಕೆ ನಾವು ಹೆಚ್ಚು ಬೆಲೆ ತೆರುವಂತಾಗಿದೆ. ಆದರೆ, ಯುದ್ಧ ಮುಂದುವರಿಸುವುದನ್ನು ಹೊರತುಪಡಿಸಿ, ಬೇರೆ ಆಯ್ಕೆಗಳಿಲ್ಲ. ನಾವು ಗೆಲ್ಲುವವರೆಗೆ, ನಮ್ಮ ಗುರಿ ಮುಟ್ಟುವವರೆಗೆ ನಮ್ಮೆಲ್ಲ ಶಕ್ತಿಗಳನ್ನು ವಿನಿಯೋಗಿಸಿ, ಯುದ್ಧವನ್ನು ಮುಂದು-ವರಿಸುತ್ತೇವೆ' ಎಂದು ಹೇಳಿದ್ದಾರೆ.

ಶ್ರೀಲಂಕಾ: 14,000 ಮಂದಿ ಬಂಧನ

ಕೊಲಂಬೊ (ಪಿಟಿಐ): ದ್ವೀಪ ರಾಷ್ಟ್ರದಲ್ಲಿ ವ್ಯಾಪಕವಾಗಿರುವ ಡ್ರಗ್ಸ್ ಸಾಗಣೆ ಮತ್ತು ಮಾರಾಟ ಜಾಲ ನಿಗ್ರಹಿಸುವುದಕ್ಕಾಗಿ ಒಂದು ವಾರ ನಡೆಸಿದ ಕಾರ್ಯಾಚರಣೆ-ಯಲ್ಲಿ ಸುಮಾರು 14,000 ಜನ ಶಂಕಿತರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದರು.

'ಡಿ. 17ರಿಂದ 24ರವರೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಗಿತ್ತು' ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಬಂಧಿತರ ಪೈಕಿ 174 ಮಂದಿ ಕಾನೂನುಬಾಹಿರ ಸ್ವತ್ತು-ಗಳನ್ನು ಸ್ವಾಧೀನಕ್ಕೆ ಪಡೆದಿರುವ ಆರೋಪದ ಮೇಲೆ ವಿಚಾರಣೆ ಎದುರಿಸುತ್ತಿದ್ದಾರೆ. ಜೊತೆಗೆ 1,097 ಮಾದಕ ವ್ಯಸನಿಗಳ-ನ್ನು ಪುನರ್ವಸತಿ ಕೇಂದ್ರಗಳಿಗೆ ಕಳುಹಿಸಲಾಗಿದೆ ಎಂದು ತಿಳಿಸಿದೆ.

ಎಫ್‌ಪಿಐಗಳಿಂದ ಈ ವರ್ಷ ₹1.62 ಲಕ್ಷ ಕೋಟಿ ಷೇರು ಖರೀದಿ

ಎಫ್‌ಪಿಐ: ₹57,300 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ರಾಜಕೀಯ ಸ್ಥಿರತೆ, ದೃಢವಾದ ಆರ್ಥಿಕ ಬೆಳವಣಿಗೆ ಮತ್ತು ಅಮೆರಿಕ ಬಾಂಡ್ ಇಳುವರಿಯಲ್ಲಿ ಸ್ಥಿರವಾದ ಇಳಿಕೆಯಿಂದಾಗಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಈ ತಿಂಗಳವರೆಗೆ ದೇಶದ ಷೇರುಮಾರುಕಟ್ಟೆಯಲ್ಲಿ ₹57,300 ಕೋಟಿಯಷ್ಟು ಹೂಡಿಕೆ ಮಾಡಿದ್ದಾರೆ.

ಇದರೊಂದಿಗೆ ಎಫ್‌ಪಿಐಗಳ ಒಟ್ಟು ಹೂಡಿಕೆ ಈ ವರ್ಷ ₹1.62 ಲಕ್ಷ ಕೋಟಿಯಷ್ಟು ಆಗಿದೆ.

ಅಮೆರಿಕ ಬಡ್ಡಿ ದರಗಳಲ್ಲಿ ಇಳಿಕೆಯಾಗುವ ನಿರೀಕ್ಷೆ ಮತ್ತು 2024ರಲ್ಲಿ ಎಫ್‌ಪಿಐಗಳು ತಮ್ಮ ಖರೀದಿಗಳನ್ನು ಹೆಚ್ಚಿಸುವ ಸಾಧ್ಯತೆಯಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.



ಅಂಕಿ ಅಂಶಗಳ ಪ್ರಕಾರ, ಎಫ್‌ಪಿಐಗಳು ಈ ತಿಂಗಳಲ್ಲಿ (ಡಿಸೆಂಬರ್ 22 ರವರೆಗೆ) ಭಾರತೀಯ ಷೇರುಗಳಲ್ಲಿ ₹57,313 ಕೋಟಿಗಳಷ್ಟು ನಿವ್ವಳ ಹೂಡಿಕೆ ಮಾಡಿದ್ದಾರೆ. ಈ ವರ್ಷದಲ್ಲೇ ಇದು ಅತಿ ಹೆಚ್ಚು ಮಾಸಿಕ ಒಳಹರಿವು ಆಗಿದೆ.

ಅಕ್ಟೋಬರ್‌ನಲ್ಲಿ ನಿವ್ವಳ ಹೂಡಿಕೆ ₹9 ಸಾವಿರ ಕೋಟಿ ಆಗಿತ್ತು. ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಸಾಗರೋತ್ತರ ಹೂಡಿಕೆದಾರರು ₹39,300 ಕೋಟಿ ಹಿಂತೆಗೆದುಕೊಂಡಿದ್ದರು ಎಂದು ಠೇವಣಿದಾರರ ಅಂಕಿ ಅಂಶಗಳು ತಿಳಿಸಿವೆ.

> ಭಾರತದ ಮಾರುಕಟ್ಟೆಯು ಚೈತನ್ಯಶೀಲವಾಗಿದೆ. ಅಂದಾಜನ್ನೂ ಮೀರಿ ಜಿಡಿಪಿ ಬೆಳವಣಿಗೆ ಇದೆ. ತಯಾರಿಕಾ ವಲಯವು ಬೆಳೆಯುತ್ತಿದೆ. ಇದು ಹೂಡಿಕೆದಾರರಲ್ಲಿ ಭರವಸೆ ಮೂಡಿಸಿದೆ
>
> **ಮಯಾಂಕ್ ಮೆಹ್ರಾ,** ಕ್ರೇವಿಂಗ್ ಆಲ್ಫಾ ವ್ಯವಸ್ಥಾಪಕ


ರಾಜಕೀಯ ಸ್ಥಿರತೆ ಮತ್ತು ಭಾರತದ ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿರುವ ಸಕಾರಾತ್ಮಕ ಭಾವನೆಗಳು ಎಫ್‌ಪಿಐ ಒಳಹರಿವು ಹೆಚ್ಚಾಗಲು ಕೊಡುಗೆ ನೀಡಿದ ಅಂಶಗಳಾಗಿವೆ ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ. ದೇಶದ ಸ್ಥಿರ ಮತ್ತು ದೃಢವಾದ ಆರ್ಥಿಕತೆಯು ಕಾರ್ಪೊರೇಟ್ ಗಳಿಕೆಗಳು ಮತ್ತು ಆರಂಭಿಕ ಸಾರ್ವಜನಿಕ ಕೊಡುಗೆಗಳಿಂದ (ಐಪಿಒ), ಭಾರತದಲ್ಲಿ ಹೂಡಿಕೆ ಅವಕಾಶಗಳನ್ನು ಹುಡುಕಲು ವಿದೇಶಿ ಹೂಡಿಕೆದಾರರನ್ನು ಆಕರ್ಷಿಸಿದೆ ಎಂದು ಹೇಳಿದ್ದಾರೆ.

ಬಾಂಡ್‌ಗಳಿಗೆ ಸಂಬಂಧಿಸಿದಂತೆ ಪರಿಶೀಲನೆಯ ಅವಧಿಯಲ್ಲಿ ಸಾಲದ ಮಾರುಕಟ್ಟೆಯು ₹15,545 ಕೋಟಿ ಆಗಿದೆ. ನವೆಂಬರ್‌ನಲ್ಲಿ ₹14,860 ಕೋಟಿ ಮತ್ತು ಅಕ್ಟೋಬರ್‌ನಲ್ಲಿ 6,381 ಕೋಟಿ ಒಳಹರಿವನ್ನು ಸ್ವೀಕರಿಸಿದೆ ಎಂದು ಅಂಕಿ–ಅಂಶಗಳು ತಿಳಿಸಿವೆ.

ಲೋಕಸಭಾ ಚುನಾವಣೆಯತ್ತ ಗಮನ ಹರಿಸಲು ಬಿಜೆಪಿ ಸಂಸದ ಬ್ರಿಜ್‌ಭೂಷಣ್ ನಿರ್ಧಾರ

‘ಕ್ರೀಡೆಯೊಂದಿಗಿನ ಸಂಬಂಧ ಕಳಚಿರುವೆ’

ನವದೆಹಲಿ (ಪಿಟಿಐ): ‘ಕ್ರೀಡೆಯಿಂದ ನಿವೃತ್ತಿ ಪಡೆಯುತ್ತಿದ್ದೇನೆ. ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆ ಸೇರಿದಂತೆ ಹಲವು ಜವಾಬ್ದಾರಿ ಹೊಂದಿರುವುದರಿಂದ ಹೊಸ ಆಡಳಿತ ಮಂಡಳಿ ಈಗ ಅಧಿಕಾರ ವಹಿಸಿಕೊಳ್ಳಲಿದೆ’ ಎಂದು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಮಾಜಿ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ತಿಳಿಸಿದ್ದಾರೆ.



ಬ್ರಿಜ್‌ಭೂಷಣ್ ಸಿಂಗ್ —ಪಿಟಿಐ ಚಿತ್ರ

ಮುಂದಿನ ಆದೇಶದವರೆಗೆ ಕ್ರೀಡಾ ಸಚಿವಾಲಯ ಡಬ್ಲ್ಯುಎಫ್‌ಐ ಅನ್ನು ಅಮಾನತುಗೊಳಿಸಿದ ಬಳಿಕ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಬ್ರಿಜ್‌ಭೂಷಣ್ ಶರಣ್ ಸಿಂಗ್ ಭೇಟಿಯಾಗಿ ಚರ್ಚಿಸಿದರು. ಬಳಿಕ ಈ ಹೇಳಿಕೆ ನೀಡಿದ್ದಾರೆ.

15 ಮತ್ತು 19 ವರ್ಷದೊಳಗಿನವರ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್ ಆಯೋಜನೆಗೆ ಸರಿಯಾದ ಕಾರ್ಯ ವಿಧಾನ ಅನುಸರಿಸದೆ ಮತ್ತು ಸಿದ್ಧತೆಗಾಗಿ ಕುಸ್ತಿಪಟುಗಳಿಗೆ ಸಾಕಷ್ಟು ಸೂಚನೆ ನೀಡದೆ ಆತುರದಲ್ಲಿ ದಿನಾಂಕ ಘೋಷಣೆ ಮಾಡಿದೆ ಎಂದು ಕ್ರೀಡಾ ಸಚಿವಾಲಯ ಹೊರಡಿಸಿರುವ ಅಮಾನತು ಆದೇಶದಲ್ಲಿ ಉಲ್ಲೇಖಿಸಿದೆ.

‘ನಾನು 12 ವರ್ಷಗಳ ಕಾಲ ಕುಸ್ತಿಗೆ ಸೇವೆ ಸಲ್ಲಿಸಿದ್ದೇನೆ. ಒಳ್ಳೆಯದು ಅಥವಾ ಕೆಟ್ಟದ್ದನ್ನು ಸಮಯ ಮಾತ್ರ ಹೇಳುತ್ತದೆ. ನಾನು ಕುಸ್ತಿಯಿಂದ ನಿವೃತ್ತಿ ಪಡೆದಿದ್ದೇನೆ. ಕ್ರೀಡೆಯೊಂದಿಗಿನ ನನ್ನ ಸಂಬಂಧ ಮುರಿಯುತ್ತಿದ್ದೇನೆ. ಕುಸ್ತಿಗೆ ಸಂಬಂಧಿಸಿದಂತೆ ಯಾವ ನಿರ್ಧಾರ ತೆಗೆದುಕೊಳ್ಳಬೇಕು ಎಂಬುದನ್ನು ಹೊಸ ಮಂಡಳಿ ಮಾಡಲಿದೆ. ಸರ್ಕಾರ ದೊಂದಿಗೆ ಸಂಪರ್ಕ ಸಾಧಿಸಬೇಕೇ ಅಥವಾ ಕಾನೂನು ಪ್ರಕ್ರಿಯೆ ನಿರ್ವಹಿಸಬೇಕೇ, ಆ ನಿರ್ಧಾರಗಳನ್ನು ಚುನಾಯಿತ ಸದಸ್ಯರು ತೆಗೆದುಕೊಳ್ಳುತ್ತಾರೆ. ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದು, ನಾನು ಮುಂದೆ ಸಾಗಬೇಕಾಗಿದೆ’ ಎಂದು ಹೇಳಿದರು.

ಯುವ ಆಟಗಾರರು ತಮ್ಮ ವೃತ್ತಿಜೀವನದ ಒಂದು ಅಮೂಲ್ಯ ವರ್ಷ ಕಳೆದುಕೊಳ್ಳುವುದನ್ನು ಬಯಸದ ಕಾರಣ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಸುವ ನಿರ್ಧಾರ ಅವಸರದಲ್ಲಿ ತೆಗೆದುಕೊಳ್ಳಲಾಗಿದೆ ಎಂದು ಬ್ರಿಜ್‌ಭೂಷಣ್ ಸ್ಪಷ್ಟಪಡಿಸಿದರು.

ಕಡಿಮೆ ಸಮಯದಲ್ಲಿ ಕ್ರೀಡಾಕೂಟಕ್ಕೆ ಎಲ್ಲಾ ರಾಜ್ಯ ಸಂಸ್ಥೆಗಳು ಆತಿಥ್ಯ ವಹಿಸಲು ನಿರಾಕರಿಸಿದ ಕಾರಣ ನ್ಯಾಷನಲ್ಸ್ ಅನ್ನು ನಂದಿನಿ ನಗರದಲ್ಲಿ ಆಯೋಜಿಸಲು ನಿರ್ಧರಿಸಲಾಯಿತು. ಇದಕ್ಕೆ ಎಲ್ಲಾ 25 ರಾಜ್ಯ ಸಂಸ್ಥೆಗಳು ಲಿಖಿತವಾಗಿ ಒಪ್ಪಿಗೆ ನೀಡಿವೆ ಎಂದರು.

‘ಮಕ್ಕಳು ಒಂದು ವರ್ಷ ಕಳೆದುಕೊಳ್ಳದಂತೆ ದೆಹಲಿ ಅಥವಾ ಅವರು ಬಯಸುವ ಯಾವುದೇ ಸ್ಥಳದಲ್ಲಿ ಪಂದ್ಯಾವಳಿಯನ್ನು ತಮ್ಮ ಮೇಲ್ವಿಚಾರಣೆಯಲ್ಲಿ ಆಯೋಜಿಸುವಂತೆ ಸರ್ಕಾರ ಮತ್ತು ಕ್ರೀಡಾ ಸಚಿವಾಲಯಕ್ಕೆ ಮನವಿ ಮಾಡುತ್ತೇನೆ’ ಎಂದು ಅವರು ಹೇಳಿದರು.

ಬಿಜೆಪಿ ಸಂಸದರಾಗಿರುವ ಬ್ರಿಜ್‌ಭೂಷಣ್ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಭೇಟಿ ವೇಳೆ ಡಬ್ಲ್ಯುಎಫ್‌ಐ ನೂತನ ಆಡಳಿತ ಮಂಡಳಿ ಅಮಾನತುಗೊಳಿಸಿರುವ ಕುರಿತು ಚರ್ಚೆ ನಡೆದಿಲ್ಲ ಎಂದರು.

‘ಅವರು (ನಡ್ಡಾ) ನನ್ನ ನಾಯಕ. ಅವರನ್ನು ಭೇಟಿಯಾಗುತ್ತಲೇ ಇರುತ್ತೇನೆ. ಆದರೆ, ಇದಕ್ಕೂ ಕುಸ್ತಿ ವಿಷಯಕ್ಕೂ ಯಾವುದೇ ಸಂಬಂಧವಿಲ್ಲ’ ಎಂದು ಬ್ರಿಜ್ ಭೂಷಣ್ ಹೇಳಿದರು.

ಸಂಜಯ್ ಸಿಂಗ್ ವಿರುದ್ಧ ಕುಸ್ತಿಪಟುಗಳು ಏಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದು ಪ್ರಶ್ನಿಸಿದ ಬ್ರಿಜ್‌ಭೂಷಣ್, ‘ಅವರು ನನ್ನ ಸಂಬಂಧಿಯಲ್ಲ’ ಎಂದರು.

ನಿಯಮ ಉಲ್ಲಂಘಿಸಿಲ್ಲ: ಸಂಜಯ್



ನವದೆಹಲಿ (ಪಿಟಿಐ): ‘ಡಬ್ಲ್ಯುಎಫ್‌ಐನ ಹೊಸ ಆಡಳಿತ ಮಂಡಳಿ ನಿರ್ಧಾರ ಕೈಗೊಳ್ಳುವಾಗ ಯಾವುದೇ ನಿಯಮಗಳನ್ನು ಉಲ್ಲಂಘಿಸಿಲ್ಲ ಎಂದು ಸರ್ಕಾರಕ್ಕೆ ವಿವರಿಸುವ ಮೂಲಕ ಅಮಾನತು ರದ್ದುಗೊಳಿಸುವಂತೆ ಕೋರಲಾಗುವುದು. ಒಂದು ವೇಳೆ ಸಮಸ್ಯೆ ಪರಿಹರಿಸದಿದ್ದರೆ ಕಾನೂನು ಕ್ರಮದ ಬಗ್ಗೆ ಪರಿಶೀಲಿಸಲಾಗುವುದು’ ಎಂದು ಭಾರತ ಕುಸ್ತಿ ಫಡರೇಷನ್‌ನ ಅಮಾನತುಗೊಂಡ ಸಮಿತಿ ಅಧ್ಯಕ್ಷ ಸಂಜಯ್ ಸಿಂಗ್ ತಿಳಿಸಿದ್ದಾರೆ.

‘ಕ್ರೀಡಾ ಸಚಿವರ ಭೇಟಿಗೆ ಸಮಯ ಕೋರಿದ್ದೇವೆ. ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥ ಆಗದಿದ್ದರೆ ಕಾನೂನು ಕ್ರಮದ ಬಗ್ಗೆ ಯೋಚಿಸಲಾಗುವುದು’ ಎಂದರು.

‘ನಿರ್ಧಾರ ತೆಗೆದುಕೊಳ್ಳುವಾಗ ನಿಯಮಗಳನ್ನು ಪಾಲಿಸಿದ್ದೇವೆ ಎಂಬುದನ್ನು ವಿವರಿಸುತ್ತೇವೆ. ಅದಕ್ಕೆ ಪುರಾವೆಗಳನ್ನು ಒದಗಿಸುತ್ತೇವೆ. ಯಾವುದೇ ನಿರ್ಧಾರಗಳನ್ನು ತೆಗೆದುಕೊಂಡರೂ ಅದನ್ನು ಒಮ್ಮತದಿಂದ ತೆಗೆದುಕೊಳ್ಳಲಾಗುತ್ತಿತ್ತು. ಇದು ನನ್ನ ವೈಯಕ್ತಿಕ ನಿರ್ಧಾರವಲ್ಲ. 24 ರಾಜ್ಯ ಸಂಸ್ಥೆಗಳು ಪ್ರಮಾಣಪತ್ರ ನೀಡಿವೆ ಮತ್ತು ನಮಗೆ ಇ-ಮೇಲ್‌ಗಳು ಬಂದಿವೆ. ಎಲ್ಲವನ್ನೂ ಲಿಖಿತ ಹೊಂದಿದ್ದೇವೆ’ ಎಂದರು.

ಡಬ್ಲ್ಯುಎಫ್‌ಐ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧದ ಆಂದೋಲನದ ಪ್ರಮುಖರಲ್ಲಿ ಒಬ್ಬರಾದ ಸಾಕ್ಷಿ ಮಲಿಕ್ ಡಬ್ಲ್ಯುಎಫ್‌ಐ ಅಮಾನತು ಅನ್ನು ಸ್ವಾಗತಿಸಿದರು.

‘ಇದು ಒಳ್ಳೆಯದನ್ನು ಮಾಡುವತ್ತ ಮೊದಲ ಹೆಜ್ಜೆಯಾಗಿದೆ. ಯಾವ ಕಾರಣಕ್ಕಾಗಿ ಹೋರಾಡುತ್ತಿದ್ದೇವೆ ಎಂಬುದನ್ನು ಸರ್ಕಾರ ಹೆಚ್ಚು ಅರ್ಥಮಾಡಿಕೊಳ್ಳುತ್ತದೆ ಎಂದು ಭಾವಿಸುತ್ತೇನೆ. ಫೆಡರೇಷನ್‌ಗೆ ಮಹಿಳೆ ಅಧ್ಯಕ್ಷರಾಗಿದ್ದರೆ ಮಹಿಳಾ ಕುಸ್ತಿಪಟುಗಳ ಸುರಕ್ಷತೆಗೆ ಒಳ್ಳೆಯದು. ಇದು ದೇಶದ ಸಹೋದರಿಯರು ಮತ್ತು ಹೆಣ್ಣುಮಕ್ಕಳ ಹೋರಾಟವಾಗಿತ್ತು’ ಎಂದು ಸಾಕ್ಷಿ ಹೇಳಿದರು.

ಪ್ರಶಸ್ತಿ ಹಿಂಪಡೆಯಲ್ಲ: ಬಜರಂಗ್ ಪೂನಿಯಾ



ಬ್ರಿಜ್‌ಭೂಷಣ್ ನಿಕಟವರ್ತಿ ಎನ್ನಲಾದ ಸಂಜಯ್ ಸಿಂಗ್ ಡಬ್ಲ್ಯುಎಫ್‌ಐ ಅಧ್ಯಕ್ಷರಾಗಿ ಆಯ್ಕೆ ಆಗಿರುವುದನ್ನು ವಿರೋಧಿಸಿ ಶುಕ್ರವಾರ ಪದ್ಮಶ್ರೀ ಪ್ರಶಸ್ತಿಯನ್ನು ಸರ್ಕಾರಕ್ಕೆ ಹಿಂದಿರುಗಿಸಿದ್ದ ಕುಸ್ತಿಪಟು ಬಜರಂಗ್ ಪೂನಿಯಾ, ತಮ್ಮ ಪ್ರಶಸ್ತಿಯನ್ನು ಹಿಂಪಡೆಯುವುದಿಲ್ಲ ಎಂದು ಹೇಳಿದರು.

‘ನಾನು ಪ್ರಶಸ್ತಿ ಹಿಂದಿರುಗಿಸಿದ್ದೇನೆ. ಅದನ್ನು ಹಿಂಪಡೆಯಲು ಹೋಗುವುದಿಲ್ಲ. ಸಹೋದರಿಯರು ಮತ್ತು ಹೆಣ್ಣುಮಕ್ಕಳ ಗೌರವವು ಯಾವುದೇ ಪ್ರಶಸ್ತಿಗಿಂತ ದೊಡ್ಡದು. ಏನಾಗುತ್ತಿದೆ ಎಂಬುದನ್ನು ನೀವೆಲ್ಲರೂ ನೋಡಿದ್ದೀರಿ. ನ್ಯಾಯ ದೊರೆತ ಬಳಿಕ ಅದನ್ನು ಹಿಂತೆಗೆದುಕೊಳ್ಳುವ ಬಗ್ಗೆ ಯೋಚಿಸುತ್ತೇನೆ. ಈ ವಿಷಯವು ನ್ಯಾಯಾಲಯದಲ್ಲಿದೆ ಮತ್ತು ನ್ಯಾಯಕ್ಕಾಗಿ ಕಾಯುತ್ತಿದ್ದೇವೆ’ ಎಂದು ಬಜರಂಗ್ ಹೇಳಿದರು.

ಪ್ರಧಾನಿಯನ್ನು ಭೇಟಿ ಮಾಡಲು ಶುಕ್ರವಾರ ಕರ್ತವ್ಯ ಪಥಕ್ಕೆ ತೆರಳಿದ ಬಜರಂಗ್ ಪೂನಿಯಾ ಅವರನ್ನು ಪೊಲೀಸರು ತಡೆದು ವಾಪಸ್ ಕಳುಹಿಸಿದರು. ಆದರೆ, ಬಜರಂಗ್ ಅವರು ಪ್ರಧಾನಿಗೆ ಬರೆದ ಪತ್ರದ ಜತೆ ಪ್ರಶಸ್ತಿ ಪದಕವನ್ನು ಫುಟ್‌ಪಾತ್‌ನಲ್ಲಿ ಇಟ್ಟು ತೆರಳಿದ್ದರು.



ಸ್ಪೀಡ್ ಜೂನಿಯರ್ ಬಾಲಕರ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಜಾರ್ಖಂಡ್ ಪೂರ್ವ ವಿಭಾಗದ ಭೋಜ್ ಬಿರುವಾ (ಎಡ) ಮತ್ತು ಸ್ಪೀಡ್ ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಚಿನ್ನ ಗೆದ್ದ ಜಾರ್ಖಂಡ್ ಪೂರ್ವ ವಿಭಾಗದ ಜೋಗಾ ಪುರ್ತಿ (ಬಲ) ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ರಾಷ್ಟ್ರೀಯ ಕ್ಲೈಂಬಿಂಗ್: ಭರತ್‌ಗೆ ಚಿನ್ನ

ಬೆಂಗಳೂರು: ಬೆಂಗಳೂರು: ಕರ್ನಾಟಕದ ಭರತ್ ಪಿರೇರಾ ಇಲ್ಲಿ ಭಾನುವಾರ ಮುಕ್ತಾಯಗೊಂಡ 27ನೇ ರಾಷ್ಟ್ರೀಯ ಕ್ಲೈಂಬಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪುರುಷರ ಬೌಲ್ಡರ್ ವಿಭಾಗದಲ್ಲಿ ಚಿನ್ನ ಗೆದ್ದರು.

ಸಬ್ ಜೂನಿಯರ್ ಬಾಲಕರ ಸ್ಪರ್ಧೆಯಲ್ಲಿ ಜೆ. ಧನುಷ್ ಬೆಳ್ಳಿ ಗೆದ್ದರೆ, ಅರ್ಶಿಯಾ ಬಾನು ಮಹಿಳಾ ವಿಭಾದಲ್ಲಿ ಬೆಳ್ಳಿ ಗೆದ್ದರು. ಅರುಶಿ ಭಾವೆ ಮತ್ತು ದಕ್ಷಿಣ್ ಮಾಥುರಿಯಾ ಜೂನಿಯರ್ ಬಾಲಕಿಯರ ಮತ್ತು ಜೂನಿಯರ್ ಬಾಲಕರ ಸ್ಪರ್ಧೆಗಳಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಪೂರ್ವ ವಲಯವು ಒಟ್ಟು 14 ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಏಳು ಚಿನ್ನ, ಐದು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳೊಂದಿಗೆ ಪೂರ್ವ ವಲಯವು ಉತ್ತರ ವಲಯಕ್ಕಿಂತ ಒಂಬತ್ತು ಹೆಚ್ಚು ಪದಕಗಳನ್ನು ಗಳಿಸಿದೆ.

ಪೂರ್ವ ವಲಯವು ಸಬ್ ಜೂನಿಯರ್ ಬಾಲಕರ ವಿಭಾಗದಲ್ಲಿ ಎರಡು ಚಿನ್ನ, ಒಂದು ಬೆಳ್ಳಿ ಮತ್ತು ಒಂದು ಕಂಚು, ಸಬ್ ಜೂನಿಯರ್ ಬಾಲಕಿಯರ ವಿಭಾಗದಲ್ಲಿ ತಲಾ ಒಂದು ಚಿನ್ನ ಮತ್ತು ಬೆಳ್ಳಿ, ಜೂನಿಯರ್ ಬಾಲಕರ ವಿಭಾಗದಲ್ಲಿ ಒಂದು ಚಿನ್ನ ಮತ್ತು ಎರಡು ಬೆಳ್ಳಿ, ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಎರಡು ಚಿನ್ನ ಮತ್ತು ಒಂದು ಕಂಚು, ಮಹಿಳಾ ವಿಭಾಗದಲ್ಲಿ ಒಂದು ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿತು. ಪುರುಷರ ವಿಭಾಗದಲ್ಲಿ ಈಶಾನ್ಯ ವಲಯ ಎರಡು ಚಿನ್ನದೊಂದಿಗೆ ಮೂರನೇ ಸ್ಥಾನ ಪಡೆಯಿತು.

‘ಒತ್ತಡಕ್ಕೆ ಮಣಿದ ಕ್ರೀಡಾ ಸಚಿವಾಲಯ’

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಆಡಳಿತ ಸಮಿತಿಯನ್ನು ಅಮಾನತುಗೊಳಿಸುವ ಸರ್ಕಾರದ ನಿರ್ಧಾರವು ಪ್ರತಿಭಟನನಿರತ ಕುಸ್ತಿಪಟುಗಳಿಗೆ ನ್ಯಾಯ ಒದಗಿಸಲು ಸಾಕಾಗುವುದಿಲ್ಲ ಎಂದು ವಿರೋಧ ಪಕ್ಷದ ನಾಯಕರು ಭಾನುವಾರ ಹೇಳಿದ್ದಾರೆ.

ಡಬ್ಲ್ಯುಎಫ್‌ಐ ಮಾಜಿ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ನಿಷ್ಠಾವಂತರಿಗೆ ಚುನಾವಣೆಯಲ್ಲಿ ಸ್ಪರ್ಧಿ ಸಲು ಏಕೆ ಅವಕಾಶ ನೀಡಲಾಯಿತು ಎಂದು ಪ್ರಶ್ನಿಸಿದ್ದಾರೆ.

ಡಬ್ಲ್ಯುಎಫ್‌ಐ ಅಮಾನತುಗೊಳಿಸಿರುವುದು ‘ಪ್ರಹಸನ’. ಇಂತಹ ನಿರ್ಧಾರ ತೆಗೆದುಕೊಳ್ಳುವ ಮೂಲಕ ಆಡಳಿತಾರೂಢ ಬಿಜೆಪಿ ಮಹಿಳಾ ಕುಸ್ತಿಪಟುಗಳಿಗೆ ಸಹಾಯ ಮಾಡು ತ್ತಿಲ್ಲ ಎಂಬ ಆರೋಪದಿಂದ ಮುಕ್ತವಾಗಲು ಸಾಧ್ಯವಿಲ್ಲ ಎಂದು ಶರದ್ ಪವಾರ್ ನೇತೃತ್ವದ ಎನ್‌ಸಿಪಿ ವಕ್ತಾರ ಕ್ಲೈಡ್ ಕ್ರಾಸ್ಟೊ ‘ಎಕ್ಸ್’ನಲ್ಲಿ ಪ್ರಶ್ನಿಸಿದ್ದಾರೆ.

‘ಸಾಕ್ಷಿ ಮಲಿಕ್ ಕುಸ್ತಿಗೆ ವಿದಾಯ ಹೇಳಿರುವುದು ಮತ್ತು ಬಜರಂಗ್ ಪೂನಿಯಾ ಅವರು ಪದ್ಮಶ್ರೀ ಪ್ರಶಸ್ತಿ ಹಿಂದಿರುಗಿಸಿರುವ ಬೆಳವಣಿಗೆಯಿಂದ ಒತ್ತಡಕ್ಕೊಳಗಾಗಿರುವ ಕ್ರೀಡಾ ಸಚಿವಾಲಯ ಈ ನಿರ್ಧಾರ ಕೈಗೊಂಡಿದೆ. ಇದು ಸ್ವಾಗತಾರ್ಹ. ಆದರೆ ಸಂತ್ರಸ್ತರಿಗೆ ನ್ಯಾಯ ಸಿಕ್ಕಿಲ್ಲ’ ಎಂದು ಕಾಂಗ್ರೆಸ್ ಮುಖಂಡ ಉದಿತ್ ರಾಜ್ ಹೇಳಿದ್ದಾರೆ.

ಬ್ರಿಜ್ ಭೂಷಣ್ ಆಪ್ತರ ಆಯ್ಕೆಯಿಂದ ಉಂಟಾದ ಆಕ್ರೋಶದಿಂದ ಗಮನ ಬೇರೆಡೆಗೆ ಸೆಳೆಯಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ಎಸ್ಪಿ ಮುಖಂಡ ಫಕ್ರುಲ್ ಹಸನ್ ಚಂದ್ ಆರೋಪಿಸಿದ್ದಾರೆ.

ಕುಸ್ತಿ: ಸಮಿತಿ ಅಮಾನತು

ಒಂದನೇ ಪುಟದಿಂದ

ಗುರುವಾರ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸಂಜಯ್ ಸಿಂಗ್ ಅವರು ನಿಕಟಪೂರ್ವ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಭೇಟಿ ಮಾಡಿದ್ದರು. ಬಳಿಕ ಈ ತಿಂಗಳ ಅಂತ್ಯದಲ್ಲಿ ರಾಷ್ಟ್ರೀಯ ಜೂನಿಯರ್ ಕುಸ್ತಿ ಚಾಂಪಿಯನ್‌ಶಿಪ್ ನಡೆಸಲಾಗುವುದು ಎಂದು ಘೋಷಿಸಿದ್ದರು.

‘ಹೊಸ ಮಂಡಳಿಯು ಮಾಜಿ ಪದಾಧಿಕಾರಿಗಳ (ಬ್ರಿಜ್ ಭೂಷಣ್ ಶರಣ್ ಸಿಂಗ್) ಸಂಪೂರ್ಣ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು ರಾಷ್ಟ್ರೀಯ ಕ್ರೀಡಾ ಸಂಹಿತೆಗೆ ಅನುಗುಣವಾಗಿಲ್ಲ’ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ಹೇಳಿದೆ.

ಜನವರಿಯಲ್ಲಿ ಆರೋಪಗಳು ಬೆಳಕಿಗೆ ಬಂದ ನಂತರ ಬ್ರಿಜ್ ಭೂಷಣ್ ಅವರನ್ನು ವಜಾಗೊಳಿಸುವಂತೆ ಒತ್ತಾಯಿಸಿ ಕುಸ್ತಿಪಟುಗಳು ಧರಣಿ ನಡೆಸಿದ್ದರು. ಅವರ ಮೇಲೆ ಇರುವ ಕ್ರಿಮಿನಲ್ ಪ್ರಕರಣದ ವಿಚಾರಣೆ ನಡೆಯುತ್ತಿದ್ದು, ತಪ್ಪಿತಸ್ಥರೆಂದು ಸಾಬೀತಾದರೆ ಅವರಿಗೆ 5 ವರ್ಷಗಳ ಜೈಲು ಶಿಕ್ಷೆ ವಿಧಿಸಬಹುದು.

ಐಎಸ್‌ಎಲ್: ಡ್ರಾ ಪಂದ್ಯದಲ್ಲಿ ಬಿಎಫ್‌ಸಿ

ಬೆಂಗಳೂರು: ಶಿವಶಕ್ತಿ ನಾರಾಯಣನ್ ಕೊನೆ ಕ್ಷಣದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ 1-1ರಿಂದ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು.

ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಪಂದ್ಯದಲ್ಲಿ ನಾರಾಯಣನ್ (90 + 5ನೇ ನಿ) ಬಿಎಫ್‌ಸಿ ಪರ ಗೋಲು ಗಳಿಸಿದರೆ, ನಾರ್ತ್‌ಈಸ್ಟ್ ಪರ ನೆಸ್ಟರ್ ಅಲ್ಬಿಯಾಚ್ (86ನೇ) ಚೆಂಡನ್ನು ಗುರಿ ಸೇರಿಸಿದರು.

ಬಿಎಫ್‌ಸಿ ತಂಡವು ಆಡಿರುವ 12 ಪಂದ್ಯಗಳಲ್ಲಿ ಎರಡನ್ನು ಗೆದ್ದರೆ, ಐದರಲ್ಲಿ ಡ್ರಾ ಸಾಧಿಸಿದೆ. ಉಳಿದ ಐದು ಪಂದ್ಯಗಳನ್ನು ಸೋತು ಒಟ್ಟು 11 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನದಲ್ಲಿದೆ. ನಾರ್ತ್‌ಈಸ್ಟ್ ತಂಡವು 11 ಅಂಕಗಳೊಂದಿಗೆ 8ನೇ ಸ್ಥಾನದಲ್ಲಿದೆ.



ಬಿಎಫ್‌ಸಿ (ನೀಲಿ) ಮತ್ತು ನಾರ್ತ್‌ಈಸ್ಟ್ ಎಫ್‌ಸಿ ಆಟಗಾರರ ಪೈಪೋಟಿ –ಪ್ರಜಾವಾಣಿ ಚಿತ್ರ/ ಬಿ.ಎಚ್‌. ಶಿವಕುಮಾರ್

ಕಬಡ್ಡಿ: ಬೆಂಗಳೂರು ಬುಲ್ಸ್‌ಗೆ ಜಯ

ಚೆನ್ನೈ (ಪಿಟಿಐ): ಸಾಂಘಿಕ ಆಟ ಪ್ರದರ್ಶಿಸಿದ ಬೆಂಗಳೂರು ಬುಲ್ಸ್ ತಂಡ ಭಾನುವಾರ ನಡೆದ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 33–31ರಿಂದ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು.

ಮಧ್ಯಂತರದಲ್ಲಿ 16–12ರಿಂದ ಮುನ್ನಡೆಯಲ್ಲಿದ್ದ ಬುಲ್ಸ್ ತಂಡಕ್ಕೆ ಟೈಟನ್ಸ್ ತಂಡ ಪ್ರಬಲ ಪೈಪೋಟಿ ನೀಡಿತು. ಬೆಂಗಳೂರು ತಂಡದ ಪರ ಸುರ್‌ಜಿತ್ ಸಿಂಗ್ ಟ್ಯಾಕಲ್‌ನಲ್ಲೇ 7 ಪಾಯಿಂಟ್ಸ್ ಗಳಿಸಿ ಮಿಂಚಿದರು. ಭರತ್ 6 ಅಂಕ ಗಳಿಸಿದರೆ, ವಿಕಾಶ ಖಂಡೋಲ ಮತ್ತು ನೀರಜ್ ನರ್ವಾಲ್ ತಲಾ ಐದು ಪಾಯಿಂಟ್ಸ್ ಪಡೆದರು. ಟೈಟನ್ಸ ಪರ ನಾಯಕ ಪವನ್ ಪವನ್ ಸೆಹ್ರಾವತ್ 13 ಅಂಕ ಗಳಿಸಿದರು.

ಆಡಿರುವ ಎಂಟು ಪಂದ್ಯಗಳಲ್ಲಿ ಮೂರರಲ್ಲಿ ಗೆದ್ದು, 19 ಅಂಕಗಳೊಂದಿಗೆ ಬುಲ್ಸ್ ಪಾಯಿಂಟ್ ಪಟ್ಟಿಯಲ್ಲಿ ಏಳನೇ ಸ್ಥಾನಕ್ಕೆ ಏರಿದರು.

ಮತ್ತೊಂದು ಪಂದ್ಯದಲ್ಲಿ ಯು ಮುಂಬಾ ತಂಡವು 39–37ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಮಣಿಸಿತು. ಬೆಂಗಾಲ್ ಪರ ಮಣಿಂದರ್ ಸಿಂಗ್ (11) ಸೂಪರ್ 10 ಸಾಧನೆ ಮಾಡಿದರು.

ಶೂಟಿಂಗ್ ಟ್ರಯಲ್ಸ್: ದಿವ್ಯಾಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಕರ್ನಾಟಕದ ದಿವ್ಯಾ ಟಿ.ಎಸ್. ಮತ್ತು ಹರಿಯಾಣದ ಕರಣ್ ಸೆಹ್ರಾವತ್ ಅವರು ಭಾನುವಾರ ರಾಷ್ಟ್ರೀಯ ಶೂಟಿಂಗ್ ಟ್ರಯಲ್ಸ್‌ನ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ (ಟಿ2) ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ವಿಭಾಗದಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಮಹಿಳೆಯರ ಸ್ಪರ್ಧೆಯಲ್ಲಿ ದಿವ್ಯಾ (243.8) ಅಗ್ರಸ್ಥಾನ ಪಡೆದರೆ, ಹರಿಯಾಣದ ಮನು ಭಾಕರ್ (242.4) ರನ್ನರ್ ಅಪ್ ಆದರು.

ತನಿಖೆ ಆರಂಭಿಸಿದ ನೌಕಾಪಡೆ

ಸೌದಿಯಿಂದ ಮಂಗಳೂರಿಗೆ ತೈಲ ಹೊತ್ತು ತರುತ್ತಿದ್ದ ಹಡಗಿನಲ್ಲಿ ಸ್ಫೋಟ ಪ್ರಕರಣ

ನವದೆಹಲಿ (ಪಿಟಿಐ): ಸೌದಿ ಅರೇಬಿಯಾದಿಂದ ಮಂಗಳೂರಿಗೆ ಕಚ್ಚಾ ತೈಲ ಹೊತ್ತುತರುತ್ತಿದ್ದ ಸರಕು ಸಾಗಣೆ ಹಡಗಿನ ಮೇಲೆ ನಡೆದಿರುವ ಶಂಕಿತ ಡ್ರೋನ್ ದಾಳಿಗೆ ಸಂಬಂಧಿಸಿ ಭಾರತೀಯ ನೌಕಾಪಡೆಯು ತನಿಖೆ ಆರಂಭಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದರು.

ಭಾರತೀಯ ಕರಾವಳಿ ಕಾವಲು ಪಡೆಯ ನೌಕೆ ಐಸಿಜಿಎಸ್ ವಿಕ್ರಮ್‌ನ ಬೆಂಗಾವಲಿನಲ್ಲಿ ಎಂವಿ ಚೆಮ್ ಪ್ಲುಟೊ ಹಡಗನ್ನು ಮುಂಬೈಗೆ ತರಲಾಗುತ್ತಿದೆ. ಕರಾವಳಿ ಕಾವಲು ಪಡೆಯ ಕಾರ್ಯನಿರ್ವಹಣಾ ಕೇಂದ್ರವು ಈ ಕುರಿತು ನಿಗಾವಹಿಸಿದೆ ಎಂದು ಅವರು ಹೇಳಿದರು.

ಗುಜರಾತ್‌ನ ವೆರಾವಲ್ ಕರಾವಳಿಯಿಂದ 200 ನಾಟಿಕಲ್ ಮೈಲಿ ದೂರದಲ್ಲಿ ಕಚ್ಚಾ ತೈಲ ಸಾಗಿಸುತ್ತಿದ್ದ ಹಡಗಿನಲ್ಲಿ ಶನಿವಾರ ಸ್ಫೋಟ ಸಂಭವಿಸಿತ್ತು. ಡ್ರೋನ್ ದಾಳಿಯೇ ಈ ಸ್ಫೋಟಕ್ಕೆ ಕಾರಣ ಎಂದು ಶಂಕಿಸಲಾಗಿದೆ.

ಡ್ರೋನ್ ದಾಳಿಯನ್ನು ಎಲ್ಲಿಂದ ಮಾಡಲಾಗಿದೆ ಎಂಬುದನ್ನೂ ಸೇರಿ ಸಂಪೂರ್ಣ ಘಟನೆ ಕುರಿತು ನೌಕಾಪಡೆ ತನಿಖೆ ನಡೆಸಲಿದೆ. ದಾಳಿ ನಡೆದ ಸ್ಥಳಕ್ಕೆ ಕ್ಷಿಪಣಿ ಧ್ವಂಸಕ ಯುದ್ಧನೌಕೆ ಐಎನ್‌ಎಸ್ ಮುರ್ಮುಗೋವಾ ಅನ್ನು ಕಳಿಸಲಾಗಿದೆ. ದಾಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹಡಗಿನಲ್ಲಿ 21 ಮಂದಿ ಭಾರತೀಯ ಸಿಬ್ಬಂದಿ ಸೇರಿ 22 ಜನರಿದ್ದರು. ಎಲ್ಲರೂ ಸುರಕ್ಷಿತವಾಗಿದ್ದಾರೆ.

ಮತ್ತೊಂದು ತೈಲ ವಾಹಕ ನೌಕೆ ಮೇಲೆ ದಾಳಿ: 25 ಮಂದಿ ಭಾರತೀಯ ಸಿಬ್ಬಂದಿಯಿದ್ದ ಕಚ್ಚಾ ತೈಲ ವಾಹಕ ನೌಕೆಯೊಂದರ ಮೇಲೆ ದಕ್ಷಿಣ ಕೆಂಪು ಸಮುದ್ರದಲ್ಲಿ ಶನಿವಾರ ಡ್ರೋನ್ ದಾಳಿ ನಡೆದಿದೆ. ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ ಎಂದು ವರದಿಯಾಗಿರುವುದಾಗಿ ಭಾರತೀಯ ಅಧಿಕಾರಿಗಳು ಮತ್ತು ಅಮೆರಿಕ ಸೇನೆ ತಿಳಿಸಿವೆ.

ಭಾರತ ಧ್ವಜ ಹೊತ್ತ, ಗಬಾನ್ ಮಾಲೀಕತ್ವದ ಎಂವಿ ಸಾಯಿಬಾಬಾ ಹಡಗನ್ನು ಗುರಿಯಾಗಿಸಿ ಹುತಿ ಬಂಡುಕೋರು ದಾಳಿ ನಡೆಸಿದ್ದಾರೆ. ‘ಭಾರತೀಯ ಹಡಗು ನೋಂದಣಿ’ಯಿಂದ ಈ ಹಡಗು ಪ್ರಮಾಣಪತ್ರ ಪಡೆದಿದೆ ಎಂದು ಅಮೆರಿಕ ಸೇನೆ ಪ್ರಕಟಣೆ ಹೊರಡಿಸಿದೆ.

ಕಚ್ಚಾ ತೈಲ ಹೊತ್ತು ಮಂಗಳೂರಿಗೆ ಬರುತ್ತಿದ್ದ ಎಂವಿ ಚೆಮ್ ಪ್ಲುಟೊ ದಾಳಿಗೊಳಗಾಗಿದೆ ಎಂಬ ವರದಿ ಬಂದ ಬೆನ್ನಲ್ಲೇ ಅಮೆರಿಕ ಸೇನೆಯು ಈ ಕುರಿತು ಪ್ರಕಟಣೆ ಹೊರಡಿಸಿದೆ.

ಭಾರತೀಯ ನೌಕಾಪಡೆಯು ಪರಿಸ್ಥಿತಿ ಕುರಿತು ನಿಗಾವಹಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಎಂವಿ ಸಾಯಿಬಾಬಾ ಹಡಗಿನ ಜತೆಗೆ ನಾರ್ವೆ ಧ್ವಜ ಹೊಂದಿದ್ದ ಎಂವಿ ಬ್ಲಾಮನೆನ್ ಹೆಸರಿನ ಹಡಗಿನ ಮೇಲೂ ಹುತಿ ಬಂಡುಕೋರರು ಶನಿವಾರ ಡ್ರೋನ್ ದಾಳಿ ನಡೆಸಿದ್ದಾರೆ. ದಾಳಿಯಿಂದ ಇದು ಸ್ವಲ್ಪದರಲ್ಲಿ ಪಾರಾಗಿದೆ. ಈ ಹಡಗು ರಾಸಾಯನಿಕ ಮತ್ತು ತೈಲ ಸಾಗಣೆ ಮಾಡುತ್ತಿತ್ತು. ದಾಳಿಯಲ್ಲಿ ಎಂವಿ ಸಾಯಿಬಾಬಾ ಹಡಗಿಗೂ ಯಾವುದೇ ಹಾನಿ ಆಗಿಲ್ಲ’ ಎಂದು ಅಮೆರಿಕದ ಕೇಂದ್ರೀಯ ಕಮಾಂಡ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ಇಸ್ರೇಲ್-ಹಮಾಸ್ ಸಂಘರ್ಷದ ಮಧ್ಯೆ ಇರಾನ್ ಬೆಂಬಲಿತ ಹುತಿ ಬಂಡುಕೋರರು ಕೆಂಪು ಸಮುದ್ರದಲ್ಲಿ ಹಡಗುಗಳನ್ನು ಗುರಿಯಾಗಿಸಿಕೊಂಡು ಡ್ರೋನ್ ದಾಳಿ ನಡೆಸುತ್ತಿದ್ದಾರೆ.

ಮುಖ್ಯಾಂಶಗಳು

- ದಕ್ಷಿಣ ಕೆಂಪು ಸಮುದ್ರದಲ್ಲಿ ಹುತಿ ಬಂಡುಕೋರರಿಂದ ಡ್ರೋನ್ ದಾಳಿ
- ಇರಾನ್‌ನಿಂದ ಡ್ರೋನ್ ದಾಳಿ – ಪೆಂಟಗಾನ್ ವಕ್ತಾರ
- ನಾರ್ವೆ ಧ್ವಜ ಹೊತ್ತಿದ್ದ ಹಡಗಿನ ಮೇಲೂ ದಾಳಿ, ಹಾನಿಯಾಗಿಲ್ಲ

‘ಸಾಯಿಬಾಬಾ ಹಡಗು ಭಾರತದ್ದಲ್ಲ’

ನವದೆಹಲಿ (ಪಿಟಿಐ): ದಕ್ಷಿಣ ಕೆಂಪು ಸಮುದ್ರದಲ್ಲಿ ಡ್ರೋನ್ ದಾಳಿಗೆ ಒಳಗಾಗಿದ್ದ ಹಡಗು ಭಾರತದ್ದಲ್ಲ ಎಂದು ನೌಕಾಪಡೆ ಭಾನುವಾರ ಸ್ಪಷ್ಟಪಡಿಸಿದೆ.

ದಾಳಿಗೆ ಒಳಗಾಗಿರುವ ಎಂವಿ ಸಾಯಿಬಾಬಾ ಹಡಗು ಗಬಾನ್‌ಗೆ ಸೇರಿದ್ದು, ಇದು ಭಾರತೀಯ ಹಡಗು ನೋಂದಣಾಧಿಕಾರಿ ಕಚೇರಿಯಿಂದ ಪ್ರಮಾಣಪತ್ರವನ್ನು ಮಾತ್ರ ಪಡೆದಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಹಡಗುಗಳು ಪ್ರಪಂಚದಾದ್ಯಂತದ ವಿವಿಧ ದೇಶಗಳಲ್ಲಿನ ನೋಂದಣಿ ಅಧಿಕಾರಿಗಳಿಂದ ಪ್ರಮಾಣೀಕರಣ ಪತ್ರ ಪಡೆಯುವ ಅವಕಾಶವಿದೆ.

ಪಶ್ಚಿಮ ಬಂಗಾಳ: 1 ಲಕ್ಷ ಜನರಿಂದ ಭಗವದ್ಗೀತೆ ಪಠನ ಕಾರ್ಯಕ್ರಮ

ಗೀತೆ ವಾಚನ, ರಾಜಕೀಯ ಕೆಸರೆರಚಾಟ

ಕೋಲ್ಕತ್ತ (ಪಿಟಿಐ): ಇಲ್ಲಿಯ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಭಾನುವಾರ ನಡೆದ ಭಗವದ್ಗೀತೆಯ ಶ್ಲೋಕಗಳ ಪಠನ ಕಾರ್ಯಕ್ರಮ ‘ಲೋಖೋ ಕೋಂತೆ ಗೀತ ಪಥ್’ವು ಬಿಜೆಪಿ ಮತ್ತು ಟಿಎಂಸಿ ನಡುವೆ ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿದೆ.



ಪಶ್ಚಿಮ ಬಂಗಾಳದ ಕೋಲ್ಕತ್ತದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಭಗವದ್ಗೀತೆ ಪಠಣ ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯ ಆಸಕ್ತರು ಮತ್ತು ಬಿಜೆಪಿ ಬೆಂಬಲಿಗರು ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ಕಾರ್ಯಕ್ರಮದಲ್ಲಿ ಸುಮಾರು 1 ಲಕ್ಷ ಜನರು ಭಾಗಿಯಾಗಿದ್ದರು. ಸಾಂಪ್ರದಾಯಕ ಉಡುಗೆಗಳನ್ನು ತೊಟ್ಟು ಬಂದಿದ್ದ ಅವರು ಒಟ್ಟಾಗಿ ಭಗವದ್ಗೀತೆಯ ಶ್ಲೋಕಗಳನ್ನು ಪಠಿಸಿದರು. ಪಶ್ಚಿಮ ಬಂಗಾಳ ಬಿಜೆಪಿ ಘಟಕ ಮತ್ತು ಆರ್‌ಎಸ್‌ಎಸ್‌ನ ಪ್ರಮುಖ ನಾಯಕರೂ ಇದರಲ್ಲಿ ಪಾಲ್ಗೊಂಡಿದ್ದರು.

ಈ ಕಾರ್ಯಕ್ರಮದಲ್ಲಿ ಹಿಂದೂ ಒಗ್ಗಟ್ಟನ್ನು ತೋರುವಂತೆ ಬಿಜೆಪಿ ಕರೆನೀಡಿತ್ತು. ರಾಜಕೀಯ ಬಲ ಪ್ರದರ್ಶಿಸಲು ಈ ಕಾರ್ಯಕ್ರಮವನ್ನು ಬಿಜೆಪಿ ಬಳಸಿಕೊಂಡಿದೆ ಎಂದು ಆಡಳಿತಾರೂಢ ಟಿಎಂಸಿ ಆರೋಪಿಸಿದೆ.

ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸುಕಾಂತ ಮಜುಂದಾರ್ ಅವರು, ‘ಭಗವದ್ಗೀತೆಯು ಭಾರತವು ಜಗತ್ತಿಗೆ ನೀಡಿರುವ ಅಮೂಲ್ಯ ಕೊಡುಗೆ. ಈ ಕಾರ್ಯಕ್ರಮವನ್ನು ಲೇವಡಿ ಮಾಡುತ್ತಿರುವವರಿಗೆ ಹಿಂದೂ ಧರ್ಮ ಮತ್ತು ಅದರ ಪರಂಪರೆ ಬಗ್ಗೆ ಗೌರವವಿಲ್ಲ. ಹಿಂದೂಗಳನ್ನು ಒಡೆಯಲು ಪ್ರಯತ್ನಿಸುತ್ತಿರುವವರು ತಮ್ಮ ಪ್ರಯತ್ನದಲ್ಲಿ ವಿಫಲರಾಗುತ್ತಾರೆ’ ಎಂದಿದ್ದಾರೆ.

‘ಇದು ಕೇವಲ ಭಗವದ್ಗೀತೆ ಪಠನ ಕಾರ್ಯಕ್ರಮವಾಗಿರಲಿಲ್ಲ. ಹಿಂದೂಗಳನ್ನು ಒಗ್ಗೂಡಿಸುವ ಕಾರ್ಯಕ್ರಮವೂ ಆಗಿತ್ತು’ ಎಂದು ಪಶ್ಚಿಮ ಬಂಗಾಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಹೇಳಿದ್ದಾರೆ.

ಬಿಜೆಪಿ ನಾಯಕರ ಹೇಳಿಕೆಗೆ ಟಿಎಂಸಿ ತಿರುಗೇಟು ನೀಡಿದೆ. ‘ನಮಗೆ ಗೀತೆ ಪಠನ ಕಾರ್ಯಕ್ರಮದ ಕುರಿತು ಯಾವುದೇ ರೀತಿಯ ವಿರೋಧವಿಲ್ಲ. ಆದರೆ, ಬಿಜೆಪಿ ನಾಯಕರು ಈ ಕಾರ್ಯಕ್ರಮವನ್ನು ತಮ್ಮ ರಾಜಕೀಯ ಉದ್ದೇಶ ಈಡೇರಿಸಿಕೊಳ್ಳಲು ಬಳಸಬಾರದು. ಧರ್ಮವನ್ನು ರಾಜಕೀಯದ ಜೊತೆ ಬೆರೆಸುವ ಚಟ ಬಿಜೆಪಿಗಿದೆ’ ಎಂದು ಟಿಎಂಸಿ ವಕ್ತಾರ ಕುನಾಲ್ ಘೋಷ್ ಹೇಳಿದ್ದಾರೆ.

‘ಭಗವದ್ಗೀತೆ ಪಠನ ಬದಲಿಗೆ ಬಿಜೆಪಿಯು ಫುಟ್‌ಬಾಲ್ ಕ್ರೀಡಾಕೂಟ ಆಯೋಜಿಸಬಹುದಿತ್ತು’ ಎಂದು ರಾಜ್ಯ ಸಚಿವ ಉದಯನ್ ಗುಹಾ ಹೇಳಿದ್ದಾರೆ.

ಮೋದಿ ಶುಭಹಾರೈಕೆ: ಪ್ರಧಾನಿ ಮೋದಿ ಅವರು ಕಾರ್ಯಕ್ರಮಕ್ಕೆ ಶುಭ ಹಾರೈಸಿದ್ದಾರೆ. ‘ಸಮಾಜದ ವಿವಿಧ ವರ್ಗಗಳಿಗೆ ಸೇರಿರುವ ಜನರು ಭಾರಿ ಸಂಖ್ಯೆಯಲ್ಲಿ ಒಗ್ಗೂಡಿ ಗೀತೆ ಪಠನ ಮಾಡುವುದು ಸಾಮಾಜಿಕ ಸಾಮರಸ್ಯಕ್ಕೆ ಉತ್ತೇಜನ ನೀಡುವುದಲ್ಲದೇ, ರಾಷ್ಟ್ರ ಬೆಳವಣಿಗೆಗೆ ಶಕ್ತಿಯನ್ನೂ ತುಂಬುತ್ತದೆ’ ಎಂದು ಹೇಳಿದ್ದಾರೆ.

ಸಂವಿಧಾನ ಓದು: ಇದೇವೇಳೆ ಪಶ್ಚಿಮ ಬಂಗಾಳ ಕಾಂಗ್ರೆಸ್ ನಾಯಕರು ಬ್ರಿಗೇಡ್ ಪರೇಡ್ ಮೈದಾನ ಬಳಿಯ ಬಿರ್ಲಾ ತಾರಾಲಯದಲ್ಲಿ ‘ಸಂವಿಧಾನ ಓದು’ ಕಾರ್ಯಕ್ರಮ ಆಯೋಜಿಸಿದ್ದರು. ‘ಸಮಾಜವನ್ನು ಒಡೆಯುವ ದಿಸೆಯಲ್ಲಿ ಕೆಲಸ ಮಾಡುವುದಕ್ಕಿಂತ, ಸಂವಿಧಾನದಲ್ಲಿ ಹೇಳಿರುವಂತೆ ಜಾತ್ಯತೀತ ಸಮಾಜ ರೂಪಿಸುವತ್ತ ಕೆಲಸ ಮಾಡಬೇಕು’ ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದರು

> **ಈ ಕಾರ್ಯಕ್ರಮದ ಬಳಿಕ ರಾಜ್ಯದಲ್ಲಿರುವ ಹಿಂದೂಗಳು ಜಾಗೃತರಾಗುತ್ತಾರೆ ಮತ್ತು ವಿಭಜಕ ಶಕ್ತಿಗಳ ವಿರುದ್ಧ ಒಗ್ಗೂಡುತ್ತಾರೆ**
> **ಸುವೇಂದು ಅಧಿಕಾರಿ**
> ಪಶ್ಚಿಮ ಬಂಗಾಳ ವಿರೋಧ ಪಕ್ಷದ ನಾಯಕ

ನಾಗರಿಕರ ನಿಗೂಢ ಸಾವು ಆಂತರಿಕ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಮೂವರು ನಾಗರಿಕರು ನಿಗೂಢ ರೀತಿಯಲ್ಲಿ ಮೃತಪಟ್ಟಿರುವುದರ ಕುರಿತು ಸಮಗ್ರ ಆಂತರಿಕ ತನಿಖೆಗೆ ಸೇನೆಯು ಭಾನುವಾರ ಆದೇಶಿಸಿದೆ.

ಸೇನಾ ವಾಹನಗಳ ಮೇಲೆ 21ರಂದು ನಡೆದ ದಾಳಿಗೆ ಸಂಬಂಧಿಸಿದಂತೆ ವಿಚಾರಣೆಗೆಂದು ಸೇನೆಯ ಸಿಬ್ಬಂದಿ ಕರೆದೊಯ್ದಿದ್ದ ಮೂವರು 22ರಂದು ನಿಗೂಢವಾಗಿ ಸತ್ತಿದ್ದಾರೆ.

‘ಸೇನೆಯು ಕರೆದೊಯ್ದಿದ್ದ ಎಂಟು ಮಂದಿಯಲ್ಲಿ ಈ ಮೂವರು ಇದ್ದರು. ವಿಚಾರಣೆ ವೇಳೆ ನೀಡಿದ ಹಿಂಸೆಯಿಂದಾಗಿ ಅವರು ಮೃತಪಟ್ಟಿದ್ದಾರೆ’ ಎಂದು ಮೃತರ ಸಂಬಂಧಿಕರು ಮತ್ತು ಕೆಲವು ರಾಜಕೀಯ ಮುಖಂಡರು ಆರೋಪಿಸಿದ್ದಾರೆ.

‘ಈ ಘಟನೆ (ನಾಗರಿಕರ ಸಾವು) ಬಗ್ಗೆ ಸಮಗ್ರ ತನಿಖೆಗೆ ಸೇನೆಯು ಆದೇಶಿಸಿದೆ’ ಎಂದು ಮೂಲಗಳು ಹೇಳಿವೆ. ಜಮ್ಮು ಮತ್ತು ಕಾಶ್ಮೀರ ಪೊಲೀಸರು ಕೂಡಾ ಘಟನೆ ಬಗ್ಗೆ ತನಿಖೆ ಕೈಗೆತ್ತಿಕೊಂಡಿದ್ದಾರೆ. ಪೊಲೀಸರ ತನಿಖೆಗೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ಸೇನೆಯು ಶನಿವಾರ ಹೇಳಿತ್ತು.

ನಿವೃತ್ತ ಎಸ್‌ಪಿ ಹತ್ಯೆ (ಶ್ರೀನಗರ- ಪಿಟಿಐ): ಜಮ್ಮು-ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಮಸೀದಿಯೊಂದರಲ್ಲಿ ‘ಆಜಾನ್’ ಕೂಗುತ್ತಿದ್ದ ಧರ್ಮಗುರು, ನಿವೃತ್ತ ಪೊಲೀಸ್ ಅಧಿಕಾರಿ (ಎಸ್‌ಪಿ) ಯೊಬ್ಬರನ್ನು ಉಗ್ರರು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

‘ಮೊಹಮ್ಮದ್ ಶಫಿ ಮೀರ್ (72) ಅವರನ್ನು ಉತ್ತರ ಕಾಶ್ಮೀರದ ಶೀರಿ ಪ್ರದೇಶದ ಮಸೀದಿಯೊಳಗೆ ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಮೀರ್ ಅವರು 2012ರಲ್ಲಿ ನಿವೃತ್ತಿ ಪಡೆದಿದ್ದರು’ ಎಂದು ಹೇಳಿದರು.

ಮರಾಠ ಮೀಸಲಾತಿಗೆ ಬದ್ಧ: ಮಹಾರಾಷ್ಟ್ರ ಸರ್ಕಾರ ಪುನರುಚ್ಚಾರ

ಜ.20 ರಂದು ಮುಂಬೈನಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಂಬೈ: ಮರಾಠ ಸಮುದಾಯಕ್ಕೆ ಮೀಸಲಾತಿ ಒದಗಿಸಲು ಬದ್ಧ ಎಂಬುದನ್ನು ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಬಿಜೆಪಿ, ಶಿವಸೇನಾ ಮತ್ತು ಎನ್‌ಸಿಪಿ ಮೈತ್ರಿ ಸರ್ಕಾರ ಭಾನುವಾರ ಪುನರುಚ್ಚರಿಸಿದೆ.

ಇದೇ ವೇಳೆ, ಮೀಸಲಾತಿಗೆ ಆಗ್ರಹಿಸಿ ಮುಂಬೈನಲ್ಲಿ ನಡೆಸಲು ಉದ್ದೇಶಿಸಿರುವ ಪ್ರತಿಭಟನೆಯು ‘ಹಿಂದೆಂದೂ ಕಾಣದಂತಹ’ ಹೋರಾಟವಾಗಿರಲಿದೆ ಎಂದು ಹೋರಾಟಗಾರ ಮನೋಜ್ ಜರಾಂಗೆ ಪಾಟೀಲ ಎಚ್ಚರಿಸಿದ್ದಾರೆ.

ಜರಾಂಗೆ ಅವರು ಜಲ್ನಾ ಜಿಲ್ಲೆಯ ಅಂಬಡ ತಾಲ್ಲೂಕಿನ ಅಂತರವಾಲಿ-ಸರಾಟಿ ಗ್ರಾಮದಲ್ಲಿ ವಾಸ್ತವ್ಯ ಹೂಡಿದ್ದಾರೆ. ಮೀಸಲಾತಿಗೆ ಆಗ್ರಹಿಸಿ ಮೂರನೇ ಹಂತದ ಉಪವಾಸ ಸತ್ಯಾಗ್ರಹವನ್ನು ಮುಂದಿನ ವರ್ಷ ಜನವರಿ 20ರಂದು ಆರಂಭಿಸುವುದಾಗಿ ಅವರು ಈಚೆಗೆ ಪ್ರಕಟಿಸಿದ್ದರು.

‘ಜನವರಿ 20ಕ್ಕೆ ಮುನ್ನ ನಾನು ಯಾವುದೇ ಮಾತುಕತೆಗೂ ಸಿದ್ಧ. ಆದರೆ ಜ. 20ರಂದು ಈ ಸ್ಥಳವನ್ನು (ಅಂತರವಾಲಿ- ಸರಾಟಿ) ತೊರೆದ ಬಳಿಕ ನನ್ನ ಮುಂದಿರುವ ಗುರಿ ಪ್ರತಿಭಟನೆ ಮಾತ್ರ. ಉಪವಾಸ ಸತ್ಯಾಗ್ರಹ ಮತ್ತೆ ಆರಂಭಿಸುತ್ತೇನೆ’ ಎಂದು ಅವರು ಹೇಳಿದರು.

ಮರಾಠರಿಗೆ ಮೀಸಲಾತಿ ನೀಡುವ ಕುರಿತು ಡಿಸೆಂಬರ್ 24ರೊಳಗೆ ತೀರ್ಮಾನಿಸಬೇಕು ಎಂದು ಜರಾಂಗೆ ಈ ಮೊದಲು ಗಡುವು ವಿಧಿಸಿದ್ದರು. ಬಳಿಕ ಗಡುವನ್ನು ಜ. 20ರ ವರೆಗೆ ವಿಸ್ತರಿಸಿದ್ದರು.

‘ರಾಜ್ಯದ ವಿವಿಧ ಭಾಗಗಳಿಂದ ಬರುವ ಜನರು ಜ. 20ರಂದು ಮುಂಬೈನಲ್ಲಿ ಸೇರಲಿದ್ದಾರೆ. ಮರಾಠ ಸಮುದಾಯದ 3 ಕೋಟಿ ಮಂದಿ ಸೇರುವ ನಿರೀಕ್ಷೆಯಿದೆ. ಮುಂಬೈನ ಇತಿಹಾಸದಲ್ಲೇ ಅತಿದೊಡ್ಡ ಪ್ರತಿಭಟನೆ ಎನಿಸಿಕೊಳ್ಳಲಿದೆ’ ಎಂದು ತಿಳಿಸಿದರು.

ಮುಖ್ಯಾಂಶಗಳು

- ಮುಂಬೈನಲ್ಲಿ 3 ಕೋಟಿ ಮಂದಿ ಸೇರಲಿದ್ದಾರೆ: ಜರಾಂಗೆ
- ಜ. 20ರಿಂದ ಮೂರನೇ ಸುತ್ತಿನ ಉಪವಾಸ ಸತ್ಯಾಗ್ರಹ



> **ಮೀಸಲಾತಿಗೆ ಸಂಬಂಧಿಸಿದಂತೆ ಮಹಾರಾಷ್ಟ್ರ ಸರ್ಕಾರ ಸಲ್ಲಿಸಿರುವ ಪರಿಹಾರಾತ್ಮಕ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಜನವರಿ 24ರಂದು ಕೈಗೆತ್ತಿಕೊಳ್ಳಲಿದೆ**
> **ಏಕನಾಥ ಶಿಂದೆ,** ಮುಖ್ಯಮಂತ್ರಿ

ಸರ್ಕಾರ ಬದ್ಧ: ಏಕನಾಥ ಶಿಂದೆ

‘ಮರಾಠರಿಗೆ ಮೀಸಲಾತಿ ಒದಗಿಸಲು ಸರ್ಕಾರ ಬದ್ಧವಾಗಿದೆ. ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಫೆಬ್ರುವರಿಯಲ್ಲಿ ಮುಂಬೈನಲ್ಲಿ ವಿಶೇಷ ಅಧಿವೇಶನ ನಡೆಸಲಾಗುವುದು’ ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ಹೇಳಿದ್ದಾರೆ.

‘ಮರಾಠ ಮೀಸಲಾತಿಗೆ ಸಂಬಂಧಿಸಿದಂತೆ ಮಹಾರಾಷ್ಟ್ರ ಹಿಂದುಳಿದ ವರ್ಗಗಳ ಆಯೋಗವು ಕಾರ್ಯೋನ್ಮುಖವಾಗಿದ್ದು, ಶೀಘ್ರದಲ್ಲೇ ವರದಿ ಸಲ್ಲಿಸಲಿದೆ. ಮರಾಠ ಸಮುದಾಯವು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿದೆ ಎಂಬುದನ್ನು ನಾವು ಸಾಬೀತುಪಡಿಸುತ್ತೇವೆ’ ಎಂದರು.

ನಾಳೆ ‘ಐಎನ್‌ಎಸ್ ಇಂಫಾಲ್’ ನೌಕಾಪಡೆಗೆ ಸೇರ್ಪಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಇದೇ ಮೊದಲಿಗೆ ಈಶಾನ್ಯ ರಾಜ್ಯದ ನಗರವೊಂದರ ಹೆಸರು ಹೊಂದಿರುವ ಸ್ವದೇಶಿ ನಿರ್ಮಿತ ‘ಐಎನ್‌ಎಸ್ ಇಂಫಾಲ್’ ಯುದ್ಧನೌಕೆಯನ್ನು ಮಂಗಳವಾರ ಭಾರತೀಯ ನೌಕಾಪಡೆಗೆ ಸೇರ್ಪಡೆಗೊಳಿಸಲಾಗುವುದು.

ಸಾಗರ ಸೀಮೆಯಲ್ಲಿ ತನ್ನ ಪ್ರಾಬಲ್ಯ ಹೆಚ್ಚಿಸಿಕೊಳ್ಳುತ್ತಿರುವ ಚೀನಾಕ್ಕೆ ಪ್ರತಿರೋಧ ಒಡ್ಡುವ ಸಲುವಾಗಿ ರೂಪಿಸಿರುವ ಈ ಯುದ್ಧನೌಕೆಯನ್ನು ಮುಂಬೈನಲ್ಲಿರುವ ನೌಕಾಪಡೆಯ ಪಶ್ಚಿಮ ಕಮಾಂಡ್‌ಗೆ ಹಸ್ತಾಂತರಿಸಲಾಗುತ್ತದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉಪಸ್ಥಿತರಿರುವರು.

7,400 ಟನ್ ತೂಕದ ಈ ನೌಕೆಯು 164 ಮೀ. ಉದ್ದವಿದ್ದು, ಶತ್ರು ರಾಷ್ಟ್ರದ ಕ್ಷಿಪಣಿಗಳನ್ನು ನಾಶ ಮಾಡಬಲ್ಲ ವ್ಯವಸ್ಥೆ ಮತ್ತು ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯ ಹೊಂದಿದೆ.

ಮಹಿಳಾ ಟೆಸ್ಟ್: ಆಸ್ಟ್ರೇಲಿಯಾ ಎದುರು ಮೊದಲ ಯಶಸ್ಸು; ಸ್ನೇಹಾ, ರಾಜೇಶ್ವರಿ ಮಿಂಚು

ಭಾರತ ವನಿತೆಯರ ಐತಿಹಾಸಿಕ ವಿಜಯ

ಮುಂಬೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳಾ ತಂಡವು ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಏಕೈಕ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಚಾರಿತ್ರಿಕ ಜಯ ಸಾಧಿಸಿತು.

ಭಾನುವಾರ ಮುಗಿದ ಪಂದ್ಯದಲ್ಲಿ ಆತಿಥೇಯ ತಂಡವು 8 ವಿಕೆಟ್‌ಗಳಿಂದ ಜಯಿಸಿತು. ಮಹಿಳೆಯರ ಟೆಸ್ಟ್ ಇತಿಹಾಸದಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ಎದುರು ಜಯಿಸಿದ ಮೊದಲ ಪಂದ್ಯ ಇದಾಗಿದೆ. ಉಭಯ ತಂಡಗಳು ಇದುವರೆಗೆ 11 ಪಂದ್ಯಗಳನ್ನು ಆಡಿವೆ. ಅದರಲ್ಲಿ ಆರು ಡ್ರಾ ಆಗಿದ್ದು, ಆಸ್ಟ್ರೇಲಿಯಾ ನಾಲ್ಕರಲ್ಲಿ ಜಯಿಸಿದೆ. ಇದೀಗ ಭಾರತ ಜಯದ ಖಾತೆ ತೆರೆದಿದೆ.

ಈ ಪಂದ್ಯದಲ್ಲಿ ನಾಲ್ಕು ದಿನವೂ ಛಲಬಿಡದ ಆಟವಾಡಿದ ಹರ್ಮನ್ ಬಳಗವು ಅರ್ಹ ಗೆಲುವು ಗಳಿಸಿತು.

ಶನಿವಾರ ದಿನದಾಟದ ಮುಕ್ತಾಯಕ್ಕೆ ಆಸ್ಟ್ರೇಲಿಯಾ ತಂಡವು ಎರಡನೇ ಇನಿಂಗ್ಸ್‌ನಲ್ಲಿ 90 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 233 ರನ್ ಗಳಿಸಿತ್ತು. ಭಾನುವಾರ ಬೆಳಿಗ್ಗೆ ಸ್ನೇಹಾ ರಾಣಾ (5–2–9–2) ಮತ್ತು ಕನ್ನಡತಿ ರಾಜೇಶ್ವರಿ ಗಾಯಕವಾಡ್ (1.4–1–0–2) ಅವರ ದಾಳಿಯ ಮುಂದೆ ಆಸ್ಟ್ರೇಲಿಯಾ ಬ್ಯಾಟರ್‌ಗಳು ಕುಸಿದರು.

45 ನಿಮಿಷಗಳಲ್ಲಿ 29 ರನ್‌ಗಳ ಅಂತರದಲ್ಲಿ ಐದು ವಿಕೆಟ್‌ಗಳು ಪತನವಾದವು. ಅನಾಬೆಲ್ ಸದರ್ಲೆಂಡ್ (27 ರನ್) ಅವರು ತುಸು ಹೋರಾಟ ತೋರಿದರು. ಆದರೆ ಉಳಿದವರು ವಿಫಲರಾದರು.



ವಿಕೆಟ್ ಗಳಿಸಿದ ರಾಜೇಶ್ವರಿ ಗಾಯಕವಾಡ್ ಅವರೊಂದಿಗೆ ಸಂಭ್ರಮಿಸಿದ ಜೆಮಿಮಾ ರಾಡ್ರಿಗಸ್ ಮತ್ತು ಸ್ನೇಹಾ ರಾಣಾ –ಎಎಫ್‌ಪಿ ಚಿತ್ರ

ಇದರಿಂದಾಗಿ ತಂಡವು 105.4 ಓವರ್‌ಗಳಲ್ಲಿ 261ರನ್ ಗಳಿಸಿ ಆಲೌಟ್ ಆಯಿತು.

75 ರನ್‌ಗಳ ಸಣ್ಣ ಮೊತ್ತದ ಗುರಿಯನ್ನು ಬೆನ್ನಟ್ಟಿದ ಭಾರತ ತಂಡವು 18.4 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು ಮುಟ್ಟಿತು. ಸ್ಮೃತಿ ಮಂದಾನ (ಔಟಾಗದೆ 38) ಮತ್ತು ಜೆಮಿಮಾ (ಔಟಾಗದೆ 12) ತಂಡವನ್ನು ಗೆಲುವಿನ ದಡ ಸೇರಿಸಿದರು.

ಹೋದವಾರ ಭಾರತ ತಂಡವು ಇಂಗ್ಲೆಂಡ್ ವಿರುದ್ಧ ನವಿ ಮುಂಬೈನ ಡಿವೈ ಪಾಟೀಲ ಕ್ರೀಡಾಂಗಣದಲ್ಲಿ ಟೆಸ್ಟ್ ಗೆದ್ದು ದಾಖಲೆ ನಿರ್ಮಿಸಿತ್ತು. ಆ ಜಯದಿಂದ ಭರ್ತಿ ಆತ್ಮವಿಶ್ವಾಸದಲ್ಲಿದ್ದ ತಂಡವು ಈ ಪಂದ್ಯದಲ್ಲಿ ಅಮೋಘ ಆಟವಾಡಿತು.

‘ಮೂರನೇ ದಿನದಾಟದ ಸಂಜೆ ಹರ್ಮನ್‌ಪ್ರೀತ್ ಕೌರ್ ಬೌಲಿಂಗ್ ಮಾಡಿ ಎರಡು ವಿಕೆಟ್ ಗಳಿಸಿದ್ದು ಪಂದ್ಯದ ಜಯ ನಮ್ಮತ್ತ ವಾಲಲು ಕಾರಣವಾಯಿತು. ಅವರದ್ದು ಮ್ಯಾಜಿಕ್ ಸ್ಪೆಲ್. ಅವರು ಅರ್ಧಶತಕ ಗಳಿಸಿದ್ದ ತಹಲಿಯಾ ಮೆಕ್‌ಗ್ರಾ ಮತ್ತು 32 ರನ್ ಗಳಿಸಿದ್ದ ಅಲೀಸಾ ಹೀಲಿ ವಿಕೆಟ್ ಗಳಿಸಿದ್ದರಿಂದ ಮಹತ್ವದ ತಿರುವು ಲಭಿಸಿತು’ ಎಂದು ಬೌಲರ್ ಸ್ನೇಹಾ ರಾಣಾ ಪಂದ್ಯದ ನಂತರ ಸುದ್ದಿಗಾರರಿಗೆ ಹೇಳಿದರು.

ಎರಡನೇ ಇನಿಂಗ್ಸ್‌ನಲ್ಲಿ ಮೆಕ್‌ಗ್ರಾ ಮತ್ತು ಹೀಲಿ ಅವರು ಆಸ್ಟ್ರೇಲಿಯಾ ತಂಡವು ಮುನ್ನಡೆ ಗಳಿಸಲು ಕಾರಣರಾಗಿದ್ದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 219, ಭಾರತ: 406, ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 105.4 ಓವರ್‌ಗಳಲ್ಲಿ 261(ಸದರ್ಲ್ಯಾಂಡ್ 27, ಸ್ನೇಹಾ ರಾಣಾ 63ಕ್ಕೆ4, ರಾಜೇಶ್ವರಿ ಗಾಯಕವಾಡ್ 42ಕ್ಕೆ2, ಹರ್ಮನ್‌ಪ್ರೀತ್ ಕೌರ್ 23ಕ್ಕೆ2) ಭಾರತ: 18.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 75 (ಸ್ಮೃತಿ ಮಂದಾನ ಔಟಾಗದೆ 38, ಜೆಮಿಮಾ ರಾಡ್ರಿಗಸ್ ಔಟಾಗದೆ 12, ಕಿಮ್ ಗ್ರಾಥ್ 19ಕ್ಕೆ1, ಆ್ಯಷ್ಲೆ ಗಾರ್ಡನರ್ 18ಕ್ಕೆ1)
ಫಲಿತಾಂಶ: ಭಾರತ ತಂಡಕ್ಕೆ 8 ವಿಕೆಟ್‌ಗಳ ಜಯ.
ಪಂದ್ಯದ ಆಟಗಾರ್ತಿ: ಸ್ನೇಹಾ ರಾಣಾ.

ಟೇಬಲ್ ಟೆನಿಸ್: ಆಕಾಶ್, ಸಹನಾ ಚಾಂಪಿಯನ್

ಬೆಂಗಳೂರು: ಕೆ.ಜೆ. ಆಕಾಶ್ ಮತ್ತು ಸಹನಾ ಎಚ್. ಮೂರ್ತಿ ಅವರು ಸಿವಿಎಲ್ ಶಾಸ್ತ್ರಿ ಸ್ಮಾರಕ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ಟೂರ್ನಿಯಲ್ಲಿ ಕ್ರಮವಾಗಿ 19 ವರ್ಷದೊಳಗಿನ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್‌ನ ಪ್ರಶಸ್ತಿಯನ್ನು ಗೆದ್ದುಕೊಂಡರು.


ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪುರುಷರ ಫೈನಲ್ ಪಂದ್ಯದಲ್ಲಿ ಆಕಾಶ್ 11-6, 8-11, 18-16, 11-7, 11-3ರಿಂದ ರೋಹಿತ್ ಶಂಕರ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಆಕಾಶ್ ಅವರು ವರುಣ್ ಬಿ. ಕಶ್ಯಪ್ ವಿರುದ್ಧ, ರೋಹಿತ್ ಅವರು ಸಿದ್ಧಾಂತ್ ಧಾರಿವಾಲ್ ವಿರುದ್ಧ ಜಯ ಸಾಧಿಸಿದ್ದರು.

ಮಹಿಳೆಯರ ಫೈನಲ್‌ನಲ್ಲಿ ಸಹನಾ 7-11, 11-9, 7-11, 11-9, 11-5, 6-11, 11-5ರಿಂದ ಹಿಮಾಂಶಿ ಚೌಧರಿ ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ಸಹನಾ ಅವರು ತೃಪ್ತಿ ಪುರೋಹಿತ್ ಅವರನ್ನು ಮತ್ತು ಹಿಮಾಂಶಿ ಅವರು ಪ್ರೇಕ್ಷಾ ಟಿ. ತಿಲಾವತ್ ಅವರನ್ನು ಮಣಿಸಿದ್ದರು.

ತನಿಷ್ಕಾಗೆ ಮೂರನೇ ಪ್ರಶಸ್ತಿ: 17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನ ಫೈನಲ್‌ನಲ್ಲಿ ತನಿಷ್ಕಾ ಕಪಿಲ್ ಕಾಲಭೈರವ್ 11-2, 11-4, 13-11 ರಿಂದ ಪ್ರಣವಿ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು. ಇದು ಈ ಟೂರ್ನಿಯಲ್ಲಿ ತನಿಷ್ಕಾಗೆ ಮೂರನೇ ಪ್ರಶಸ್ತಿಯಾಗಿದೆ. 13 ಮತ್ತು 15 ವರ್ಷದೊಳಗಿನ ವಿಭಾಗಗಳ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಬಾಲಕರ ಸಿಂಗಲ್ಸ್‌ನ ಫೈನಲ್‌ನಲ್ಲಿ ವರುಣ್ ಬಿ. ಕಶ್ಯಪ್ 10-12, 11-4 , 11-8 , 6-11 ,11-8 ರಿಂದ ಅಭಿನವ್ ಕೆ. ಮೂರ್ತಿ ಅವರನ್ನು ಮಣಿಸಿದರು.

ಸಂಕ್ಷಿಪ್ತ ಸುದ್ದಿ

ಹೈದರಾಬಾದ್ ತಂಡ: ರಾಮ್‌ಚರಣ್ ಮಾಲೀಕ



ಮುಂಬೈ (ಪಿಟಿಐ): ತೆಲುಗು ನಟ ರಾಮ್‌ಚರಣ್ ಅವರು ಇಂಡಿಯನ್ ಸ್ಟ್ರೀಟ್ ಪ್ರೀಮಿಯರ್ ಲೀಗ್‌ನ ಹೈದರಾಬಾದ್ ತಂಡದ ಮಾಲೀಕರಾಗಿದ್ದಾರೆ.

ಬಾಲಿವುಡ್ ನಟರಾದ ಅಮಿತಾಭ್ ಬಚ್ಚನ್, ಅಕ್ಷಯ್ ಕುಮಾರ್ ಮತ್ತು ಹೃತಿಕ್ ರೋಷನ್ ಕ್ರಮವಾಗಿ ಮುಂಬೈ, ಶ್ರೀನಗರ ಮತ್ತು ಬೆಂಗಳೂರು ತಂಡಗಳ ಮಾಲೀಕತ್ವ ಪಡೆದಿದ್ದಾರೆ.

‘ಪಟೇಲ್ ಕ್ರೀಡಾಂಗಣದಲ್ಲಿ ಒಲಿಂಪಿಕ್ಸ್‌ಗೆ ಬಿಡ್’

ಅಹಮದಾಬಾದ್ (ಪಿಟಿಐ): ಭಾರತವು 2036ರ ಒಲಿಂಪಿಕ್ ಕೂಟದ ಆಯೋಜನೆಗೆ ಬಿಡ್ ಸಲ್ಲಿಸುತ್ತಿದೆ. ಒಂದೊಮ್ಮೆ ಅವಕಾಶ ಲಭಿಸಿದರೆ ಇಲ್ಲಿಯ ಸರ್ದಾರ್ ಪಟೇಲ್ ಕ್ರೀಡಾ ಸಂಕೀರ್ಣದಲ್ಲಿ ಕೂಟ ಆಯೋಜಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಆ ವರ್ಷದ ಒಲಿಂಪಿಕ್ಸ್ ಆತಿಥ್ಯ ವಹಿಸಲು ದೇಶವು ಬಿಡ್ ಸಲ್ಲಿಸಲಿದೆ ಎಂದು ಅಕ್ಟೋಬರ್‌ನಲ್ಲಿ ಹೇಳಿದ್ದರು.

ಕೆ.ಎಲ್. ರಾಹುಲ್‌ಗೆ ವಿಕೆಟ್‌ಕೀಪಿಂಗ್ ‘ಟೆಸ್ಟ್’

ಸೆಂಚುರಿಯನ್ (ಪಿಟಿಐ): ಕೆ.ಎಲ್. ರಾಹುಲ್ ಅವರು ದಕ್ಷಿಣ ಆಫ್ರಿಕಾದ ಎದುರಿನ ಟೆಸ್ಟ್ ಸರಣಿಯಲ್ಲಿ ವಿಕೆಟ್ ಕೀಪಿಂಗ್ ಕಾರ್ಯನಿರ್ವಹಿಸಲು ತುಂಬು ಆತ್ಮವಿಶ್ವಾಸದಿಂದ ಇದ್ದಾರೆ ಎಂದು ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹೇಳಿದ್ದಾರೆ.

ತಂಡದಲ್ಲಿರುವ ಎರಡನೇ ವಿಕೆಟ್‌ಕೀಪರ್ ಕೆ.ಎಸ್. ಭರತ್ ಅವರು ಬ್ಯಾಟಿಂಗ್‌ನಲ್ಲಿ ಹೆಚ್ಚು ಪರಿಣಾಮಕಾರಿಯಾಗಿಲ್ಲ. ಇಶಾನ್ ಕಿಶನ್ ಅವರು ಸರಣಿಯಿಂದ ವಿಶ್ರಾಂತಿ ಪಡೆದು ತವರಿಗೆ ಮರಳಿದ್ದಾರೆ. ಆದ್ದರಿಂದ ಕನ್ನಡಿಗ ರಾಹುಲ್ ಅವರೇ ಕೀಪಿಂಗ್ ಹೊಣೆ ನಿಭಾಯಿಸುವುದು ಖಚಿತವಾಗಿದೆ. ಏಕದಿನ ವಿಶ್ವಕಪ್ ಕ್ರಿಕೆಟ್‌ನಲ್ಲಿ ಅವರು ಕೀಪಿಂಗ್ ಮಾಡಿದ್ದರು.

‘ಅವರಿಗೆ (ರಾಹುಲ್) ಇದು ಉತ್ತಮ ಅವಕಾಶವಾಗಿದೆ. ಅಲ್ಲದೇ ಸವಾಲು ಕೂಡ. ವಿಭಿನ್ನವಾಗಿರುವುದನ್ನು ಮಾಡುವ ಅವಕಾಶವೂ ಅವರಿಗೆ ಲಭಿಸಲಿದೆ. ಇಶಾನ್ ಲಭ್ಯರಿಲ್ಲ. ಈಗಿರುವ ಇಬ್ಬರಲ್ಲಿ ರಾಹುಲ್ ಅವರು ನಮ್ಮ ಆಯ್ಕೆ‘ ಎಂದು ದ್ರಾವಿಡ್ ಹೇಳಿದರು.

‘ಅವರು ದೀರ್ಘ ಮಾದರಿಯ ಕ್ರಿಕೆಟ್‌ನಲ್ಲಿ ಹೆಚ್ಚು ಕೀಪಿಂಗ್ ಮಾಡಿಲ್ಲದಿರಬಹುದು. ಆದರೆ, 50 ಓವರ್‌ಗಳ ಮಾದರಿಯಲ್ಲಿ ಕೀಪಿಂಗ್ ನಿರ್ವಹಿಸಿದ ಅನುಭವ ಅವರಿಗೆ ಇದೆ.ಕಳೆದ ಐದಾರು ತಿಂಗಳಲ್ಲಿ ಅವರು ಬಹಳಷ್ಟು ಶ್ರಮಪಟ್ಟು ಸಿದ್ಧರಾಗಿದ್ದಾರೆ’ ಎಂದು ದ್ರಾವಿಡ್ ಭರವಸೆ ವ್ಯಕ್ತಪಡಿಸಿದರು.

‘ರಾಹುಲ್ ಅವರು ಕೀಪಿಂಗ್ ಹೊಣೆ ನಿಭಾಯಿಸುವುದರಿಂದ ಹನ್ನೊಂದರ ಬಳಗದಲ್ಲಿ ಇನ್ನೊಬ್ಬ ಹೆಚ್ಚುವರಿ ಬ್ಯಾಟರ್‌ಗೆ ಅವಕಾಶ ಲಭಿಸಲಿದೆ‘ ಎಂದರು.

ಟೆಸ್ಟ್ ಸರಣಿಯಲ್ಲಿ ಶ್ರೇಯಸ್ ಅಯ್ಯರ್ ಅವರಿಗೆ ಕಣಕ್ಕಿಳಿಯುವ ಅವಕಾಶ ಸಿಗುವ ಸಾಧ್ಯತೆ ಇದೆ.

‘ಸಮತೋಲಿತ ತಂಡವನ್ನು ಕಣಕ್ಕೆ ಇಳಿಸುವುದು ನಮ್ಮ ಗುರಿ. ಇಬ್ಬರು ಸ್ಪಿನ್ನರ್ ಮತ್ತು ಮೂವರು ವೇಗಿಗಳ ಸಂಯೋಜನೆಯೊಂದಿಗೆ ಕಣಕ್ಕಿಳಿಯಬಹುದು. ನಮಗೆ ಬೇಕಾದರೆ ನಾಲ್ವರು ವೇಗಿಗಳನ್ನೂ ಆಡಿಸಬಹುದು. ಪರಿಸ್ಥಿತಿಗೆ ತಕ್ಕಂತೆ ತಂಡ ರಚಿಸಬಹುದು. ಆದರೆ ಹವಾಮಾನ ನಿಯಂತ್ರಣ ನಮ್ಮ ಕೈಯಲ್ಲಿ ಇಲ್ಲ’ ಎಂದು ದ್ರಾವಿಡ್ ಹೇಳಿದರು.



ಅಭ್ಯಾಸದಲ್ಲಿ ನಿರತವಾಗಿರುವ ಭಾರತ ತಂಡದ ನಾಯಕ ರೋಹಿತ್ ಶರ್ಮಾ, ಕೆ.ಎಲ್. ರಾಹುಲ್ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ –ಪಿಟಿಐ ಚಿತ್ರ

ರೋಹಿತ್ ಶರ್ಮಾ, ವಿರಾಟ್ ತಾಲೀಮು

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಬ್ಯಾಟರ್ ವಿರಾಟ್ ಕೊಹ್ಲಿ ಅವರು ಭಾನುವಾರ ಇಲ್ಲಿ ತಾಲೀಮು ನಡೆಸಿದರು.

ಹೋದ ತಿಂಗಳು ನಡೆದಿದ್ದ ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್ ನಂತರ ಅವರು ಯಾವುದೇ ಕ್ರಿಕೆಟ್ ಸರಣಿಯಲ್ಲಿಯೂ ಆಡಿರಲಿಲ್ಲ. ಆ ಸೋಲಿನ ಆಘಾತದಿಂದ ಅವರೀಗ ಹೊರಬಂದಿದ್ದು, ಅಭ್ಯಾಸದಲ್ಲಿ ಭಾಗವಹಿಸಿದ್ದರು.

ಕುಟುಂಬದೊಂದಿಗೆ ಸಣ್ಣ ಅವಧಿಯ ಪ್ರವಾಸಕ್ಕಾಗಿ ಲಂಡನ್‌ಗೆ ತೆರಳಿದ್ದ ವಿರಾಟ್ ಮತ್ತೆ ಸೆಂಚುರಿಯನ್‌ಗೆ ಮರಳಿದ್ದಾರೆ. ಇಲ್ಲಿ ಅವರು ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ನಡೆಸಿದರು. ರೋಹಿತ್ ಕೂಡ ಇನ್ನೊಂದು ನೆಟ್ಸ್‌ನಲ್ಲಿದ್ದರು.

ರೋಹಿತ್ ನಿರಾಳವಾಗಿದ್ದಂತೆ ಕಂಡರು. ಕಳೆದ ಮೂರು ವಾರಗಳಿಂದ ಅವರು ಎಲ್ಲಿಯೂ ಕಾಣಿಸಿಕೊಂಡಿರಲಿಲ್ಲ.

ಯುವ ಆಟಗಾರರಾದ ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್ ಕೂಡ ಅಭ್ಯಾಸದಲ್ಲಿ ನಿರತರಾಗಿದ್ದರು. ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಬೌಲಿಂಗ್ ಮತ್ತು ಬ್ಯಾಟಿಂಗ್ ಅಭ್ಯಾಸ ನಡೆಸಿದರು.